(Mr. SPEAKER)

Every time I dont't want such comments. I want no member to pass any commentary. If he wants to make any suggestion he must get up and be on his legs so that the House may receive it clearly. Otherwise our Reporters are not able to hear because they would not have switched on and then all kinds of trouble will arise.

I am passing on the suggestion to Government for consideration. I would certainly recommend that it may be done, but I do not think I have got the right to compel the Government.

ಶ್ರೀ ಕೆ. ಪಿ. ರೇವಣಸಿದ್ಧಪ್ಪ (ತಿಪಟೂರು).—ತಾವು ಮಾತನಾಡುತ್ತಿರುವಾಗ ಮಧ್ಯೆ ಮಧ್ಯೆ ಇನ್ನೊಬ್ಬರು ಏಳುವ ಹಾಗೆ ಇಲ್ಲ.

Mr. SPEAKER.—He is raising this after the Question Hour is over. What was he doing till then ?

ಶ್ರೀ ಕೆ. ಪಿ. ರೇವಣಸಿದ್ಧಪ್ಪ.—ಏಕೆಂದರೆ ಪ್ರಶ್ನೋತ್ತರ ವೇಳೆ ಬಹಳ ಮುಖ್ಯವಾದುದು. ಪ್ರತಿ ಸಾರಿಯೂ ಕೇಳುತ್ತಿದ್ದೇನೆ. ನನ್ನ ಪ್ರಶ್ನೆಗಳು ಜಾಗ್ರತ ಬರುವ ಹಾಗೆ ಮಾಡಬೇಕು.

Mr SPEAKER.—We shall see.

## Seating Arrangements.

Mr. SPEAKER.—With regard to seating arrangements, 10 members have joined the Congress Party and I believe according to the names given there are 9 members of the P.S.P. and consequential changes have to be made. I am giving directions for the changes. It will be put up on the Notice Board and I will lay it on the Table. If any member wants any minor adjustment that could be done. The principle which I have followed is this, the ruling party is the Congress Party plus 10 immediately adjoining seats to accommodate the 10 new members. When 10 new members change their seats, there will be 10 vacancies here. I am trying to organise Parties as compact blocks. The disturbance will be minimised. If there is any idea which any of the members want to suggest, with regard to this they may do so, by this evening.

## GENERAL DISCUSSION ON THE BUDGET FOR 1965-66.

Mr. SPEAKER.—Now the General Discussion on the Budget will go on for the rest of the day. Sri Sunthankar will continue and kindly finish his speech in 5 to 7 minutes.

Sri B. R. SUNTHANKAR (Belgaum City).—Mr. Speaker, yesterday evening I was referring to the wide disparities that are prevailing in every sphere in the State. I pointed out that there are marked differences districtwise in the *per capita* income. Ten districts are below the State average and that shows the extreme poverty in large parts of the State.

[Mr. DEPUTY SPEAKER in the Chair].

Similarly, in respect of backwardness also there are marked disparities between district and district. Bangalore Urban area is the only most advanced area and the other areas are far lagging behind.

Mr. DEPUTY SPEAKER.—Order, order. There is too much noise in the House.

Sri B. R. SUNTHANKAR.—There are varying degrees in the backwardness also. Sri M. B. Nanjappa has made a special study of backwardness in the State districtwise. He has adopted 15 criteria to determine backwardness and on the basis of those criteria he has formulated an order of ranking. It is found that the ranks vary widely between district and district and the range is from 86 to 220. Of all the areas Hyderabad Karnatak districts are most backward in all respects. The same story holds good in respect of literacy. Literacy also varies from district to district. The state average is 25.4 per cent but 11 districts are below the State average. Bidar stands lowest with 14.5 per cent, Gulbarga and Raichur 15 per cent and Coorg has the highest with 36.3 per cent. All other districts are varying in between. The Mandya district which is considered to be fairly developed has only 17.3 per cent. About the Social Services also there is marked difference. From district to district. As regards medical facilities there are wide disparities. In this respect the Hyderabad Karnatak districts stand to suffer most. In respect of hospitals Coorg has the highest number 26, Bangalore 22, South Kanara has 16 while Bidar has only 2, This inadequacy of medical facilities and also educational facilities in large areas of the State underlines the need for stepping up investment on social services. There is urgent need for extensive programmes in the backward areas in this respect. It is the same case of irrigation and power. I need not quote various figures. Now the question comes up, has the Government any plan or phased programme to remove these disparities ? What has the Government done for the last eight years to reduce inequalities and remove the disparities ? We have vast disparities between area and area. The budget does not show any effort on the part of the Government in that direction. The goal of the government and the planners should be to remove these disparities as far as possible and to provide minimum standard of living to the people of the different areas. With that objective the budget shou'd be formulated and worked out. The Government should in all earnestness take up the problem of balanced development of regional growth. That is one of the urgent needs of Mysore.

I will come to the third criteria of the budget, *i.e.*, unemployment. In regard to unemployment problem during the past years it has increased. This increase in unemployment is accelerated by the fast growing population. The Government has no definite programme to reduce it. The rapid industrial growth will give more scope for employment; but unfortunately that is not being done. The growth in the number of factories is not also satisfactory. The growth in the number

(Sri B. R. SUNTHANKAR)

of factories is only 5.5 per cent. During the last four years. But employment that has increased on account of this increase of 5.5 per cent in factories was only to the tune of 1.6 per cent. That means the rate of factory employment is much smaller than the rate of growth of factories. In the year 1960 the number of factories declined resulting in increased unemployment. Similarly in mining. In mining the number of workers employed has declined from 50,000 to 40,000. Taking the State as a whole the number of workers employed in the factories is very small. It comes to about 88,000 or 90,000. Out of 90,000 nearly 50 per cent are claimed by Bangalore City alone. That shows how backward industrially the State is. There is urgent need to develop industries at a faster rate. That will give more scope for employment. It has been said by the Finance Minister that the response from private enterprise is very poor. That is a fact and reasons must be found out as to why private enterprenuers are not coming forward when there are so much potentialities of industrial growth. Why are they not coming forth ? The reasons for that should be investigated and more encouragement and facilities should be given for the private enterprice.

In respect of small scale industries the same story holds good ; the progress is slow. Out of planned outlay of 245 lakhs in the Third Plan only 56 lakhs were spent in the first three years. That is very poor and unsatisfactory record. Similarly the progress of industries is slow. The Study Team has made valuable recommendations for growth of small scale industries in the State. These should be implemented immediately, particularly their two recommendations which are very important. One is to start 10 industrial areas in the State and another is liberalisation of state Industries Aid Act. These recommendations should be implemented by the Government immediately. The best way is to set up rural industries is to start processing industries; because processing industries are industries which link us agriculture with industries. These processing industries are of more significance in the rural areas. for instance, processing industry of sugar factory. We have started sugar factories and they are showing good results and three sugar factories in the co-operative field are to be started. For the last two years it is said that these factories would be started but not as yet started. Government should see that in the comming years all these three sugar factories are started and begin production. Similarly there is vast scope in the field of processing industries in respect of fish, milk, fruits, timber and various other forest products. If processing industries in rural areas are started that will pave way for rural industrialisation in the State. Government should prepare a plan for such processing industries and implement them. So much money is spent every year and the question remains whether that money is properly utilised and whether there is maximum utility of the expenditure. I would like to quote from the Book " Theory and Practice of

Union Finance in India" where Sri Bharghava has given the principle of public expenditure. He says "the principle of public expenditure is the principle of maximum aggregate benefit which in otherwords is the principle of equal marginal social benefits." Further he says the resources should be so distributed that the marginal return of satisfaction is the same for all. So the expenditure should be so made that the people will get the maximum benefit-that means expenditure should be incurred in such a way that will secure the maximum utility to the people. If we apply this principle to our State, what is the picture? There has been too much expenditure; but as has been already stated by the Hon'ble Finance Minister in his speech, the achievement is not commensurate with the expenditure Achievements in a number in our plans and programmes are far lagging behind as compared with the expenditure. Sir, I will take the example of irrigation. There is vast irrigation potential in the State. But what is the utilisation? The irrigation potential has not been fully utilised. Mysore State is one of the States in India which is utilising less than 8% of the irrigation potential. If we take the figures for III Plan given to us, the irrigation potential created is 6·82 lakhs acres, but out of that only 4·58 lakh acres were utilised-that means 1/3 still remained to be utilised.

SRI G. V. GOWDA.—How does the Hon'ble member say that irrigation potential is not utilised?

SRI B. R. SUNTHANKAR.—I quote an example for the benefit of my friend Sri Venkate Gowda. Under the Thungabhadra Project, in Hyderabad Karnataka, Irrigation potential was created. It has not been utilised to the maximum. Vast amounts have been spent on Irrigation. If the irrigation potential is not utilised that is a waste. Similarly about the Electricity and Irrigation schemes. According to the picture of Mysore State Budget that is given to us, Sir, returns from expenditure and investments from these irrigation and electricity schemes are very poor and they are declining from 1·44 per cent to 1·11 per cent. I can give the percentage of returns from the various schemes of irrigation. Sir, similarly taxation. Taxation has been very heavy. Taxation has grown very much during the last five years. The *per capita* taxation of Rs. 14, five years back has been raised to Rs. 22, *i.e.*, 52 per cent increase in the *per capita* taxation. If you compare this taxation with the *per capita* income, the *per capita* income has increased only by 24%. I am quoting these from the figures of the picture of the Budget. Similarly, *per capita* expenditure has increased by 52%. What is the result? The result is stagnation. The result is increasing of unemployment. The result is growing inequalities and disparties. I know our Finance Minister is a practical and realistic man, but I regret to say his speech is unrealistic. With these words I close down.

†ಶ್ರೀ ಕೆ. ಪಿ. ಗದಗ್ (ಗದಗ್).—ಅಧ್ಯಕ್ಷರೆ, ನಮ್ಮ ಮುಂದೆ ಈಗ ಮಂಡಿಸಿದ 1965-66 ನೆಯ ಆಯವ್ಯಯಗಳನ್ನು ನಾನು ಸ್ವಾಗತಿಸುತ್ತೇನೆ. ಈ ಅಂದಾಜುಗಳನ್ನು ಸ್ವಾಗತಿಸಲು ಮುಖ್ಯ ಕಾರಣವು ನಮ್ಮ ದೇಶದಲ್ಲಿ ಜೀವನದ ವೆಚ್ಚ ಹೆಚ್ಚುತ್ತಾ ಬರುತ್ತದೆ. ಜನರಲ್ಲಿ ಅತೃಪ್ತಿ,

(ಶ್ರೀ ಕೆ. ಪಿ. ಗದಗ್)

ಅಸಮಾಧಾನ, ಒಂದು ರೀತಿಯ ವ್ಯಸನ ಬರಲಿಕ್ಕೆ ಹತ್ತಿದೆ. ಅವರ ಬಜೆಟ್ ಭಾಷಣದಲ್ಲಿ ಮಾನ್ಯ ಅರ್ಥ ಸಚಿವರು ಜನಜೀವನದ ವೆಚ್ಚವನ್ನು ತಡೆಗಟ್ಟುವ ಬಗ್ಗೆ ಒಂದು ಭಾಷೆಯನ್ನು ಕೊಟ್ಟುದರಿಂದಲೇ, ನಾನು ಈ ಸಾಲಿನ ಆಯವ್ಯಯವನ್ನು ಸ್ವಾಗತಿಸಬಯಸುತ್ತೇನೆ. ಅವರ ಭರವಸೆ ' ಏನು ಅನ್ನುವುದನ್ನು ಮಾನ್ಯ ಸಭೆಯ ಮುಂದೆ ತರಬಯಸುತ್ತೇನೆ.

"But what one has to be careful about is that the investments should be able to give back returns direct and indirect as early as possible and the Plan Investment should not generate rise in prices leading to the distress of the common man".

ಇನ್ನೊಂದು ಇದೇ ಸಂದರ್ಭದಲ್ಲಿದೆ. ಅದನ್ನೂ ಓದಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

"It is obvious that if Government which invests money does not get back returns in stages, either by taxes or otherwise, then it is no more than bleeding the Treasury and landing ourselves in trouble".

ಅವರ ಈ ಒಂದು ಭರವಸೆಯ ಮೂಲಕ ನಾನು ಈ ಬಜೆಟ್ಟನ್ನು ಅನುಮೋದಿಸಬೇಕಾಗಿದೆ. ಸಾಧಾರಣವಾಗಿ ತಮಗೆಲ್ಲರಿಗೂ ಗೊತ್ತಿದೆ. ಅಭ್ಯುದಯದ ಸಲುವಾಗಿ, ಪ್ರಗತಿಯ ಸಲುವಾಗಿ, ದೇಶದಲ್ಲಿ ಯಾವ ಯಾವ ಯೋಜನೆಗಳನ್ನು ಕೈಗೊಂಡಿದ್ದಾರೆ ಅನ್ನುವುದನ್ನು ಅನೇಕ ಕಡೆ ಮಾನ್ಯ ಸಭೆಯ ಮುಂದೆ ಅನೇಕ ಸಲ ಹೇಳಿದ್ದೇವೆ. ಈ ಯೋಜನೆಗಳಿಗೆ ಎಷ್ಟು ಸಾವಿರ ಕೋಟಿ ವ್ಯಯವಾಗಿದೆ ಅನ್ನುವುದರ ಬಗ್ಗೆ ಅಂಕಿ ಸಂಖ್ಯೆ ಕೊಡುವುದು ಈ ಸಂದರ್ಭದಲ್ಲಿ ಅಷ್ಟು ಸೂಕ್ತ ಕಾಣುವುದಿಲ್ಲ. ಆದರೆ ಇಷ್ಟು ಯೋಜನೆಗಳು ಆದಾಗ್ಯೂ, ಇಷ್ಟು ವ್ಯಯ ಆದಾಗ್ಯೂ, ಜನತೆಯಲ್ಲಿ ಅತೃಪ್ತಿ, ಅಸಮಾಧಾನ, ಜೀವನದ ವೆಚ್ಚ ಹೆಚ್ಚುತ್ತಿರುವುದರಿಂದ, ಜಾಸ್ತಿಯಾಗುತ್ತಿದೆ. ಈ ದೇಶದಲ್ಲಿ ಈ ಸಮಸ್ಯೆಗಿಂತ ಪ್ರಾಮುಖ್ಯವಾದ ಸಮಸ್ಯೆ, ಮಹತ್ವವಾದ ಸಮಸ್ಯೆ ಇವತ್ತಿನ ದಿವಸ ಮತ್ತಾವುದೂ ಇಲ್ಲ. ಈ ಸಮಸ್ಯೆ ಪರಿಹಾರದ ಬಗ್ಗೆ ಪ್ಲಾನಿಂಗ್ ಕಮಿಷನ್ನಿಗಾಗಲಿ, ಕೇಂದ್ರ ಸರಕಾರಕ್ಕಾಗಲಿ, ಸರಿಯಾದ ಒಂದು ವಿಚಾರ ಮಾಡಿ ಸೂಕ್ತ ಸಲಹೆಗಳನ್ನು ಮಾಡುವುದು ಅತ್ಯವಶ್ಯ ಇದೆ. ಇದಕ್ಕಿಂತ ಹೆಚ್ಚಿನ ಕೆಲಸವಿಲ್ಲವೆಂತ ಸರ್ವರಿಗೂ ತಿಳಿದ ವಿಷಯ. ಆದರೆ ಇದಕ್ಕೆ ಯಾರು ಗಮನ ಕೊಡಬೇಕು ಎನ್ನುವುದರ ಬಗ್ಗೆ ಸೂಕ್ತ ಸಲಹೆಗಳನ್ನು ಕೊಟ್ಟು ಅದನ್ನು ಕಾರ್ಯಗತ ಮಾಡಲು ಇಲ್ಲಿಯವರೆಗೂ ಯಾವ ಪ್ರಗತಿಯೂ ದೊರಕದೇ ಇರುವುದನ್ನು ನೋಡಿದರೆ ಅದು ತುಂಬಾ ವಿಷಾದದ ಸಂಗತಿ ಎಂದು ನಾನು ಇಲ್ಲಿ ಹೇಳಬಯಸುತ್ತೇನೆ.

2-30 P.M.

ಇನ್ನು ಇವುಗಳ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡುತ್ತಾ ನಾನು ಯಾವ ವಿಚಾರಗಳನ್ನು ಇಲ್ಲಿ ಹೇಳಬೇಕೆಂದಿದ್ದೇನೆ ಎಂದರೆ, ಸ್ವಲ್ಪ ಮಟ್ಟಿಗೆ ಆಹಾರ ಸಮಸ್ಯೆ, ವ್ಯವಸಾಯ ಮತ್ತು ಇತರ ಉದ್ಯಮಗಳು ಮತ್ತು ಆಡಳಿತದ ಬಗ್ಗೆ ಕೆಲವು ನನ್ನ ಸಲಹಾ ಸೂಚನೆಗಳನ್ನು ಮಾತ್ರ ಇಲ್ಲಿ ಹೇಳಬಯಸುತ್ತೇನೆ. ಆದರೆ ಇವುಗಳ ಬಗ್ಗೆ ಈಗಾಗಲೇ ಅನೇಕ ಮಾನ್ಯ ಸದಸ್ಯರುಗಳು ಅವರ ಸಲಹೆ ಹಾಗೂ ಸೂಚನೆಗಳನ್ನೂ ಕೊಟ್ಟಿದ್ದಾರೆ. ಗತ್ಯಂತರವಿಲ್ಲದೆ ನಾನೂ ಕೆಲವು ಸೂಚನೆಗಳನ್ನು ಓವರು ಡೋಜು ಆದರೂ ಇಲ್ಲಿ ಕೊಡಲೇಬೇಕಾಗಿ ಬಂದಿದೆ. ಮೊದಲಿಗೆ ನಾನು ಆಹಾರದ ಸಮಸ್ಯೆ ಬಗ್ಗೆ ಹೇಳಬೇಕಾಗಿದೆ. ಆಹಾರ ಸಮಸ್ಯೆಯ ಪರಿಹಾರದ ಬಗ್ಗೆ ಯಾವ ದಕ್ಷತೆಯಿಂದ ಯಾವ ಕಾಲದಲ್ಲಿ ಸರಕಾರವು ಕಾರ್ಯ ಮಾಡಬೇಕಾಗಿತ್ತು ಆ ಕಾರ್ಯ ಸರಕಾರ ಮಾಡಲಿಲ್ಲ ಮತ್ತು ಮುಂದೆಯೂ ಮಾಡುತ್ತಾರೆ ಎನ್ನುವುದೂ ಕಾಣುತ್ತಿಲ್ಲ. ಹಾಗೆ ನಾನು ಇಲ್ಲಿ ಹೇಳಲಿಕ್ಕೆ ಕೆಲವು ಕಾರಣಗಳಿವೆ. ಕಾರಣಗಳಿಲ್ಲದೆ. ನಾನು ಯಾವಾಗಲೂ ಇಲ್ಲಿ ವ್ಯಕ್ತ ಮಾಡುವುದಿಲ್ಲ. ಕೇಂದ್ರ ಸರಕಾರದವರು ಆಹಾರದ ಅಭಾವದ ಪರಿಸ್ಥಿತಿ ಇದೆ ಎಂದು ತಿಳಿದ ಕೂಡಲೇ ಅವರು ಫುಡ್‌ಗ್ರೇನ್ ಲೈಸೆನ್ಸಿಂಗ್ ಆರ್ಡರು ಎಂದು ಒಂದು ಆಜ್ಞೆಯನ್ನು ಹೊರಡಿಸಿದರು. ಅದನ್ನು ಜಾರಿ ಮಾಡಬೇಕೆಂದು ಎಲ್ಲ ಪ್ರಾಂತ ಸರಕಾರಗಳಿಗೂ ಆದೇಶ ಕೊಟ್ಟಂತೆ ನಮ್ಮ ಸರಕಾರಕ್ಕೂ ಕಳುಹಿಸಿ ಕೊಟ್ಟರು. ಅದನ್ನು ಇಲ್ಲಿ ಎಷ್ಟು ಮಟ್ಟಿಗೆ ಕೊಟ್ಟರು ಎಂದರೆ ಈ ಲೈಸೆನ್ಸಿಂಗ್ ಆರ್ಡರನ್ನು ಎಷ್ಟು ಬಿಗಿಯಾಗಿ ಜಾರಿಗೆ ಕೊಡಬೇಕಾಗಿತ್ತೋ ಅಷ್ಟು ಮಾಡದೇ ಹೋದುದರಿಂದವಾಗಿ ಆಹಾರ ಧಾನ್ಯಗಳೆಲ್ಲಾ ಅಂಡರ್‌ಗ್ರೌಂಡ್‌ಗೆ ಈಗ ಹೋದ ಹಾಗೆ ಹೋಗುತ್ತಿರಲಿಲ್ಲ. ಇವರುಗಳು ಆಕ್ಟ್‌ಕೊಡುವಾಗ ಬಹಳ ಶಿಥಿಲ

ವಾದ ಒಂದು ನೀತಿಯನ್ನು ಅನುಸರಿಸಿದುದರಿಂದಾಗಿ ಎಷ್ಟೋ ಆಹಾರ ಧಾನ್ಯಗಳು ಅಂಡರ್ ಗ್ರೌಂಡ್‌ಗೆ ಹೋಗಲಿಕ್ಕೆ ಅವಕಾಶವಾಯಿತು. ಏಕೆ ಹೀಗೆ ಮಾಡಿದರಿ ಎಂದು ಇಲ್ಲ ಕೇಳಿದರೆ ಇದು ವರೆಗೂ ಸರಕಾರದ ಕಡೆಯಿಂದ ಸಮರ್ಪಕವಾದ ಯಾವುದೇ ಉತ್ತರ ಕೂಡ ಇಲ್ಲ. ಈ ಲೈಸೆನ್ಸಿಂಗ್ ಆರ್ಡರು ಇದೆಯೋ ಅಥವಾ ಯಾವ ಸ್ವರೂಪದಲ್ಲಿದೆಯೋ ನನಗಂತೂ ತಿಳಿಯಲೊಲ್ಲದು. ಈ ಲೈಸೆನ್ಸಿಂಗ್ ಆರ್ಡರು ಇದೆ ಇನ್ನೂ ಇದೆ ಎಂದು ನನ್ನ ಅಭಿಪ್ರಾಯ. ಮುಂದೆ ಆಹಾರ ಧಾನ್ಯ ಗಳನ್ನು ಸರ್‌ಪ್ಲಸ್ಸು ಸ್ಟೇಟುಗಳಿಂದ ತರಿಸಿ ಎಲ್ಲ ಪ್ರಾಂತಗಳಿಗೂ ಹಂಚುತ್ತಾರೆಂದು ಕೇಂದ್ರ ಸರ ಕಾರದವರು. ಹೇಳಿದರು. ಆದರೆ ಈ ದೇಶದಲ್ಲಿ ಎಲ್ಲಿಯೂ ಆ ರೀತಿ ಬರಲೇ ಇಲ್ಲ. ಆಮೇಲೆ ಪರಿಸ್ಥಿತಿ ಏನಾಯಿತು ಎನ್ನುವುದು ಎಲ್ಲರಿಗೂ ಗೊತ್ತೇ ಇದೆ. ಮತ್ತು ಅದರ ಬಗ್ಗೆ ಇಲ್ಲಿ ಚರ್ಚೆಯೂ ಆಗಿದೆ. ಆದರೆ ಪರಿಸ್ಥಿತಿ ವಿಕೋಪಕ್ಕೆ ಹೋಯಿತು ಮತ್ತು ಆಹಾರ ಧಾನ್ಯಗಳು ಮಾರ್ಕೆಟ್ಟಿನಲ್ಲಿ ಸಿಗದಂತಹ ಪರಿಸ್ಥಿತಿ ಈಗ ಬಂದಿದೆ. ಇದರಲ್ಲಿ ಕೆಲವರು ಸೇರಿಕೊಂಡು ಒಂದು ಕೋ ಆಪರೇಟೀವ್ ಸೊಸೈಟಿ ಎಂದು ಮಾಡಿಕೊಂಡು ಆಹಾರ ಧಾನ್ಯಗಳನ್ನು ಸ್ಟೋರು ಮಾಡಲು ಗೋಡೌನುಗಳನ್ನು ಮಾಡಿಕೊಂಡು ಬೇರೆ ಕಡೆಯಲ್ಲಿರುವ ಗೋಡೌನಿನಿಂದ ಆಹಾರ ಧಾನ್ಯಗಳನ್ನು ತರಲಿಕ್ಕೆ ಹೋದಾಗ ಅಲ್ಲಿ ಎಂಟೆಂಟು ದಿನಗಳು ನಿಲ್ಲಬೇಕಾದ ಪರಿಸ್ಥಿತಿ ಬಂತು. ಅಲ್ಲದೆ ಇದರಲ್ಲಿ ಇನ್ನೂ ಒಂದು ಪರಿಸ್ಥಿತಿ ಉದ್ಭವವಾದುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ದವಸವನ್ನು ತರಲು ಟ್ರಕ್ಕು ತೆಗೆದು ಕೊಂಡು ಅಲ್ಲಿ ಹಣವನ್ನು ಕಟ್ಟಿಬಂದು ಆಹಾರ ಧಾನ್ಯಗಳನ್ನು ತರಲು ಹೋದಾಗ ಅವಾಗ ಆಹಾರ ಧಾನ್ಯವೂ ಸಿಗಲಿಲ್ಲ. ಇಲ್ಲಿಯವರೆಗೂ ಅವರುಗಳು ಡಿಪಾಸಿಟ್ಟಾಗಿ ಕೊಟ್ಟ ಹಣವನ್ನು ಅವರಿಗೆ ವಾಪಸು ಕೊಡಲಿಲ್ಲ. ಈಗ್ಗೆ ಎರಡು ತಿಂಗಳಿಗಿಂತ ಹಿಂದಿನವರೆಗೆ ಕೊಟ್ಟಿರಲಿಲ್ಲ. ಆದರೆ ಈಗೇ ನಾದರೂ ಕೊಟ್ಟರೋ ಏನೋ ನನಗೆ ಇದುವರೆಗೆ ತಿಳಿದಿಲ್ಲ. ಸರಕಾರದವರು ಇಷ್ಟೆಲ್ಲಾ ಜನತೆಯ ಕೆಲಸ ಕಾರ್ಯಗಳು ಎಂದು ಜನ ಟ್ರಕ್ಕು ತೆಗೆದುಕೊಂಡು ಗೋಡೌನು ಮುಂದೆ ಹೋಗಿ ಎಂಟು ದಿನಗಳ ಕಾಲ ನಿಂತರೂ ಅವರಿಗೆ ದವಸ ಸಿಗಲಿಲ್ಲ ಮತ್ತು ಅವರು ಕೊಟ್ಟ ಹಣವನ್ನೂ ವಾಪಸು ಕೊಡಲಿಲ್ಲ. ಇಂತಹ ವಿಚಾರದಲ್ಲಿ ಯಾವ ದಕ್ಷತೆಯಿಂದ ಸರಕಾರ ಕೆಲಸ ಮಾಡಬೇಕೋ ಅಂತಹ ದಕ್ಷತೆಯಿಂದ ಸರಕಾರ ಕೆಲಸ ಮಾಡಲಿಲ್ಲ ಎಂದು ಇಲ್ಲಿ ವಿಷಾದದಿಂದ ಹೇಳಬೇಕಾಗಿದೆ. ನಾನು ಇದನ್ನು ಇಲ್ಲಿ ಬಹಳ ಸಂಕಟದಿಂದ ಹೇಳಬೇಕಾಗಿದೆ. ಇದು ಬಹಳ ಕಠಿನತರವಾದ ಸಮಸ್ಯೆ. ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ಪರಿಹಾರ ಮಾಡಬೇಕಾದರೆ ಸರಿಯಾದ ಕ್ರಮವನ್ನು ತೆಗೆದು ಕೊಳ್ಳಬೇಕಾಗಿತ್ತು ಎಂದು ಹೇಳಲಿಕ್ಕೆ ಹೊರಟಿದ್ದೇನೆಯೇ ಹೊರತು ಯಾರನ್ನೂ ಟೀಕೆ ಮಾಡಬೇಕು ಎಂದು ಇಲ್ಲಿ ನಾನು ಹೇಳುತ್ತಿಲ್ಲ. ಇದನ್ನು ಇನ್ನೂ ಹಾಗೆಯೇ ಸುಮ್ಮನೆ ಬಿಟ್ಟರೆ, ಈ ಸಮಸ್ಯೆಯ ಬಗ್ಗೆ ಇನ್ನೂ ದಕ್ಷತೆಯಿಂದ ಕೆಲಸ ನಡೆಯದೇ ಇದ್ದರೆ ಮುಂದೆ ಇದಕ್ಕಿಂತ ಗಂಭೀರ ಪರಿಸ್ಥಿತಿ ಬರು ತ್ತದೆ, ಅದನ್ನು ಈಗಿನಿಂದಲೇ ಪ್ರಯತ್ನಪಟ್ಟು ತಪ್ಪಿಸಬೇಕು. ಇನ್ನೂ ಮುಂದೆ ನಮ್ಮ ಫೈನಾನ್ಸ್ ಮಿನಿಸ್ಟರವರು ಅವರ ಭಾಷಣದಲ್ಲಿ ಒಂದು ಸಂಗತಿ ಹೇಳಿದ್ದಾರೆ. ಅದು ಪುಟ 5 ರಲ್ಲಿದೆ.

> "As I have explained earlier, Government have taken necessary steps to control prices of foodgrains and build up buffer stocks......"

ಎಂದು, ಸ್ವಾಮೀ, ಈಗ ನಾನು ಹೇಳುವುದು, ಇಲ್ಲೇನಾಗಿದೆ ಎಂದರೆ, ಪ್ರೈಸಸ್‌ಕಂಟ್ರೋಲು ಮಾಡಿದರೆ ಎಲ್ಲ ದವಸ ಧಾನ್ಯಗಳು ಸರಿಯಾಗಿ ಸರಕಾರದ ಕಡೆಯಿಂದ ಸಿಗುತ್ತದೆ ಎಂದು ಇದ್ದರೂ ಆ ರೀತಿ ಆಗಿಲ್ಲ. ಇನ್ನೂ ಧಾರಣೆಗಳು ಕಡಿಮೆಯಾಗುವುದಕ್ಕೆ ಎಷ್ಟುಮಟ್ಟಿಗೆ ಹೊರಗಿನಿಂದ ಫುಡ್ ಗ್ರೇನ್ಸ್ ಬರಬೇಕೋ ಅಷ್ಟು ಬಂದಿದ್ದರೆ ಸ್ವಲ್ಪವಾದರೂ ಅನುಕೂಲವಾಗುತ್ತಿತ್ತು, ಹಾಗೆ ಬರಲಿಲ್ಲ ಸರಕಾರದವರು ದಕ್ಷತೆಯಿಂದ ಕೆಲವು ಧಾನ್ಯಗಳ ಬೆಲೆಗಳನ್ನು ಕಡಿಮೆ ಮಾಡಬೇಕೆಂದು ಮಾಡಿದರೂ ಅದರಿಂದ ಜನಕ್ಕೆ ಅನುಕೂಲವಾಗುವ ಬದಲು ಪ್ರತಿಕೂಲವೇ ಆಗುತ್ತ ಬರುತ್ತಿದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಬಫರು ಸ್ಟಾಕ್ಸುಗಳನ್ನು ಮಾಡುತ್ತೇವೆಂದು ಹೇಳಿ ದ್ದಾರೆ. ಇದನ್ನು ಯಾವ ಯಾವ ಭಾಗದಲ್ಲಿ ಮಾಡಬೇಕು ಎಂದರೆ, ಕೂಲಿಕಾರರು ಹಾಗೂ ಯಾರಿಗೆ ಭೂಮಿ ಇರುವುದಿಲ್ಲವೋ ಅಂತಹ ಜನಕ್ಕೆ ಮತ್ತು ಮಧ್ಯಮ ತರಗತಿಯ ಜನರ ಅನುಕೂಲಕ್ಕಾಗಿ ಎಂದರೆ ಪಟ್ಟಣಗಳಲ್ಲಿರುವ ಜನಕ್ಕೆ ಇದು ಶೇಕಡಾ 20-25ರಷ್ಟು ಭಾಗ ಸಿಗುತ್ತದೆಯೇ ಹೊರತು ಬೆಂಗಳೂರು ಬಿಟ್ಟು ಹೊರಗೆ ಒಂದು ಕಾಳೂ ದವಸ ಜನಕ್ಕೆ ಸಿಗತ್ತಿಲ್ಲ ಮತ್ತು ನನಗೆ ತಿಳಿದಂತೆ ಇದರ ವ್ಯವಸ್ಥೆ ಬೇರೆ ಕಡೆಗಳಲ್ಲಿ ಇಲ್ಲ. ಸಂಪೂರ್ಣವಾಗಿ ಈ ಚಿತ್ರವನ್ನು ನಮ್ಮ ಕಣ್ಣ ಮುಂದೆ ತೆಗೆದುಕೊಂಡರೆ ಯಾವ ಯಾವ ಯೋಜನೆ ಗಳಿವೆ ಏನೇನು ಪ್ರಗತಿಯಾಗಿದೆ, ಸರ್ಕಾರ ಏನು ಮಾಡಿದೆ ಎನ್ನುವುದನ್ನು ದೀರ್ಘವಾಗಿ ಆಳವಾಗಿ ವಿಚಾರ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಪೂರ್ವಕ ಕೇಳಿಕೊಳ್ಳುತ್ತೇನೆ.

(ಶ್ರೀ ಕೆ. ಪಿ. ಗದಗ್)

ಈಗಾಗಲೇ ಅನೇಕ ಮಾನ್ಯ ಸದಸ್ಯರು ಮಾತನಾಡಿ ಅನೇಕ ಸಂಗತಿಗಳನ್ನು ಹೇಳಿದ್ದಾರೆ. ನಮ್ಮ ದೇಶದಲ್ಲಿ ವ್ಯವಸಾಯ ಸುಧಾರಣೆಯಾಗಬೇಕಾಗಿದೆ. ಮುಖ್ಯವಾಗಿ ವ್ಯವಸಾಯ ಸುಧಾರಣೆ ಸುಪ್ತಾವಸ್ಥೆಯಲ್ಲಿವೆ. ಸರ್ಕಾರ ದೇಶದಲ್ಲಿ ಅನೇಕ ಯೋಜನೆಗಳನ್ನು ಮಾಡಿದ್ದಾರೆ. ಆದರೆ ಉತ್ಪತ್ತಿ ಹೆಚ್ಚಾಗಿಲ್ಲ. ಪ್ರೊಡಕ್ಷನ್ ಹೆಚ್ಚಾಗಿಲ್ಲ. ಇದು ಅಂಕಿ ಅಂಶಗಳಿಂದ ಸಿದ್ಧವಾಗುತ್ತದೆ. ಫರ್ಟಿಲೈಜರ್ಸ್ ಬಗ್ಗೆ ಒಂದು ರಿಜರ್ವ್ ಇಲ್ಲ. ಫರ್ಟಿಲೈಜರ್ಸ್ ಒದಗಿಸುವುದಕ್ಕೆ ಗಮನ ಕೊಡಬೇಕು. ಈ ಇಲಾಖೆಯಲ್ಲಿ ರೀಸರ್ಚ್ ನಡೆಯುತ್ತಿಲ್ಲ. ಆಹಾರ ಧಾನ್ಯ ಉತ್ಪತ್ತಿ ಹೆಚ್ಚಿಸುವುದಕ್ಕೆ ರೀಸರ್ಚ್ ನಡೆಯಬೇಕು. ಆದರೆ ಅದಕ್ಕೆ ಬೇಕಾದಂಥ ಎಕ್ವಿಪ್‌ಮೆಂಟ್ ಇಲ್ಲ, ಪರ್ಸೋನೆಲ್ ಇಲ್ಲ ಎಂದು ಹೇಳಬಯಸುತ್ತೇನೆ. ರೀಸರ್ಚ್ ಕೆಲಸ ನಡೆದಿದೆ ಎಂದು ಸುಮ್ಮನೆ ಭಾಷಣದಲ್ಲಿ ಹೇಳಿದ್ದಾರೆ. ಈ ವಿಚಾರದಲ್ಲಿ ಭಾಷಣದ ಎರಡನೇ ಭಾಗದಲ್ಲಿ ಸ್ವಲ್ಪ ವಿವರಣೆ ಇದೆ. ರಿಸರ್ಚ್‌ನಲ್ಲಿ ಕಂಡುಹಿಡಿದ ಉತ್ತಮ ತರಗತಿಯ ಜೋಳದ ಬೀಜ ಎಷ್ಟು ಎಕರೆ ಭೂಮಿಗೆ ಸಾಕಾಗುತ್ತದೆ? ಎಷ್ಟು ಎಕರೆಯಲ್ಲಿ ಸುಧಾರಿತ ಬೀಜದಿಂದ ಎಷ್ಟು ಬೆಳೆ ಬಂದಿದೆ? ಇದರ ವಿವರಣೆ ಯಾವುದೂ ಇಲ್ಲ. ರಿಸರ್ಚಿಗೆ ಪ್ರಾಧಾನ್ಯತೆ ಕೊಡದೆ ಈ ಕೆಲಸ ಆಗುವುದಿಲ್ಲ. ಈ ಕಾರ್ಯಕ್ಕೆ ಉಚ್ಚ ಮಟ್ಟದಲ್ಲಿ ಬೇರೆ ಪ್ರಾಂತ್ಯದಲ್ಲಿ ಪ್ರಾಧಾನ್ಯತೆ ಕೊಟ್ಟಿದ್ದಾರೆ. ಗುಜರಾತ ರಾಜ್ಯದ ಸೂರತ್‌ನಲ್ಲಿ ಕಾಟನ್ ರಿಸರ್ಚ್ ಸೆಂಟರ್ ಇದೆ. ಅಲ್ಲಿ ಅವರು ಯಾವ ರೀತಿ ರಿಸರ್ಚ್ ಕೆಲಸ ಮಾಡುತ್ತಾರೆ, ಅದನ್ನು ಹೇಗೆ ಉಪಯೋಗಿಸಿಕೊಳ್ಳುತ್ತಾರೆ ಎನ್ನುವುದನ್ನು ಅಲ್ಲಿಗೆ ಹೋಗಿ ನೋಡಿಕೊಂಡು ಬರಬೇಕು ಎಂದು ಈ ಮೂಲಕ ಹೇಳಲು ಬಯಸುತ್ತೇನೆ. ನಾನು ಎಸ್ಟಿಮೇಟ್ ಕಮಿಟಿ ಸದಸ್ಯನಾಗಿದ್ದಾಗ ಸುಧಾರಿಸಿದ ಬೀಜದ ಬಗ್ಗೆ ನಡೆದ ರೀಸರ್ಚ್ ವಿಷಯವನ್ನು ಅಂಥ ರೀಸರ್ಚ್ ಸೆಂಟರಿಗೆ ಹೋದಾಗ್ಗೆ ತಿಳಿದುಕೊಂಡಿದ್ದೇನೆ. ಕಾರ್ಯರೂಪದಲ್ಲಿ ಕೆಲಸ ಆಗಿಲ್ಲ. ಕಾಗದದ ಮೇಲೆ ಬೇಕಾದಷ್ಟು ಬರೆಯುತ್ತಾರೆ. ಸುಧಾರಿತ ಬೀಜದಿಂದ ಬೆಳೆದದ್ದನ್ನು ರೈತ ರಿಜಿಸ್ಟರ್ಡ್ ಸೀಡ್ ಗ್ರೋಯರ್ಸ್ ಸೊಸೈಟಿಗೆ ಕೊಡಬೇಕು ಅವರು ಜನರಿಗೆ ಹಂಚಬೇಕು ಎಂದು ಇದೆ. ಆದರೆ ನಾನು ಇಷ್ಟು ಕೇಳುತ್ತೇನೆ. ಈ ಸ್ಕೀಂ ಪ್ರಕಾರ ಇದು ಕಾರ್ಯಗತವಾಗಿದೆಯೇ? ಯಾವ ಪ್ರಮಾಣದಲ್ಲಿ ಎಷ್ಟೆಷ್ಟು ಕಾರ್ಯಗತವಾಗಿದೆ? ಎಷ್ಟು ಸುಧಾರಿತ ಬೀಜ ಒದಗಿಸಿದಾರೆ? ನಿಜವಾಗಿ ಸರಿಯಾದ ರೀತಿಯಲ್ಲಿ ಕೆಲಸ ನಡೆದಿಲ್ಲ. ಇದು ಸದುಪಯೋಗವಾಗಬೇಕೆಂಬ ಉದ್ದೇಶದಿಂದ ಕಳಕಳಿಯಿಂದ ಕೇಳುತ್ತೇನೆ. ರಿಜಿಸ್ಟರ್ಡ್ ಗ್ರೋಯರ್ ಅವರಿಗೆ ಕೊಡತಕ್ಕಂಥ ಸಬ್‌ಸಿಡಿ ಬಹುಮಟ್ಟಿಗೆ ದುರುಪಯೋಗವಾಗಿದೆ. ಇದನ್ನು ತಿಳಿದುಕೊಂಡು ಸರಿಯಾಗಿ ಮಾಡಬೇಕೆಂದು ಹೇಳುತ್ತೇನೆ. ಇದರಲ್ಲಿ ಲೋಪದೋಷಗಳು ಅನೇಕ ಇವೆ. ಇವುಗಳನ್ನು ಸರಿಪಡಿಸಬೇಕು. ಹಣ ಅಪವ್ಯಯವಾಗದಂತೆ ನೋಡಿಕೊಳ್ಳಬೇಕಾದುದು ಅಗತ್ಯ. ನಮ್ಮ ದೇಶದಲ್ಲಿಯ ಯೋಜನೆಗಳು ಮುಖ್ಯವಾಗಿ ವ್ಯವಸಾಯ ಅಭಿವೃದ್ಧಿಯ ಮೇಲೆ ಅವಲಂಬಿಸಿದೆ. ವ್ಯವಸಾಯ ಇಲಾಖೆ ಸರಿಯಾಗಿ ನಡೆಯದೇ ಇದ್ದರೆ ಯೋಜನೆಗಳು ಯಶಸ್ವಿಯಾಗುವುದಿಲ್ಲ. ಆದುದರಿಂದ ಒಕ್ಕಲತನ ಉದ್ಯಮ ಇವುಗಳ ಅಭಿವೃದ್ಧಿಗೆ ಸೂಕ್ತ ಗಮನ ಕೊಡಬೇಕು.

ಇನ್ನೊಂದು ಸಂಗತಿಯ ಬಗ್ಗೆ ಹೇಳಬೇಕಾಗಿದೆ. ಈ ವ್ಯವಸಾಯ ಇಲಾಖೆಯಲ್ಲಿ ಇರತಕ್ಕವರಲ್ಲಿ ಮೂರನೇ ಎರಡು ಭಾಗ ನೌಕರರಿಗೆ ಪ್ರಮೋಷನ್ ಕೊಡಬೇಕು ಎಂದು ಸ್ಪಷ್ಟವಾದ ರೂಲ್ಸ್ ಇವೆ. ಈ ರೀತಿ ರೂಲ್ಸ್ ಇದ್ದಾಗ್ಯೂ ಅದನ್ನು ಬದಿಗಿಟ್ಟು ಹೊರಗಿನವರನ್ನು ತೆಗೆದುಕೊಂಡು ಬಂದಿರುವುದು ಸರಿಯಲ್ಲ. ಈ ಸಂಬಂಧದಲ್ಲಿ ಹೈಕೋರ್ಟಿಗೆ ಹೋದ ಪ್ರಕರಣದಲ್ಲಿ ಹೈಕೋರ್ಟು ವಾರ್ನಿಂಗ್ ಕೊಟ್ಟರೂ ಸಹ ಸುಮ್ಮನೆ ಇರುವುದು ಸರಿಯಲ್ಲ. ಅದನ್ನು ವ್ಯವಸಾಯ ಇಲಾಖೆಯವರು ಈ ರೀತಿ ಕಡೆಗಣಿಸಿರುವುದು ಬಹಳ ಅನ್ಯಾಯ. ಇದರಿಂದ ಜನರಿಗೆ ಬಹಳ ಅತೃಪ್ತಿ ಅಸಂತೋಷವಾಗಿದೆ. ಸರ್ವಿಸ್‌ನಲ್ಲಿ ಈ ರೀತಿ ಆಗಬಾರದಾಗಿತ್ತು. ಇದನ್ನು ಸರಕಾರ ಯೋಚನೆ ಮಾಡಬೇಕಾಗಿತ್ತು ಎಂದು ಹೇಳುತ್ತೇನೆ.

ಇನ್ನು ಉದ್ಯಮ ಅಂದರೆ ಇಂಡಸ್ಟ್ರೀಸ್ ಬಗ್ಗೆ ಎರಡು ಮಾತು ಹೇಳಲು ಇಷ್ಟಪಡುತ್ತೇನೆ. ಇದುವರೆಗೆ ನಮ್ಮ ದೇಶದಲ್ಲಿ ಹೆವಿ ಇಂಡಸ್ಟ್ರೀಸ್, ಮೀಡಿಯಂ ಇಂಡಸ್ಟ್ರೀಸ್ ಕಡೆಗೆ ಗಮನ ಕೊಟ್ಟಿಲ್ಲ ಸಾಧಾರಣವಾಗಿ ಸ್ಟೀಲ್, ಅಲ್ಯೂಮಿನಿಯಂ, ಫರ್ಟಿಲೈಜರ್ ಸೀಮೆಂಟ ಫ್ಯಾಕ್ಟರಿ, ಸಕ್ಕರೆ ಫ್ಯಾಕ್ಟರಿ, ಟೆಕ್ಸ್‌ಟೈಲ್ಸ್ ಇವು ಆಗುತ್ತಾ ಇವೆ, ಪೇಪರ್ ಮಿಲ್ ಇವೆ. ಇದರ ಬಗ್ಗೆ ನಾನು ಕೇಳುವುದಿಲ್ಲ. ಯಾಕೆಂದರೆ ಇವುಗಳ ಉತ್ಪತ್ತಿಯ ಲಾಭ ಕೆಲವು ವಿಶಿಷ್ಟ ಜನರಿಗೆ ಮಾತ್ರ ದೊರೆಯುತ್ತದೆ. ಹೆವಿ ಇಂಡಸ್ಟ್ರೀಸ್ ಮೀಡಿಯಂ ಇಂಡಸ್ಟ್ರೀಸ್ ಇವುಗಳ ಆದಾಯ ನೇಷನ್ನಿಗೆ ಹೋಗಬೇಕು. ಪಬ್ಲಿಕ್ ಸೆಕ್ಟರ್ ಆದರೆ ಸರ್ಕಾರಕ್ಕೆ ಬರುತ್ತದೆ. ಆದರೆ ಈಗ ಕೆಲವು ವಿಶಿಷ್ಟ ಜನರಿಗೆ ಮಾತ್ರ ಹೋಗುತ್ತಿದೆ. ಫಾರಿನ್ ಕೊಲ್ಯಾಬೋರೇಷನ್‌ನಿಂದ ದೊಡ್ಡ ದೊಡ್ಡ ಇಂಡಸ್ಟ್ರೀಸ್ ಮಾಡುವುದರಿಂದ ಹೆಚ್ಚು ಆದಾಯ ಬರುವುದಲ್ಲವೆ ಪರ್ ಕ್ಯಾಪಿಟಾ ಇನ್‌ಕಂ ಹೆಚ್ಚಾಗಿದೆ. ಆದರೂ ಕೂಡ ಲಾಭದ ಹೆಚ್ಚಿನ ಅಂಶ ಕೆಲವು

ಜನರ ಗುಂಪಿಗೆ ಹೋಗುತ್ತದೆ. ದೇಶಕ್ಕೆ ಲಾಭ ಎಷ್ಟು ಸಿಕ್ಕಬೇಕೋ ಅಷ್ಟು ಸಿಕ್ಕುವುದಿಲ್ಲ. ಆದುದರಿಂದ ಬಹು ಜನರಿಗೆ ಅನೇಕರಿಗೆ ಲಾಭ ದೊರೆಯಬೇಕಾದರೆ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ಪ್ರೋತ್ಸಾಹ ಕೊಡಬೇಕು. ನಮ್ಮ ದೇಶದಲ್ಲಿ ಶೇಕಡ 70-80 ರಷ್ಟು ಜನ ಹಳ್ಳಿಗಳಲ್ಲಿ ಇರುತ್ತಾರೆ ಹಳ್ಳಿಗಳಲ್ಲಿ ಜನರಿಗೆ ಒಂದು ವರ್ಷದಲ್ಲಿ ಹನ್ನೆರಡು ತಿಂಗಳು ಕೆಲಸವಿರುವುದಿಲ್ಲ. ಅವರಿಗೆ ವ್ಯವಸಾಯ ಬಿಟ್ಟು ಬೇರೆ ಉದ್ಯೋಗವಿಲ್ಲ. ಅವರು ದುಡಿದು ಬೆಳೆದದ್ದು ಆರು ತಿಂಗಳು ಸಹ ಸಾಲುವುದಿಲ್ಲ. ಆದುದರಿಂದ ಹಳ್ಳಿಗಳಲ್ಲಿ ಮುಖ್ಯವಾಗಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಪ್ರಾರಂಭ ಮಾಡಬೇಕು ಎಂದು ನಾನು ಸೂಚಿಸುತ್ತೇನೆ. ಇದುವರೆಗೆ ಸಣ್ಣ ಪ್ರಮಾಣದ ಉದ್ಯಮಕ್ಕೆ ಪ್ರೋತ್ಸಾಹ ಇಲ್ಲ. ಈ ವಿಚಾರದಲ್ಲಿ ಸಂಪೂರ್ಣ ವಿವರ ಇರುವ ಒಂದು ಸ್ಟಡಿ ಟೀಂ ರಿಪೋರ್ಟ್ ಕೊಟ್ಟಿದ್ದಾರೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಮಾನ್ಯ ಸದಸ್ಯರಾದ ಶ್ರೀ ಸುಂದರೇಶನ್ ಅವರು ಹೇಳಿರುವುದು ಸೂಕ್ತವಾಗಿದೆ. ಸರ್ಕಾರ ಈ ವಿಷಯದ ಕಡೆಗೆ ಗಮನ ಕೊಟ್ಟು ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ.

ಇನ್ನು ಲೋನ್ ವಿಚಾರ ಹೇಳುತ್ತೇನೆ. ಲೋನ್ಸ್ ಕೊಡುವುದನ್ನು ಲಿಬರಲೈಜ್ ಮಾಡಬೇಕೆಂದು ಇದೆ ಲೋನ್ಸ್ ಯಾರು ಯಾರಿಗೆ ಕೊಡಬೇಕು ಎನ್ನುವುದು ಇದೆ. ಆದರೆ ಲೋನ್ಸ್ ಕೊಟ್ಟು ಇದುವರೆಗೆ ಸಹಾಯ ಮಾಡಿಲ್ಲ. ಅನೇಕ ಸಣ್ಣ ಸಣ್ಣ ಇಂಡಸ್ಟ್ರೀಸ್ ಇವೆ. ಬುಟ್ಟಿ ಮಾಡುವುದಕ್ಕೆ, ಹಗ್ಗ ಹೊಸೆಯುವುದಕ್ಕೆ, ಪೆಪ್ಪರ್‌ಮೆಂಟ್ ಮಾಡುವುದಕ್ಕೆ, ಇಂಥ ಸಣ್ಣ ಉದ್ಯಮಕ್ಕೆ ಕೊಟ್ಟರೆ ಸಹಾಯವಾಗುತ್ತದೆಯೇ? ಈ ಲೋನ್ಸ್ ಕೊಡುವ ಆಫೀಸರ್ ನೇಮಕ ಮಾಡಿದೆ. ಅವರು ಎಲ್ಲೋ ಕುಳಿತಿರುತ್ತಾರೆ. ಅವರು ಏನು ಪ್ರಚಾರ ಮಾಡುವುದಿಲ್ಲ. ಜನರಿಗೆ ಏನೂ ಗೊತ್ತಾಗುವುದಿಲ್ಲ. ಜನರನ್ನು ಎಚ್ಚರಿಸಬೇಕಾಗಿದೆ. ಇಂಥಿಂಥ ಸೌಲಭ್ಯಗಳನ್ನು ಸರ್ಕಾರ ಕೊಡುತ್ತಾರೆ, ಇಂಥಿಂಥ ಉದ್ಯಮ ತೆಗೆದುಕೊಳ್ಳಿ ಎಂದು ಜನರಿಗೆ ತಿಳಿಸಿ ಹೇಳಿದರೆ ಜನರಿಗೆ ಗೊತ್ತಾಗುತ್ತದೆ. ಅಂದರೆ ಜನ ಮುಂದೆ ಬಂದು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ತೆಗೆದುಕೊಳ್ಳುತ್ತಾರೆ. ಬೇರೆ ರಾಜ್ಯಗಳಲ್ಲಿ ಹೆಚ್ಚು ಪ್ರಗತಿ ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಏನೂ ಆಗಿಲ್ಲ. ಇದನ್ನು ಮಾಡಬೇಕಾದುದು ಬಹಳ ಅವಶ್ಯಕವಾಗಿದೆ. ನಮ್ಮ ದುರ್ದೈವದಿಂದ ಹಳ್ಳಿಯ ಜನರಲ್ಲಿ ಇದುವರೆಗೆ ಇದ್ದ ಅನೇಕ ಇಂಡಸ್ಟ್ರೀಸ್ ಅಳಿದು ಹೋಗಿವೆ. ಅವುಗಳನ್ನು ಪುನರುಜ್ಜೀವಗೊಳಿಸಬೇಕಾಗಿದೆ. ನಮ್ಮ ದೇಶದ ಉತ್ಪತ್ತಿ ಸ್ವಲ್ಪ ಜನರಿಂದ ಬರುವುದು ಸರಿಯಲ್ಲ. ನಮ್ಮ ನ್ಯಾಷನಲ್ ಇಂಕಂ ನಮ್ಮ ದೇಶದ ಬಹು ಜನರಿಂದ ಬರುವುದು ಸರಿಯಾದುದು. ಇದನ್ನು ಯೋಚನೆ ಮಾಡಬೇಕೆಂದು ಹೇಳುತ್ತೇನೆ. ಸರ್ಕಾರದ ಆಡಳಿತದಲ್ಲಿ ಬಿಗುವು ಇರಬೇಕು. ಆಡಳಿತದಲ್ಲಿ ಬಿಗಿ ಇಲ್ಲದೆ ಶಿಥಿಲವಾಗಿರುವುದರಿಂದ ದೋಷಗಳು ಇವೆ. ಇದಕ್ಕೆ ಗಮನ ಕೊಡಬೇಕು. ಕೆಲವು ವಿಚಾರಗಳನ್ನು ಹೇಳುವುದಕ್ಕೆ ನನಗೆ ಅವಕಾಶ ಕೊಟ್ಟದ್ದಕ್ಕೆ ಅಧ್ಯಕ್ಷರಿಗೆ ನಾನು ಕೃತಜ್ಞನಾಗಿದ್ದೇನೆ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಗಳೇ, ಸಭೆಯ ಮುಂದೆ ಮಂಡಿಸಿರುವ ಆಯವ್ಯಯ ಪಟ್ಟಿಯನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರಕ್ಕೆ ಹೇಳಲು ಬಯಸುತ್ತೇನೆ. ವಿರೋಧಪಕ್ಷದ ಸದಸ್ಯರು ಸರ್ಕಾರದೊಂದಿಗೆ ಯಾವ ವಿಚಾರದಲ್ಲಿಯೂ ಸಹಕರಿಸುತ್ತಿಲ್ಲ ಎಂದು ಶ್ರೀಮಾನ್ ಮಾದೇಗೌಡರು ಮಾತನಾಡುತ್ತಾ ಹೇಳಿದರು. ಆದರೆ ಸರ್ಕಾರದ ಜೊತೆಗೆ ಕಾಯಾ, ವಾಚಾ, ಮನಸಾ ಸಹಕರಿಸಿದ್ದೇವೆ ಎಂದು ನಾನು ಹೇಳುತ್ತೇನೆ. ಅನೇಕ ವಿಷಯಗಳು ಕಷ್ಟಕ್ಕೆ ಬಂದಾಗ್ಗೆ ಸಹಾಯ ಮಾಡಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಎಷ್ಟೋ ಕಾರ್ಯ ಕಲಾಪಗಳನ್ನು ನಡೆಸಿದ್ದೇವೆ. ಯಾವ ರೀತಿ ಮಾಡಬೇಕಾಗಿತ್ತು ಎನ್ನುವುದನ್ನು ಶ್ರೀ ಮಾದೇಗೌಡರವರು ತಿಳಿಸಬೇಕಾಗಿತ್ತು. ನನ್ನ ಕ್ಷೇತ್ರದಲ್ಲಿ ನಾನು ಸರ್ಕಾರದ ಜೊತೆಗೆ ಸಹಕರಿಸಿದ್ದೇನೆ. ಆದರೆ ನಾನಾದರೂ ಹೇಳುವುದೇನೆಂದರೇ ಕಳೆದ ಮೂರು ವರ್ಷಗಳಿಂದ ನಾನು ಈ ಸರ್ಕಾರ ದೊಂದಿಗೆ ಸಹಕರಿಸಿಕೊಂಡು ಬಂದುದಕ್ಕೆ ನನಗೆ ಸರ್ಕಾರದವರು ಕೊಟ್ಟ ಬಳುವಳಿ ಏನೆಂದರೆ—ಅದು ಕಿರುಕುಳ ಮಾತ್ರ, ನನ್ನ ಕ್ಷೇತ್ರದಲ್ಲಿ ಹೇಳುವುದಾದರೆ ಕಳೆದ ಮೂರು ವರ್ಷಗಳಿಂದ ಯಾವ ಒಂದು ಕೆಲಸ ಕಾರ್ಯವನ್ನೂ ಮಾಡಿಲ್ಲ. ನೀರಾವರಿ ಯೋಜನೆಗಳ ವಿಷಯವನ್ನು ಹೇಳುವುದಾದರೆ—ನನ್ನ ಮಾಗಡಿ ಕ್ಷೇತ್ರದಲ್ಲಾಗಲಿ ಯಾವ ಒಂದು ಯೋಜನೆಯನ್ನೂ ಕೈಗೊಂಡಿಲ್ಲ. ಆದರೆ ಆ ಸೋಲೂರು ಕ್ಷೇತ್ರದಲ್ಲಿ ಅನೇಕ ಕೆಲಸಗಳನ್ನು ಮಾಡಿದ್ದಾರೆ. ಆದರೆ ನನ್ನ ಕ್ಷೇತ್ರದಲ್ಲಿ ಮಾತ್ರ ಒಂದನ್ನೂ ಮಾಡಿಲ್ಲ. ಹಾಗೆ ಮಾಡಕೂಡದೆಂದು ಮಂತ್ರಿಗಳೇನಾದರೂ ಆಜ್ಞೆ ಮಾಡಿದ್ದಾರೋ ಏನೋ ಗೊತ್ತಾಗಲಿಲ್ಲ. ಈ ಸಾರ್ತಿ ಈ ಕ್ಷೇತ್ರದ ಜನರಿಗೆ ಹೀಗಾದರೆ ಮುಂದೆ ಅವರು ನನಗೆ ಈ ಕ್ಷೇತ್ರದಲ್ಲಿ ಓಟನ್ನು ಕೊಡುವುದಿಲ್ಲ ಆಗ ಕಾಂಗ್ರೆಸ್ ಸ್ಪರ್ಧಿಗೆ ಜಯವಾಗುತ್ತೆಂದು ಹೀಗೆ ಮಾಡಿದ್ದರೂ ಮಾಡಿರಬಹುದು. ಆದರೆ ಹಾಗೆ ಅವರ ಕಡೆಯವರನ್ನು ಅವರ ಕನಸು ಮನಸಿನಲ್ಲೂ ಗೆಲ್ಲಿಸಲು ಸಾಧ್ಯವಿಲ್ಲ. ನಾನಾದರೋ ಮೊದಲು ಕಾಂಗ್ರೆಸ್ಸಿನಲ್ಲಿದ್ದು, ಅನಂತರ ಅದನ್ನು ಬಿಟ್ಟು ಚುನಾವಣೆಗೆ ನಿಂತು ಜಯಶಾಲಿಯಾಗಿ ಬಂದಿದ್ದೇನೆ. ಮಾನ್ಯ ಸಣ್ಣ ನೀರಾವರೀ ಮಂತ್ರಿಗಳು

(ಶ್ರೀ ಸಿ. ಆರ್. ರಂಗೇಗೌಡ)

1952ರಲ್ಲಿ P.S.P. ಯಲ್ಲಿ ನಿಂತು ಸೋತಿದ್ದಾರೆ. ಮೊನ್ನೆ ತಾನೆ ನಮ್ಮ ತಾಲ್ಲೂಕಿನಲ್ಲಿ ಲೋಕ ಸಭೆಗೆ ಒಂದು ಚುನಾವಣೆ ನಡೆಯಿತು. ಆ ಕಾಲದಲ್ಲಿ ಸಣ್ಣ ನೀರಾವರಿ ಮಂತ್ರಿಗಳು ನನ್ನ ಕ್ಷೇತ್ರಕ್ಕೆ ಬಂದು ನಮ್ಮ ಟೌನಿನಲ್ಲಿ ನಮ್ಮ ಮುನಿಸಿಪಲ್ ಸದಸ್ಯರಿಗೆ ತಲಾ 25 ರೂಪಾಯಿಗಳಂತೆ ದುಡ್ಡನ್ನು ಕೊಟ್ಟು ಅವರು ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಹೀಗೆ ನಮ್ಮ ಮಾಗಡಿಯ ತಾಲ್ಲೂಕಿನಲ್ಲಿ ದುಡ್ಡನ್ನು ಕೊಟ್ಟು ಜನರಿಂದ ಓಟುಗಳನ್ನು ಕೊಂಡುಕೊಳ್ಳುವುದಕ್ಕಿಂತ ಹೀನಾಯ ವಾದ ಕೆಲಸ ಮತ್ತೊಂದಿಲ್ಲ. ಆದರೆ ಹೀಗೆ ದುಡ್ಡನ್ನು ಕೊಟ್ಟು ಓಟುಗಳನ್ನು ಪಡೆದು ಯಾರು ಅಧಿಕಾರಕ್ಕೆ ಬರುತ್ತಾರೋ ಅಂಥವರ ದಬ್ಬಾಳಿಕೆಗೆ ಜನರು ಬಗ್ಗುವುದಿಲ್ಲ. ಆದರೆ ಜನರು ಯಾವತ್ತೂ ಸತ್ಯ, ಧರ್ಮ, ನ್ಯಾಯಕ್ಕೆ ಮಾತ್ರ ತಲೆಬಾಗುತ್ತಾರೆ. ಯಾರು ಆ ನಮ್ಮ ಮಾಗಡಿಯ ತಾಲ್ಲೂಕಿನಲ್ಲಿ ಯಾವ ಒಂದು ನೀರಾವರೀ ಕಾಂಗಾರಿಯನ್ನೂ ಮಾಡಬಾರದೆಂದು ಮಾಡಿದ್ದಾರೋ ಅವರಿಗೇ ಅದರ ಪಾಪದ ಪುಣ್ಯ ಲಭಿಸಲಿ.

ಇನ್ನು ಆ ಮಾಗಡಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿ ಬಹಳ ದಿವಸ ಆಯಿತು. ಆದರೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಬಹಳ ಬೇಜವಾಬ್ದಾರಿಯಿಂದ ಈ ಬಗ್ಗೆ ಯಾವ ಒಂದು ಕೆಲಸವನ್ನೂ ಇಲ್ಲಿಯವರೆಗೂ ಕೈಗೊಂಡಿಲ್ಲ. ಮಂಜೂರಾದ ಸ್ಕೀಂ ಹಾಗೇ ಸ್ತಬ್ಧವಾಗಿ ನಿಂತಿದೆ. ಆದರೆ ಹೀಗೆ ಏತಕ್ಕೆ ಈ ಕೆಲಸವನ್ನು ಮಂಜೂರಾಗಿದ್ದರೂ ಕೈಗೊಳ್ಳಲಿಲ್ಲ ಎಂಬುದಕ್ಕೆ ಮಾನ್ಯ ಮಂತ್ರಿಗಳು ಕಾರಣವನ್ನು ಉತ್ತರ ಕೊಡುವಾಗ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನಾದರೂ ಆ ಟೌನಿನ ಕುಡಿಯುವ ನೀರಿನ ಯೋಜನೆಯನ್ನು ಜಾಗ್ರತೆಯಾಗಿ ಕೈಗೊಳ್ಳಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಈಗ ನಮ್ಮ ತಾಲ್ಲೂಕಿನಲ್ಲಿ ನೂರಾರು ಫಡಾ ರೆಸ್ಟೋರೇಷನ್ ಕೇಸುಗಳು ಫೈಸಲಾಗದೆ ಹಾಗೇ ಉಳಿದಿವೆ. ಈ ವಿಚಾರದಲ್ಲಿ ನಾನು ಒಂದು ಪತ್ರವನ್ನು ಸಹಾ ಬರೆದಿದ್ದೆನು ಅದಕ್ಕೆ ಇಲ್ಲಿಯವರೆಗೂ ಉತ್ತರವಿಲ್ಲ, ಆದರೆ ಈ ಫಡಾ ರೆಸ್ಟೋರೇಷನ್ ಆಗದ ವಿನಾ ರೈತರಿಗೆ ಸಾಲ ಗಳು ಸಿಕ್ಕುವುದಿಲ್ಲ. ಇದರಿಂದ ರೈತರಿಗೆ ತುಂಬಾ ಅನಾನುಕೂಲವಾಗಿದೆ. ರೈತರ ಹಿತ ದೃಷ್ಟಿಯಿಂದಲಾದರೂ ಇವನ್ನು ಬೇಗ ಫೈಸಲ್ಮಾಡಿಸುವುದಕ್ಕೆ ಸರ್ಕಾರದವರು ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಅನೇಕ ಕೂಡೊಕ್ಕಲು ಸಹಕಾರ ಸಂಘಗಳಿವೆ. ಆದರೆ ಅವುಗಳಿಗೆ ಯಾವ ಉತ್ತೇಜನವೂ ಇಲ್ಲದೆ ಅವು ಬಹಳ ಹೀನಸ್ಥಿತಿಯಲ್ಲಿವೆ. ಇದನ್ನು ನಾನು ಕಣ್ಣಾರೆ ನೋಡಿರ ತಕ್ಕ ವಿಚಾರ. ಆದರೆ ನಾನು ಈ ವಿಚಾರದಲ್ಲಿ ಸಾಕಾದಷ್ಟು ಗಮನವನ್ನು ಸೆಳೆದಿರುವುದಾಗಿ ಪೂಜ್ಯ ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದರು. ಆದರೂ ಈ ವಿಚಾರದಲ್ಲಿ ಸರ್ಕಾರದವರ ಮೊಂಡುತನ ವಿನ್ನೂ ಹೋಗಿಲ್ಲ. ಅವರು ಈ ವಿಚಾರದಲ್ಲಿ ಬಹಳ ತಾತ್ಸಾರ ಮನೋಭಾವನೆಯನ್ನು ತಾಳಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ 16 ಕೂಡೊಕ್ಕಲು ಸಹಕಾರ ಸಂಘಗಳಿವೆ. ಅವುಗಳೆಲ್ಲಾ ಬಹಳ ನಿರುತ್ಸಾಹಿ ಗಳಾಗಿ ಯಾವ ಕೆಲಸವನೂ ಸರಿಯಾಗಿ ಮಾಡುತ್ತಿಲ್ಲ. ಆದರೆ ಘನ ಸರ್ಕಾರದವರು ಯಾವ ಒಂದು ಉದ್ದೇಶದಿಂದ ಇವುಗಳನ್ನು ಪ್ರಾರಂಭ ಮಾಡಿದರೋ ಆ ಉದ್ದೇಶ ಸಾಧನೆಯಾಗುತ್ತಿಲ್ಲ. ಇವುಗಳ ಉತ್ಪನ್ನ ಬಹಳ ಕಡಮೆಯಾಗಿದೆ. ಇವುಗಳು ಯಶಸ್ವಿಯಾಗಿ ಕೆಲಸ ಮಾಡುವುದಕ್ಕೆ ಒಂದು ಅಡಚಣೆಯಿದೆ ಅದೇನೆಂದರೆ: ಇವುಗಳನ್ನು ಸ್ಥಾಪನೆ ಮಾಡಿದ ನಂತರ ಇಲ್ಲಿಯವರೆಗೂ ಇವುಗಳಿಗೆ ಸಂಬಂಧಪಟ್ಟ ಅಧಿಕಾರಿಗಳಾಗಲೀ, ರಾಷ್ಟ್ರೀಯ ವಿಸ್ತರಣಾ ಯೋಜನೆಯ ಅಧಿಕಾರಿಗಳಾಗಲೀ, ಅಥವಾ ಈ ಪ್ರಾಂತಕ್ಕೆ ಆಗಾಗ ಬರತಕ್ಕ ಮಂತ್ರಿಗಳಾಗಲೀ ಯಾರೊಬ್ಬರೂ ಭೇಟಿ ಕೊಡುತ್ತಿಲ್ಲ. ಹೀಗಾಗಿ ಇವು ಬಹಳ ಹೀನಸ್ಥಿತಿಯಲ್ಲಿವೆ. ಉದಾಹರಣೆಗೆ—ನಮ್ಮ ತಾಲ್ಲೂಕಿನಲ್ಲಿ ಬಗಿನಗರ ಮತ್ತು ಬೆಳಗುಂಬ ಈ ಎರಡು ಸ್ಥಳಗಳಲ್ಲಿ ಇರತಕ್ಕ ಸಹಕಾರ ಸಂಘಗಳು ಹಣವನ್ನು ಇಲ್ಲಿಯ ತನಕ ಖರ್ಚು ಮಾಡಿರುವುದಕ್ಕೆ ಸರಿಯಾದ ಲೆಕ್ಕ ಬುಕ್ಕುಗಳನ್ನೇ ಇಟ್ಟಿಲ್ಲ ಎಂಬುದಾಗಿ ಮೊನ್ನೆ ಅಲ್ಲಿಗೆ ಆಡಿಟ್ಟಿಗೆ ಹೋಗಿದ್ದ ಆಡಿಟರು ಹೇಳಿದ್ದಾರೆ. ಅವರನ್ನು ಲೆಕ್ಕದ ಬುಕ್ಕುಗಳನ್ನು ಹಾಜರ್ಮಾಡ ಬೇಕೆಂದು ಅವರು ಕೇಳಿದ್ದಕ್ಕೆ ನೀವೇ ಆ ಲೆಕ್ಕಗಳನ್ನೆಲ್ಲಾ ಬರೆದು ಆಡಿಟ್ ಮಾಡಿಕೊಂಡು ಹೋಗಿ ಎಂಬುದಾಗಿ ಅವರು ತಿಳಿಸಿದರೆಂಬುದಾಗಿ ಅವರು ಹೇಳುತ್ತಿದ್ದಾರೆ, ಹೀಗಾಗಿ ಅವರು ಆ ಲೆಕ್ಕ ಗಳನ್ನು ಆಡಿಟ್ ಮಾಡದೇ ಅವರು ಹಾಗೇ ವಾಪಸ್ಸು ಬಂದರಂತೆ. ಇಂಥ ಒಂದು ಅವ್ಯವಸ್ಥೆ ಯನ್ನು ತಡೆಗಟ್ಟಬೇಕಾಗಿದ್ದರೆ ಮಾನ್ಯ ಮಂತ್ರಿಗಳು ಆ ಪ್ರಾಂತ್ಯ ಸಂಚಾರ ಹೋದಾಗ ಈ ಸಂಸ್ಥೆ ಗಳಿಗೆ ಭೇಟಿ ಕೊಡಬೇಕು. ಅವುಗಳ ನಿಗಾವಣೆಯನ್ನು ನೋಡಿ ಅವುಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಡಬೇಕು. ಆದರೆ ಮಂತ್ರಿಗಳು ಇಂಥ ಕೆಲಸ ಮಾಡದೆ ಅವರ ಪಾರ್ಟಿ ಮುಖಂಡರನ್ನು ಭೇಟಿ ಮಾಡುವುದರಲ್ಲಿ ಆಸಕ್ತರಾಗಿರುತ್ತಾರೆ. ಇವರ ಆಸಕ್ತಿ ಇಂಥ ವಿಚಾರಗಳ ಕಡೆಗೆ ಇಲ್ಲದಿರುವುದು

ದೇಶದ ದುರ್ದೈವ. ಇನ್ನಾದರೂ ಮಂತ್ರಿಗಳು ಈ ವಿಚಾರಕ್ಕೆ ಹೆಚ್ಚಿನ ನಿಗಾ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಮೂಲಕ ರೈತನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸ ಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ನಮ್ಮ ಆರ್ಥಿಕ ಸಚಿವರು ನಿರುದ್ಯೋಗಿಗಳ ಬಗ್ಗೆ ಮಾತನಾಡುತ್ತಾ ತಮ್ಮ ಭಾಷಣದಲ್ಲಿ ಅಕ್ಕಸಾಲಗರ ಬಗ್ಗೆ ಒಂದು ಮಾತನ್ನು ಹೇಳಿದ್ದಾರೆ, ಆದರೆ ಹಾಗೆ ಈ ಬೆಂಗಳೂರು ನಗರದಲ್ಲೇನಾದರೂ ಆಗಿದ್ದರಾಗಿರಬಹುದು, ಆದರೆ ನನ್ನ ಕ್ಷೇತ್ರದಲ್ಲಿ ಅವರಿಗೆ ತುಂಬಾ ಅನ್ಯಾಯವಾಗಿದೆ. ರೆವಿನ್ಯೂ ಅಧಿಕಾರಿಗಳು ಅವರಿಗೊಂದು ಸರ್ಟಿಫಿಕೇಟನ್ನು ಕೊಡ ತಕ್ಕ ವಿಚಾರದಲ್ಲಿ ಸಹಾ ತುಂಬಾ ಕಿರುಕುಳ ಕೊಟ್ಟಿದ್ದಾರೆ. ಅಧಿಕಾರಿಗಳು ಅವರನ್ನು ತಾತ್ಸಾರ ಭಾವನೆಯಿಂದ ಕಾಣುತ್ತಾರೆ. ಇವರ ತೊಂದರೆಯನ್ನು ಇಷ್ಟೇ ಎಂತ ಹೇಳುವುದಕ್ಕಾಗು ವುದಿಲ್ಲ. ಇವರ ಬಗ್ಗೆ ಮಂಜಪ್ಪನವರೇನು ಹೇಳಿದರೋ ಅದಕ್ಕಿಂತ ಹೆಚ್ಚು ಹೇಳುವುದಕ್ಕೆ ಸಾಧ್ಯವಿಲ್ಲ.

---

*The House adjourned at 3-00 p.m. and reassembled at 3-30 p.m.*

---

[MR. SPEAKER in the Chair]

MR. SPEAKER.—Before I call upon Sri Range Gowda to resume his speech, may I know how many Members are there to participate? After all, I have got 2½ hours more.

(*several Members stood up*)

Why does this late awakening come? Within 2½ hours, how can I press in all the Hon'ble Members? Sri Range Gowda may speak now.

ಶ್ರೀ ಸಿ. ಆರ್. ರಂಗೇಗೌಡ.—ಪೂಜ್ಯ ಸಭಾಪತಿಯವರೇ, ನಾನು ನಿರುದ್ಯೋಗಿ ಅಕ್ಕಸಾಲಗರ ಬಗ್ಗೆ ಸರ್ಟಿಫಿಕೇಟ್ ದೊರೆಯಬೇಕು, ಅವರಿಗೆ ಕೊಟ್ಟ ಸೌಲಭ್ಯಗಳು ದೊರೆಯುವುದು ಮರೀಚಿಕೆಯ ಮಾತು ಎಂಬ ವಿಷಯಕ್ಕೆ ಮುಕ್ತಾಯ ಮಾಡಿದೆ. ಚಿನ್ನದ ನಿಯಂತ್ರಣದ ಪ್ರಕಾರ ಅಕ್ಕಸಾಲಿಗರಿಗೆ ಯಾವ ಸೌಲಭ್ಯ ದೊರೆಯಬೇಕೆಂದು ಅರ್ಜಿ ಕೊಟ್ಟರೂ ಕೂಡ ಅದಕ್ಕೆ ಇಲ್ಲ ಅಥವಾ ಉಂಟು ಎಂಬ ಉತ್ತರ ಕೊಡುತ್ತಾ ಇಲ್ಲ; ಅವರು ಇದುವರೆಗೂ ಆಗ ಕೊಡುತ್ತಾರೆ ಈಗ ಕೊಡುತ್ತಾರೆ ಎಂಬ ನಿರೀಕ್ಷಣೆಯಲ್ಲೇ ಇದ್ದಾರೆ. ಆದ್ದರಿಂದ ಅದನ್ನು ಜಾಗ್ರತೆ ಕೊಡಿಸಿಕೊಡಬೇಕು. ಹಾಗೆಯೇ ಸರ್ಕಾರದವರು ತಮ್ಮ ಉತ್ತರವಲ್ಲಿ ಕೊನೇ ಪಕ್ಷ ಬೆಂಗಳೂರು ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶ ಗಳಲ್ಲಿ ಎಷ್ಟು ಜನರಿಗೆ ಜಮೀನು ಕೊಡಲಾಗಿದೆ ಹಾಗೂ ಅವರು ಕೈಗಾರಿಕೆಗಳನ್ನು ಸ್ಥಾಪಿಸಬೇಕಾ ದರೆ ಅವರಿಗೆ ಏನೇನು ಸೌಲಭ್ಯಗಳನ್ನು ಕೊಡಲಾಗಿದೆ ಎಂಬ ವಿಷಯವನ್ನೂ ಕೂಡ ತಿಳಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಸ್ವಾಮಿ, ಹಳೇ ಮೈಸೂರು ಭಾಗದಲ್ಲಿ 2,103 ಇನಾಂ ಗ್ರಾಮಗಳು ಇದ್ದು ಅದರ ಪೈಕಿ 2,093 ಗ್ರಾಮಗಳ ಸರ್ವೆ ಆಗಿದ್ದು 1,500 ಗ್ರಾಮಗಳಲ್ಲಿ ಸೆಟ್ಲಮೆಂಟ್ ಆಗಿದೆ ಎಂದು ಅರ್ಥಮಂತ್ರಿ ಗಳು ಅವರ ಭಾಷಣದಲ್ಲಿ ಹೇಳಿದರು. 1954ನೇ ಇಸವಿಯ ಇನಾಂ ಅಬಾಲಿಷನ್ ಆಕ್ಟ್ ಪ್ರಕಾರ ಅದನ್ನು ಮೈಸೂರಿನಾದ್ಯಂತ ಜಾರಿಗೆ ತಂದಿದ್ದೀರಿ. ಆದರೆ ಯಾವ ಉದ್ದೇಶದಿಂದ ಅದನ್ನು ಜಾರಿಗೆ ತಂದಿರೋ ಅದು ಸಫಲವಾಗಿಲ್ಲ. ನಾನು ನನ್ನ ತಾಲ್ಲೂಕಿನ ವಿಷಯವನ್ನು ಹೇಳುವುದಾದರೆ, ನಮ್ಮ ತಾಲ್ಲೂಕಿನಲ್ಲಿ 86 ಇನಾಂ ಗ್ರಾಮಗಳು ಇವೆ. ತಾವು ರೈತರಿಗೂ ಸರ್ಕಾರಕ್ಕೂ ಮಧ್ಯವರ್ತಿ ಇರ ಕೂಡದು. ರೈತರೇ ನೇರವಾಗಿ ಜಮೀನನ್ನು ಮಾಡಿಕೊಂಡು ಸರ್ಕಾರಕ್ಕೆ ಕಂದಾಯವನ್ನು ಕೊಡ ಬೇಕು ಅವರು ಸ್ವತಂತ್ರವಾಗಿರಬೇಕೆಂದು ಯಾವ ಉದ್ದೇಶದಿಂದ ಕಾನೂನನ್ನು ಮಾಡಿದರೋ ಅದು ಇವತ್ತು ಫಲವಾಗದೇ ಒಂದು ಕಡೆ ರೈತರು ಮತ್ತೊಂದು ಕಡೆ ಜೋಡಿದಾರರನ್ನು ಪರೋಕ್ಷವಾಗಿ ಸ್ಥಳೀಯ ಅಧಿಕಾರಿಗಳು ಸುಲಿಗೆ ಮಾಡಿ ತಮ್ಮ ಜೀವನವನ್ನು ಸುಖವಾಗಿ ನಡೆಸಿ ಕೊಳ್ಳುವುದಕ್ಕೆ ಅದು ಅವಕಾಶವಾಗಿದೆ. ರೈತ ತನ್ನ ಜಮೀನನ್ನು ತನ್ನ ತಾತ ಮುತ್ತಾತನ ಕಾಲದಿಂದ ಮಾಡಿ ಕೊಂಡು ಬಂದಿದ್ದರೂ ಕೂಡ ಅದು ಇವತ್ತಿನ ದಿವಸ ಯಾರ ಹೆಸರಿಗೋ ಖಾತೆ ಆಗಿರುವ ಸಂದರ್ಭ ಇದೆ. ತನ್ನ ಸ್ವಂತ ಜಮೀನನ್ನು ಮಾಡಿಕೊಂಡಿದ್ದರೂ ಕೂಡ ತನ್ನ ಜಮೀನಿನ ಮಧ್ಯ ಭಾಗದಲ್ಲಿ

(ಶ್ರೀ ಸಿ. ಆರ್. ರಂಗೇಗೌಡ)

ಮೇವಿಗಾಗಿ ಹುಲ್ಲುಗಾವಲನ್ನು ಉಳಿಸಿಕೊಂಡಿದ್ದರೆ ಅದನ್ನು ಸರ್ವೆ ಅಧಿಕಾರಿಗಳು ಯಾರು ದುಡ್ಡು ಕೊಡುತ್ತಾರೋ ಅವರಿಗೆ ಖಾತೆ ಮಾಡುವುದು ದುಡ್ಡು ಕೊಡದೇ ಇದ್ದವರಿಗೆ ಅದನ್ನು ಗೋಮಾಳ ಎಂದು ರಿಸರ್ವ್ ಮಾಡಿಕೊಂಡು ರೈತರನ್ನು ಟ್ರಿಬ್ಯೂನಲ್ ಅಥವಾ ಕೋರ್ಟುಗಳಿಗೆ ಎಳೆಯತಕ್ಕ ಸಂದರ್ಭ ಬಂದಿದೆ, ಇನಾಂ ರದ್ದಿಯಾತಿ ಕಾನೂನಿನಿಂದ ರೈತರಿಗೆ ಅನುಕೂಲವಾಗಿರುವುದಕ್ಕಿಂತ ಅನಾನುಕೂಲವಾಗಿದ್ದರೂ ಕೂಡ ಸರ್ಕಾರ ಈ ಬಗ್ಗೆ ತಾತ್ಸಾರ ಮನೋಭಾವದಿಂದ ಇದೆ. ಇದನ್ನು ತಾವು ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆ 1954ನೇ ಇಸವಿಯ ಇನಾಂ ಅಬಾಲಿಷನ್ ಆಕ್ಟನ್ನು ತಿದ್ದುಪಡಿ ಮಾಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ಉದಾಹರಣೆಯನ್ನು ಹೇಳುವುದಾದರೆ, ಮಾಗಡಿ ತಾಲ್ಲೂಕು ಗುದ್ದಹಳ್ಳಿ ಗ್ರಾಮದಲ್ಲಿ ರೈತರು ಜೋಡಿಗ್ರಾಮದಲ್ಲಿ ಇದ್ದಾರೆ. ಇದ್ದರೂ ಕೂಡ ಅವರನ್ನೆಲ್ಲಾ ಕೈ ಬಿಟ್ಟು ಬೇರೆಯವರ ಹೆಸರಿಗೆ ಖಾತೆಯನ್ನು ಮಾಡಿ ಆ ರೈತರನ್ನು ಇಲ್ಲದ ಸಲ್ಲದ ತೊಂದರೆಗೆ ಗುರಿಮಾಡಿರುವ ವಿಷಯ ನನ್ನ ಗಮನಕ್ಕೆ ಬಂದಿದೆ. ಈ ಬಗ್ಗೆ ಸರ್ಕಾರದವರಿಗೆ ಕಾಗದ ಬರೆದರೂ ಕೂಡ ಅದಕ್ಕೆ ಗಮನ ಕೊಟ್ಟಿಲ್ಲ. ಇನಾಂ ಅಬಾಲಿಷನ್ ಆಕ್ಟ್ ಜಾರಿಗೆ ಬಂದ ಮೇಲೆ ಜೋಡಿದಾರರಿಗೆ ರೈತರು ಯಾವ ವಿಧವಾದ ಗುತ್ತಿಗೆಯನ್ನೂ ಕೊಟ್ಟಿಲ್ಲ' ಮತ್ತು ಸರ್ಕಾರದವರು ಅವರಿಗೆ ಮಧ್ಯವರ್ತಿ ಪರಿಹಾರವನ್ನು ಕೂಡ ಕೊಟ್ಟಿಲ್ಲ. ಅದರಿಂದಾಗಿ ಜೋಡೀದಾರರೂ ಕೂಡ ತೊಂದರೆಗೆ ಒಳಗಾಗಿದ್ದಾರೆ. ಆದ್ದರಿಂದ ಜೋಡೀದಾರರಿಗೆ ಜಾಗ್ರತೆ ಪರಿಹಾರವನ್ನು ಕೊಡಿಸಬೇಕು ಮತ್ತು ಮಧ್ಯವರ್ತಿ ಪರಿಹಾರವನ್ನಾದರೂ ಅತಿ ಜಾಗ್ರತೆ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಸದಸ್ಯರು ಸರ್ಕಾರದ ಮಂತ್ರಿಗಳಿಗೆ ಕಾಗದ ಬರೆದರೆ ಅದಕ್ಕೆ ಉತ್ತರ ತಾತ್ಸಾರ. ಸದಸ್ಯರಿಗೆ ಈ ರೀತಿ ತಾತ್ಸಾರ ಮನೋಭಾವ ತಾಳುವುದಾದರೆ ಇನ್ನು ಸಾಮಾನ್ಯ ರೈತರು ಅರ್ಜಿ ಬರೆದರೆ ಯಾವ ರೀತಿ ಮನ್ನಣೆ ದೊರೆಯುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಎಷ್ಟೋ ಜನ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಅವರು ಒಂದು ವೇಳೆ ಉತ್ತರ ಬರೆದರೂ ಕೂಡ ಏನು ಬರೆಯುತ್ತಾರೆ! ಸಂಬಂಧಪಟ್ಟ ಸೆಕ್ರೆಟೆರಿಯವರಿಗೆ ಕಳುಹಿಸಿದ್ದೇವೆ ಎಂದು ಬರೆಯುತ್ತಾರೆ. ಆಮೇಲೆ ಏನು ಆಯಿತು, ಆ ಅರ್ಜಿಯ ಮೇಲೆ ಏನು ಕಾರ್ಯ ಕ್ರಮವನ್ನು ಕೈಕೊಳ್ಳಲಾಯಿತು ಆದರೆ ಫಲಿತಾಂಶ ಏನು ಎಂಬ ಉತ್ತರವನ್ನು ಬರೆಯುವುದಿಲ್ಲ. ಸೆಕ್ರೆಟೆರಿಯವರು ಅದನ್ನು ಯಾವುದೋ ಕಸದ ಬುಟ್ಟಿಯಲ್ಲಿ ಹಾಕಿರುತ್ತಾರೆ ಎಂಬ ಭಾವನೆ ಬಂದಿದೆ. ನನ್ನ ಅನುಭವದಲ್ಲಿರುವುದನ್ನು ಹೇಳುವುದಾದರೆ ಎಷ್ಟೋ ಮಂತ್ರಿಗಳಿಗೆ ಕಾಗದ ಬರೆದಿದ್ದೆ. ಸೆಕ್ರೆಟೆರಿಯವರಿಗೆ ಬರೆದಿದ್ದಕ್ಕೆ ದಾಖಲೆ ಬಂದಿದೆ, ಆದರೆ ಅದರ ಮೇಲೆ ಏನೂ ಕಾರ್ಯಕ್ರಮವನ್ನೂ ಕೈಕೊಂಡಿಲ್ಲ. ಮಾಗಡಿ ತಾಲ್ಲೂಕು ಮಾಗಡಿ ಕ್ಷೇತ್ರದಲ್ಲಿ ಆ ಕ್ಷೇತ್ರದ ಬಗ್ಗೆ ತಾತ್ಸಾರ ಮಾಡುವ ಬಗ್ಗೆ ಅನೇಕ ವೇಳೆ ಮುಖ್ಯ ಮಂತ್ರಿಗಳಿಗೆ ಕಾಗದ ಬರೆದಿದ್ದೇನೆ. ಅವರು ಅದನ್ನು ಸಂಬಂಧಪಟ್ಟ ಸೆಕ್ರೆಟೆರಿಯವರಿಗೆ ಕಳುಹಿಸಿದ್ದೇವೆ ಎಂದು ಬರೆದಿದ್ದಾರೆ. ಆದರೆ ಏನು ಕಾರ್ಯಕ್ರಮ ಕೈಕೊಳ್ಳಲಾಯಿತು ಆ ತಾಲ್ಲೂಕಿನ ಜನತೆಗೆ ಏನು ಅನುಕೂಲವಾಯಿತು ಎಂಬುದನ್ನು ಪರಿಶೀಲನೆ ಮಾಡಿಲ್ಲ. ಈ ಬಗ್ಗೆ ಸರ್ಕಾರದವರು ಕೊನೇ ಪಕ್ಷ ಮಾನ್ಯ ಸದಸ್ಯರು ಬರೆದ ಕಾಗದಕ್ಕಾದರೂ ಸಕಾಲದಲ್ಲಿ ಉತ್ತರ ಬರೆಯಬೇಕು, ಹಾಗೆಯೇ ಏನು ಕಾರ್ಯಕ್ರಮ ತೆಗೆದುಕೊಂಡಿದೆ, ಅದರ ಫಲಿತಾಂಶವೇನು ಎಂಬುದನ್ನೂ ಕೂಡ ತಿಳಿಸಬೇಕು.

ಕೊನೆಯದಾಗಿ ಅರ್ಥಸಚಿವರು ಅವರ ಭಾಷಣದಲ್ಲಿ ನಾನ್ ಗೆಜೆಟೆಡ್ ಆಫೀಸರುಗಳಿಗೆ ಕೊಟ್ಟಿರುವ ಸೌಲಭ್ಯಗಳ ಬಗ್ಗೆ ಮಾತನಾಡುತ್ತಾ ಈ ರೀತಿ ಹೇಳಿದ್ದಾರೆ:

> "With a population of one lakh and above with the basic pay of Rs. 140—Rs. 32—50 Rs. 140 and above—up to 320—Rs. 42-50 with marginal adjustment".

ಸ್ವಾಮಿ, ಕಾರ್ಪೊರೇಷನ್ ಮತ್ತು ಸಿಟಿಗಳಲ್ಲಿ ಯಾವ ಸೌಲಭ್ಯವನ್ನು ಕೊಟ್ಟಿದ್ದಾರೋ ಅವೇ ಸೌಲಭ್ಯಗಳನ್ನು ಗ್ರಾಮಾಂತರಗಳಲ್ಲಿ ಇರುವ ಅಧಿಕಾರಿಗಳಿಗೂ ಕೂಡ ಕಲ್ಪಿಸಿಕೊಡಬೇಕು. ಏಕೆಂದರೆ ಹಿಂದಿನ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಉಪಾಧ್ಯಾಯರುಗಳಿಗೆ ವಾಸಮಾಡುವುದಕ್ಕೆ ಮನೆ ಮತ್ತು ಇತರ ಸೌಲಭ್ಯಗಳನ್ನು ಕೊಡುತ್ತಾ ಇದ್ದರು. ಈಗ ರೈತರು ಕಷ್ಟಪಡುತ್ತಾ ಇರುವಾಗ—ನಮ್ಮ ಕಡೆ "ಹನುಮಂತಪ್ಪನೇ ಹಗ್ಗ ತಿನ್ನುತ್ತಾ ಇರುವಾಗ ಯಾವನೋ ಶಾವಿಗೆ ಕೇಳುವುದಕ್ಕೆ ಹೋದನಂತೆ". ಎಂದು ಹೇಳಿ ಒಂದು ಗಾದೆ ಹೇಳುತ್ತಾರೆ, ಆ ರೀತಿ ಆಗಿದೆ. ತಾಲ್ಲೂಕು

ಹೆಡ್‌ಕ್ವಾರ್ಟರ್‌ನಲ್ಲಿ ವಾಸಮಾಡುತ್ತಾ ಇರುವ ನಾನ್ ಗೆಜೆಟೆಡ್ ಅಧಿಕಾರಿಗಳಿಗೂ ಕೂಡ ಪಟ್ಟಣ ಮತ್ತು ಕಾರ್ಪೊರೇಷನ್‌ಗಳಲ್ಲಿ ಕೊಡುತ್ತಾ ಇರುವ ಎಲ್ಲಾ ಸೌಲಭ್ಯಗಳನ್ನೂ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇವೆ.

ಕೊನೆಯದಾಗಿ, ಸರ್ಕಾರದವರು ಮಾಗಡಿ ಕ್ಷೇತ್ರದ ಬಗ್ಗೆ ತಾಳಿರುವ ಧೋರಣೆ ಬಹಳ ವಿಷಾದವಾದದ್ದು. ನಾನು ಮಂತ್ರಿಗಳಿಗೆ ಮತ್ತು ಅಧಿಕಾರಿಗಳಿಗೆ ಪ್ರಶ್ನೆಗಳ ಮೂಲಕ, ಕಾಗದ ಬರೆಯುವುದರ ಮೂಲಕ ಬೇಕಾದಷ್ಟು ಸಲ ಅರಿಕೆ ಮಾಡಿಕೊಂಡರೂ ಕೂಡ ತಾತ್ಸಾರ ಮನೋಭಾವ ತಾಳಿದ್ದಾರೆ. ಶ್ರೀ ಮಾನ್ ಟಿ. ಮಾದಯ್ಯಗೌಡರು ಭಾಷಣ ಮಾಡುತ್ತಾ ಇರುವಾಗ ವಿರೋಧ ಪಕ್ಷದವರು ಸಹಕರಿಸಲಿಲ್ಲ ಎಂಬ ವಿಷಯವನ್ನು ಹೇಳಿದರು. ಆದರೆ ಯಾವರೀತಿ ಸಹಕರಿಸಬೇಕು ಎಂಬ ವಿಷಯವನ್ನು ಅವರು ತಿಳಿಸಲಿಲ್ಲ, ಅದನ್ನು ಅವರು ತಿಳಿಸಬೇಕಾಗಿತ್ತು. ನಾವು ಇಷ್ಟು ಕಾಯಾ, ವಾಚಾ, ಮನಸಾ, ಸಹಕರಿಸಿದರೂ ಕೂಡ ಬೇಜವಾಬ್ದಾರಿಯಿಂದ ವರ್ತಿಸುತ್ತಾ ಇರುವುದು ಬಹಳ ವಿಷಾದವಾದದ್ದು. ಆದ್ದರಿಂದ ವಿರೋಧ ಪಕ್ಷದ ಸದಸ್ಯರು ಯಾವ ರೀತಿ ಸರ್ಕಾರದವರ ಜೊತೆಯಲ್ಲಿ ಸಹಕರಿಸಬೇಕು ಎಂಬುದನ್ನು ಮಾನ್ಯ ಮಾದಯ್ಯಗೌಡರು ಅವರ ಉತ್ತರದಲ್ಲಿ ತಿಳಿಸಿದ್ದರೆ ಬಹಳ ಸಂತೋಷವಾಗುತ್ತಾ, ಇತ್ತು ಆದರೆ ಅವರು ತಿಳಿಸಲಿಲ್ಲ. ಅದ್ದರಿಂದ ಸರ್ಕಾರದವರು ಮಾಗಡಿ ಕ್ಷೇತ್ರದ ಬಗ್ಗೆ ಏನು ಧೋರಣೆಯನ್ನು ತಾಳುತ್ತಾ ಇದ್ದಾರೆ ಅದನ್ನು ಬದಲಾಯಿಸಿ ಆ ಕ್ಷೇತ್ರಕ್ಕೆ ಏನು ಅನ್ಯಾಯವಾಗಿದೆ ಅದನ್ನು ಸರಿಪಡಿಸಿ ಆ ಜನತೆಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಮಾದಯ್ಯಗೌಡ (ರಾಮನಗರ).—ಸರಕಾರದೊಡನೆ ಸಹಕಾರ ಮಾಡುವುದಕ್ಕೂ ಸ್ಥಳೀಯ ಅಧಿಕಾರಿಗಳು ಕಿರುಕುಳ ಕೊಡುವುದಕ್ಕೂ ಏನು ಸಂಬಂಧ ? ಕಿರುಕುಳ ಕೊಟ್ಟರೆ ಮೇಲ್ಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಿಕೊಳ್ಳಬೇಕು.

ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೆ, ನನ್ನ ಸ್ನೇಹಿತರಾದ ಶ್ರೀಮಾನ್ ಜತ್ತಿಯವರು ಮೈಸೂರು ರಾಜ್ಯದ ಹಣಕಾಸಿನ ಅಖಾಡಾದಲ್ಲಿ ಶಕ್ತ್ಯಾನುಸಾರ ಕಸರತ್ತು ಮಾಡಿದ್ದಾರೆ. ರಾಜ್ಯದ ಹಣಕಾಸಿನ ವಾಸ್ತವಿಕ ಚಿತ್ರವನ್ನು ನಮ್ಮ ಮುಂದಿಟ್ಟಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಅಷ್ಟೊಂದು ತೃಪ್ತಿಕರವಾಗಿಲ್ಲ ಎಂಬುದನ್ನು ನಮಗೆ ತಿಳಿಸಿ ಖರ್ಚುವೆಚ್ಚಗಳನ್ನು ಕಡಮೆ ಮಾಡಬೇಕೆಂಬುದನ್ನು ಕೂಡ ಹೇಳಿದ್ದಾರೆ. ಅವರಿಗೆ ನನ್ನ ವಂದನೆಗಳನ್ನರ್ಪಿಸಬೇಕಾಗುತ್ತದೆ

ಈಗ ಮೂರನೆಯ ಪಂಚವಾರ್ಷಿಕ ಯೋಜನೆಯ ಅಂತಿಮ ವರ್ಷದಲ್ಲಿ ಕಾಲಿಟ್ಟಿದ್ದೇವೆ ನಾಲ್ಕನೆಯ ಯೋಜನೆಯ ವಿಚಾರದಲ್ಲಿ ಯೋಚನೆಮಾಡುವುದಕ್ಕೆ ಹೊರಟಿದ್ದೇವೆ. ಈ ಯೋಜನೆಗಳ ಪರಿಣಾಮವಾಗಿ ದೇಶದಾದ್ಯಂತ ಹಲವು ಪ್ರಗತಿ ಕಾರ್ಯಗಳು ನಡೆದಿವೆ, ಅಗಾಧವಾಗಿ ಆರ್ಥಿಕ ಪ್ರಗತಿ ಹೆಚ್ಚಿದರೂ ಕೂಡ ಮುಗಿಲು ಮುಟ್ಟುವ ಬೆಲೆ, ಭ್ರಷ್ಟಾಚಾರ ಮುಂತಾದುವುಗಳ ದೆಸೆಯಿಂದ ಜನರು ಸ್ವಲ್ಪ ಕಂಗೆಟ್ಟಿದ್ದಾರೆ. ಜೊತೆಗೆ ಸರಕಾರದ ಮೇಲೆ ಸಾಲದ ಹೊರೆಯೂ ಸಾಕಾದಷ್ಟು ಹೇರಲ್ಪಟಿದೆ. ಸಾರ್ವಜನಿಕರ ಮೇಲೂ ತೆರಿಗೆ ಹೊರೆಯು ಸಾಕಾದಷ್ಟು ಹೇರಲ್ಪಟ್ಟಿದೆ ನಾಲ್ಕನೆಯ ಯೋಜನೆಯ ವಿಚಾರವನ್ನು ಯೋಚನೆ ಮಾಡುವಾಗ ಇನ್ನು ಎಷ್ಟರಮಟ್ಟಿಗೆ ಜನತೆಯಮೇಲೆ ತೆರಿಗೆ ಹಾಕುವುದಕ್ಕೆ ಸಾಧ್ಯ ಮತ್ತು ಎಷ್ಟರಮಟ್ಟಿಗೆ ನಾವು ಹೊಸ ಸಾಲದು ಹೊರೆ ಹೊರುವುದಕ್ಕೆ ಸಾಧ್ಯ ಎಂದು ವಿಮರ್ಶೆ ಮಾಡುವ ಕಾಲ ಸನ್ನಿಹಿತವಾಗಿದೆ. ಜೊತೆಗೆ ಇನ್ನು ಮುಂದೆ ಯೋಜನೆಗಳನ್ನು ಕಾರ್ಯಗತ ಮಾಡುವಾಗ ಯಾವ ಯೋಜನೆಗಳು ಅವಶ್ಯಕ, ಯಾವ ಯೋಜನೆಗಳನ್ನು ಸ್ವಲ್ಪ ಕಾಲ ನಿಧಾನವಾಗಿ ಕೈಕೊಳ್ಳಲು ಸಾಧ್ಯ ಎಂಬುದನ್ನು ಸರಕಾರದವರು ವಿಮರ್ಶೆ ಮಾಡಬೇಕಾಗಿದೆ. ಆಡಳಿತದ ಸಿಬ್ಬಂದಿಯ ವೆಚ್ಚವನ್ನು ಎಷ್ಟರಮಟ್ಟಿಗೆ ಕಡಮೆ ಮಾಡಬೇಕೆಂಬುದನ್ನು ಕೂಡ ನಾವು ಬಹಳ ತೀವ್ರಗತಿಯಲ್ಲಿ ಯೋಚನೆಮಾಡಬೇಕು. ನಾವು ಕೆಲವು ಬಾರಿ. ಆಡಳಿತದ ವೆಚ್ಚವನ್ನು ಕಡಮೆಮಾಡುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಆದರೆ ಹಾಗೆ ಮಾಡಲು ಸಾಧ್ಯವಾಗಿಲ್ಲ. ನನ್ನ ಸ್ನೇಹಿತರಾದ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಕೆಲವು ವರ್ಷಗಳ ಹಿಂದೆ ಒಂದು ಸಮಿತಿಯನ್ನು ನೇಮಕ ಮಾಡಿದ್ದೆವು. ಆ ಸಮಿತಿಯವರು ಸರಕಾರಕ್ಕೆ ಕೆಲವು ಶಿಫಾರಸುಗಳನ್ನು ಮಾಡಿದ್ದರು. ನಾನೂ ಅವನ್ನು ನೋಡಿದ್ದೇನೆ. ಆದರೆ ಆ ಶಿಫಾರ್ಸುಗಳಲ್ಲಿ ಬಹು ಭಾಗ ಕಾರ್ಯ ರೂಪಕ್ಕೆ ಬಂದಿಲ್ಲ. ಅದರ ಜೊತೆಗೆ ಜತ್ತಿಯವರು ಹೇಳಿದಹಾಗೆ ಇನ್ನೊಂದು ಹೊಸ ಜಾತಿಯ ಸಿಬ್ಬಂದಿ ಜಾಸ್ತಿಯಾಗಿದೆ. ಯಾವ ವರ್ಗದ ಪ್ರಾಣಿ ಹೆಚ್ಚು ಸಂಖ್ಯೆಯಲ್ಲಿ ಮರಿ ಹಾಕುವುದಕ್ಕಿಂತ ಸರಕಾರದ ಹುದ್ದೆಗಳು ಮರಿ ಹಾಕುವುದು ಬಹಳ ಹೆಚ್ಚಾಗಿದೆ. ಒಂದು ಹುದ್ದೆ ಕಲ್ಪಿಸಿದ್ದರೆ ಆ ಹುದ್ದೇದಾರ ಎಷ್ಟು ಜನರಮೇಲೆ ತನ್ನ ಆಧಿಪತ್ಯ ನಡೆಸಬೇಕೆಂದು ವಿಚಾರ ಮಾಡುತ್ತಾನೆ. ತನ್ನ ಹೊಣೆಯನ್ನು ಬೇರೆಯವರಮೇಲೆ ಎಷ್ಟರಮಟ್ಟಿಗೆ ಹಾಕುವುದಕ್ಕೆ ಸಾಧ್ಯ ಎಂದು ಯೋಚನೆ ಮಾಡುತ್ತಾನೆ. ತನಗೆ ಹುದ್ದೆ ಸಿಕ್ಕಿದ ಕೂಡಲೆ ಕೆಲಸ ಬಹಳ ಜಾಸ್ತಿ ಎಂದು ಮರಿಹುದೆ

(ಶ್ರೀ ಕಡಿದಾಳ್ ಮಂಜಪ್ಪ)

ಸ್ಥಾಪನೆಮಾಡಲು ಶಿಫಾರ್ಸು ಮಾಡುತ್ತಾನೆ. ಈ ಕಾರಣದಿಂದ ಸಿಬ್ಬಂದಿ ವೆಚ್ಚ ವಿಪರೀತವಾಗಿದೆ ಎಂದು ಹೇಳಬೇಕಾಗಿದೆ. ಬಹಳ ಕಟ್ಟುನಿಟ್ಟಾಗಿ ನಿರ್ದಾಕ್ಷಿಣ್ಯವಾಗಿ ಸಿಬ್ಬಂದಿವೆಚ್ಚ ಕಡಮೆ ಮಾಡದಿದ್ದರೆ ಮುಂದೆ ಬಹಳ ದುರ್ದಿನ, ಮತ್ತು ಕಠಿಣವಾದ ಹಣಕಾಸಿನ ಪರಿಸ್ಥಿತಿ ಕಾಣಬೇಕಾಗುತ್ತದೆ. ಜತ್ತಿಯವರು ಇದನ್ನು ಮನಗಂಡಿದ್ದಾರೆಂದು ನಾನು ತಿಳಿದಿದ್ದೇನೆ. ಅವರು ಬಹಳ ಸೂಕ್ಷ್ಮ ಮತಿಗಳು ಆದರೆ ಅದು ಅವರೊಬ್ಬರಿಂದಲೇ ಸಾಧ್ಯವಿಲ್ಲ, ಮಂತ್ರಿಮಂಡಲ, ಅಧಿಕಾರವರ್ಗ ಅವರೊಡನೆ ಸಹಕರಿಸಬೇಕು. ಕೆಲವು ಇಲಾಖೆಗಳಲ್ಲಿ ಸಿಬ್ಬಂದಿ ಸಾಲದು ಎಂದರೆ ಕೆಲವು ಇಲಾಖೆಗಳಲ್ಲಿ ವಿಪರೀತವಾಗಿದೆ. ಮೈಸೂರು ರಾಜ್ಯದಲ್ಲಿ ವಿಲೀನೀಕರಣವಾಗುವುದಕ್ಕೆ ಮುಂಚೆ ಇಂಟೆಗ್ರೇಷನ್ ಆಗುವುದಕ್ಕೆ ಮುಂಚೆ ಇಬ್ಬರು ಚೀಫ್ ಎಂಜಿನಿಯರುಗಳಿದ್ದರು, ಒಬ್ಬರು ಪಿ.ಡಬ್ಲ್ಯು. ಮತ್ತು ನೀರಾವರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಇದ್ದರು ; ಇನ್ನೊಬ್ಬರು ವಿದ್ಯುಚ್ಛಕ್ತಿ ವಿಭಾಗಕ್ಕೆ ನೇಮಕವಾಗಿದ್ದರು. ಹಳೆಯ ರಾಜ್ಯ ಹೊಸ ರಾಜ್ಯದಲ್ಲಿ ಅರ್ಧಭಾಗ ಇತ್ತು. ಆಗ ಇಲಾಖೆಯವರೇ ಕೆಲವು ಕಾಮಗಾರಿಗಳನ್ನು ಕಾರ್ಯಗತ ಮಾಡುತ್ತಿದ್ದರು. ನುಗು, ತುಂಗ, ಭದ್ರಾ ಮುಂತಾದ ಜಲಾಶಯಗಳನ್ನು ಮಾಡುವಾಗ ನಾನು ಪಿ.ಡಬ್ಲ್ಯು. ಇಲಾಖೆ ಮಂತ್ರಿಯಾಗಿದ್ದೆ. ಆಗ ಪಬ್ಲಿಕ್ ವರ್ಕ್ಸ್ ಇಲಾಖೆಗೆ ಒಬ್ಬರು ಮಾತ್ರ ಚೀಫ್ ಎಂಜಿನಿಯರಿದ್ದರು. ಅದೇ ಈಗ ಎಷ್ಟು ಜನ ಚೀಫ್ ಎಂಜಿನಿಯರುಗಳಿದ್ದಾರೆಂಬುದನ್ನು ಯೋಚನೆಮಾಡಬೇಕು. ಆಹಾರದ ಇಲಾಖೆಯಲ್ಲಿ ಎಷ್ಟು ಜನ ಡೈರೆಕ್ಟರು ಮತ್ತು ಜಾಯಿಂಟ್ ಡೈರೆಕ್ಟರಿದ್ದಾರೆ ನೋಡಿ. ಹೀಗೆ ವಿವಿಧ ಇಲಾಖೆಗಳಲ್ಲಿ ಅನಾವಶ್ಯಕವೆಂದು ಹೇಳುವುದಕ್ಕಾಗುವುದಿಲ್ಲ, ನಮ್ಮ ಶಕ್ತಿಗೆ ಮೀರಿ ಸಿಬ್ಬಂದಿ ನೇಮಕಮಾಡಿದ್ದೇವೆ. ಆದುದರಿಂದ ನಿರ್ದಾಕ್ಷಿಣ್ಯವಾಗಿ ಸಿಬ್ಬಂದಿಯನ್ನು ನಾವು ಖೋತ ಮಾಡದಿದ್ದರೆ ಜನರಮೇಲೆ ಹೆಚ್ಚಿನ ತೆರಿಗೆ ಹೊರೆ ಹೇರಬೇಕಾಗುತ್ತದೆ. ಜನರಿಗೂ ತೆರಿಗೆ ಹೊರೆ ಹೊರುವುದಕ್ಕೆ ಒಂದು ಮಿತಿಯಿದೆ. ಅದನ್ನು ಯೋಚನೆ ಮಾಡಬೇಕು. ಯಾವ ಯೋಜನೆಯೇ ಆದರೂ ಯಶಸ್ವಿಯಾಗಬೇಕಾದರೆ ಸ್ವಚ್ಛವಾದ ರಾಜಕಾರಣ ಮತ್ತು ಉತ್ತಮವಾದ ಆಡಳಿತ ಆವಶ್ಯಕ. ಉತ್ತಮ ಆಡಳಿತ ಮತ್ತು ಸ್ವಚ್ಛ ರಾಜಕಾರಣವಿಲ್ಲದೆ ಯೋಜನೆಗಳನ್ನು ಕೈಕೊಂಡರೆ ಜನತೆಗೆ ಅದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದುದರಿಂದ ಒಂದು ಕಡೆ ದಕ್ಷತೆಯನ್ನು ಹೆಚ್ಚಿಸುವುದಕ್ಕೆ ಪ್ರಯತ್ನಿಸಬೇಕು, ಇನ್ನೊಂದು ಕಡೆ ಭ್ರಷ್ಟಾಚಾರ ನಿರ್ಮೂಲದ ಕಡೆಗೆ ಗಮನ ಕೊಡಬೇಕು. ಇವತ್ತು ಹಿಂದೂಸ್ಥಾನಕ್ಕೆ ಕೆಲವು ಪ್ರಬಲವಾದ ಶತ್ರುಗಳಿದ್ದಾರೆ, ದೇಶದ ಹೊರಗೆ ಕೆಲವು ಶತ್ರುಗಳಿದ್ದರೆ ಒಳಗೂ ಕೆಲವು ಶತ್ರುಗಳಿದ್ದಾರೆ. ಚೀಣಾ ದೇಶ ಹೊರಗಡೆಯ ಶತ್ರುವಾದರೆ ಭ್ರಷ್ಟಾಚಾರ ಮತ್ತು ಚೀಣೀಯ ಮಿತ್ರರು ದೇಶದೊಳಗಿರುವ ಶತ್ರುಗಳಾಗಿದ್ದಾರೆ. ಒಳಗಿರುವ ಶತ್ರು ಮೊದಲನೆಯ ಶತ್ರು, ಹೊರಗಡೆ ಇರುವವರು ಎರಡನೆಯ ಶತ್ರು. ಒಳಗಡೆ ಇರುವ ಶತ್ರುವನ್ನು ಕೊಂದರೆ ಮಾತ್ರ ಹೊರಗಡೆ ಇರುವ ಶತ್ರುವನ್ನು ಕೊಲ್ಲುವುದಕ್ಕೆ ಸಾಧ್ಯ ಎಂದು ಹೊಸದಾಗಿ ಹೇಳಬೇಕಾಗಿಲ್ಲ. ಆದುದರಿಂದ ಈ ದೇಶದಲ್ಲಿ ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಹೊರಗಡೆ ಇರುವ ಶತ್ರುವನ್ನು ಜಯಿಸಬೇಕಾದರೆ ಒಳಗಿರುವ ಶತ್ರುವನ್ನು ಮೊದಲು ಜಯಿಸಬೇಕು ಮತ್ತು ಸ್ವಚ್ಛವಾದ ರಾಜಕಾರಣ ಮತ್ತು ಆಡಳಿತವಿರಬೇಕಾದ್ದು ಬಹಳ ಅಗತ್ಯ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಇವತ್ತು ಭ್ರಷ್ಟಾಚಾರದಲ್ಲಿ ಏನಾಗಿದೆ? ಯಾವಾಗ ಭ್ರಷ್ಟಾಚಾರ ದೇಶದಲ್ಲಿ ಜಾಸ್ತಿ ಆಗುತ್ತದೆಯೋ ಆಗ ದೇಶದಲ್ಲಿ ಸಂಪತ್ತು ಕೆಲವೇ ವ್ಯಕ್ತಿಗಳ ಕೈಯಲ್ಲಿ ಸೇರುತ್ತದೆ. ಕೆಲವೇ ವ್ಯಕ್ತಿಗಳ ಕೈಯಲ್ಲಿ ಸಂಪತ್ತು ಸೇರಿದಾಗ ಕಳ್ಳ ಹಣ ಉತ್ಪನ್ನವಾಗುತ್ತದೆ. ಕಳ್ಳಹಣ ಉತ್ಪನ್ನವಾದಾಗ ಹಣದ ಉಬ್ಬರ ಜಾಸ್ತಿಯಾಗುತ್ತದೆ. ಹಣದ ಉಬ್ಬರ ಜಾಸ್ತಿ ಆಗುವುದರಿಂದ ಬೆಲೆಗಳು ಮುಗಿಲನ್ನು ಮುಟ್ಟುತ್ತವೆ. ಬೆಲೆಗಳು ಮುಗಿಲನ್ನು ಮುಟ್ಟಿದಾಗ ಜನಸಾಮಾನ್ಯರ ಖರ್ಚುವೆಚ್ಚಗಳು ಹೆಚ್ಚಾಗುತ್ತವೆ. ಅದರಿಂದ ಅವರು ಸಂಕಷ್ಟಗಳಿಗೆ, ದುಃಖಗಳಿಗೆ ಈಡಾಗುತ್ತಾರೆ. ಕಳ್ಳ ಹಣವನ್ನು ಕಂಡುಹಿಡಿಯುವುದು ಅಥವಾ ಕಳ್ಳಹಣ ಶೇಖರಣೆಯಾಗದೆ ಇರುವ ಹಾಗೆ ಮಾಡುವುದು ನಮ್ಮ ಕೈಯ್ಯಲ್ಲಿ, ಮೈಸೂರು ರಾಜ್ಯದ ಕೈಯ್ಯಲ್ಲಿ ಸಂಪೂರ್ಣವಾಗಿ ಸಾಧ್ಯವಾಗದೆ ಇರಬಹುದು ; ನಮಗೆ ಆಸ್ಪದವಿರುವಷ್ಟು ಮಟ್ಟಿಗೆ ಕಳ್ಳಹಣ ಕೆಲವೇ ವ್ಯಕ್ತಿಗಳ ಕೈಯ್ಯಲ್ಲಿ ಸಿಕ್ಕದಹಾಗೆ ನೋಡಿಕೊಳ್ಳಬೇಕಾದ್ದು ಬಹಳ ಅಗತ್ಯ.

ಆಡಳಿತ ದಕ್ಷತೆಯ ವಿಚಾರದಲ್ಲಿ ನನ್ನ ಅನುಭವದಿಂದ ಹೇಳುವುದಾದರೆ ಕೆಲವು ಉನ್ನತ ಮಟ್ಟದ ಅಧಿಕಾರಿಗಳಿಗೆ ಸೂಪರ್‌ವಿಷನ್ ಎಂದರೆ ಮೇಲ್ವಿಚಾರಣೆ ಎಂದು ಹೇಳುತ್ತಾರಲ್ಲ ಅದರ ಗಂಧವೇ ತಿಳಿಯದು ಎಂದು ವಿಷಾದದಿಂದ ಹೇಳಬೇಕಾಗಿದೆ. ಶ್ರೀಮಾನ್ ಜತ್ತಿಯವರಿಗೆ ಬೇಕಾದರೆ ಒಂದು ಛಾಲೆಂಜ್ ಮಾಡಿ ಹೇಳುತ್ತೇನೆ, ನಾನು ಇನ್‌ಸ್ಪೆಕ್ಷನ್ ಮಾಡಿದ ಹಾಗೆ ಎಷ್ಟು ಜನ

ಇನ್‌ಸ್ಪೆಕ್ಷನ್ ಮಾಡುತ್ತಾರೆ. ಕೆಲವರು ಮಾತ್ರ ಅಲ್ಲಲ್ಲಿ ಇರಬಹುದು. ಇಂಗ್ಲಿಷರು ಇಲ್ಲಿ ಆಳುತ್ತಿರ ಬೇಕಾದರೆ ಆಗ ಒಂದು ರೀತಿಯ ನವಾಬಗಿರಿ ಇತ್ತು. ಆದರೆ ಈಗ ಕೆಲವರು ಕರಿಯ ನವಾಬ ರಾಗಿದ್ದಾರೆ.

ಶ್ರೀ ಎಸ್. ಶಿವಪ್ಪ.—ಬ್ರೌನ್ ನವಾಬರು ಸ್ವಾಮಿ !

ಶ್ರೀ ಕಡಿದಾಳ್ ಮಂಜಪ್ಪ.—ಜನತೆಯ ಕಷ್ಟಗಳೇನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅವರು ಅಸಮರ್ಥರಾಗಿದ್ದಾರೆ. ಅವರು ತಮ್ಮ ಭಾಗದ ಕೆಲಸವನ್ನು ಸರಿಯಾಗಿ ನಡೆಸುತ್ತ ಇದ್ದಲ್ಲಿ ಆಡಳಿತ ಹೆಚ್ಚಿನ ದಕ್ಷತೆಯಿಂದ ಕೆಲಸ ಮಾಡುತ್ತಿತ್ತು ಎಂದು ನಾನು ಹೇಳಬೇಕಾಗಿದೆ. ಕೆಲವರಂತೂ ನವಾಬರಾಗಿದ್ದಾರೆ. ನಾನು ನನ್ನ ಅನುಭವದಲ್ಲಿ ನೋಡುತ್ತಿದ್ದೇನೆ, ಒಬ್ಬಿಬ್ಬರು ಅಧಿಕಾರಿಗಳನ್ನು ಫೋನ್‌ನಲ್ಲಿ ಕಾಂಟಾಕ್ಟ್ ಮಾಡಬೇಕಾದರೆ ನನ್ನಂಥವನಿಗೇ ಇಷ್ಟು ಕಷ್ಟವಾದರೆ ಇನ್ನು ಜನಸಾಮಾನ್ಯರ ಸ್ಥಿತಿ ಏನು ಎನ್ನುವುದನ್ನು ಯೋಚಿಸಬೇಕು. ನಾನು ಎರಡು ದಿನ ಇಬ್ಬರು ಅಧಿಕಾರಿಗಳಿಗೆ ಫೋನ್‌ನಲ್ಲಿ ಕಾಂಟಾಕ್ಟ್ ಮಾಡಬೇಕೆಂದು ಪ್ರಯತ್ನ ಮಾಡಿದೆ. ಎರಡು ದಿವಸ ಪ್ರಯತ್ನ ಮಾಡಿದರೂ ಸಿಕ್ಕಲಿಲ್ಲ.

ಶ್ರೀ ಬಿ. ಡಿ. ಜತ್ತಿ.—ಫೋನ್ ಕೆಟ್ಟಿರಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಕೆಲವರು ರಿಸೀವರನ್ನು ತೆಗೆದು ಕೆಳಗೆ ಇಡುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ (ಮದ್ದೂರು).—ಅವರು ಮಂತ್ರಿಗಳನ್ನು ಹುಡುಕಿಕೊಂಡು ಹೋಗಿರ ಬಹುದು.

ಶ್ರೀ ಕಡಿದಾಳ್ ಮಂಜಪ್ಪ.—ಸಾಹೇಬರು ಲಂಚಿಗೆ ಹೋಗಿದ್ದಾರೆ, ಮೀಟಿಂಗಿಗೆ ಹೋಗಿ ದ್ದಾರೆ ಎಂದು ಜವಾನರು ಹೇಳುತ್ತಾರೆ. ಅವರಿಗೆ ಸಂಬಳ ಕೊಡುವುದು ನವಾಬಗಿರಿ ನಡೆಸು ವುದಕ್ಕಾಗಿಯೇ ಎಂದು ಕೇಳುತ್ತೇನೆ. ಮಂತ್ರಿಗಳನ್ನು ನೋಡಿ ಮಾತನಾಡುವುದು ಸುಲಭ. ಅವರೊಡನೆ ಫೋನಿನ ಮೂಲಕ ಮಾತನಾಡುವುದೂ ಸುಲಭ. ಆದರೆ ಕೆಲವು ನವಾಬರ ಹತ್ತಿರ ಮಾತನಾಡುವುದು ಬಹಳ ಕಷ್ಟವಾಗಿದೆ. ಸರ್ಕಾರದವರು ಸ್ವಲ್ಪ ಈ ನವಾಬರುಗಳಿಗೆ ಅವರು ಜನತೆಯ ಸೇವಕರು ಎನ್ನುವುದನ್ನು ಮನಗಾಣುವಂತೆ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಈ ನವಾಬಗಿರಿಯನ್ನು ನಾನು ಸಹಿಸುತ್ತಿರಲಿಲ್ಲ.

ಯಾವ ರಾಜ್ಯ ವಿಸ್ತಾರವಾಗಿ ಹೊಸ ಮೈಸೂರು ರಾಜ್ಯ ಸ್ಥಾಪನೆಯಾಗಿ ಒಂಬತ್ತು ವರ್ಷ ವಾದರೂ ಈ ಅವಧಿಯಲ್ಲಿ ಭಾವೈಕ್ಯತೆ ಎಷ್ಟಾಗಬೇಕೋ ಅಷ್ಟು ಆಗಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಆಗುವುದೂ ಇಲ್ಲ.

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೆ ಕಾರಣಗಳನ್ನು ಸ್ವಲ್ಪಮಟ್ಟಿಗೆ ಪರಿಶೀಲಿಸಬೇಕು. ಭಾವೈಕ್ಯತೆ ಆಗುವುದು ಬಹಳ ಅವಶ್ಯಕ. ಮೊದಲನೆಯದು ಒಂದು ಪ್ರದೇಶದ ಜನರು ಇನ್ನೊಂದು ಪ್ರದೇಶದ ಜನರನ್ನು ತಿಳಿದುಕೊಳ್ಳುವುದಕ್ಕೆ ಸಾಕಾದಷ್ಟು ಪ್ರಯತ್ನ ಮಾಡಿಲ್ಲ. ಎರಡನೆಯದು ನಾನು ಮೊದಲು ಹೇಳಿದ ಹಾಗೆ ಕೆಲವು ನವಾಬರು ಎಂದು ತಿಳಿದುಕೊಂಡಿರುವವರು ಅವರ ಜೊತೆಗೆ ಕೆಲವು ರಾಜಕಾರಣಿಗಳೂ ಇದ್ದಾರೆ! ಅವರುಗಳು ಈ ರಾಜ್ಯವನ್ನು ಆಳುವುದಕ್ಕೆ ಭಗವಂತ ತಮ್ಮನ್ನು ಸೃಷ್ಟಿ ಮಾಡಿದ್ದಾನೆಂದು ತಿಳಿದುಕೊಂಡಿದ್ದಾರೆ. ಅವರ ಆಜನ್ಮಸಿದ್ಧವಾದ ಹಕ್ಕು ಈ ಕನ್ನಡನಾಡನ್ನು ಆಳತಕ್ಕದ್ದು ಎಂದು ತಿಳಿದುಕೊಂಡಿದ್ದಾರೆ. ಆ ಮನೋಭಾವದಿಂದ ಭಾವೈಕ್ಯತೆ ಸರಿಯಾಗಿ ಉಂಟಾಗುವುದಕ್ಕೆ ಸಾಧ್ಯವಾಗಿಲ್ಲ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ.

ಕೆಳದರ್ಜೆ ನೌಕರರ ವಿಚಾರದಲ್ಲಿ ನಮ್ಮ ಮಿತ್ರರು ಸಹಾನುಭೂತಿಯ ಮಾತುಗಳನ್ನು ಹೇಳಿ ದ್ದಾರೆ. ಅವರ ಜೀವನ, ಇಂದಿನ ಬೆಲೆಯ ದೃಷ್ಟಿಯಿಂದ ಪರಿಶೀಲನೆ ಮಾಡಿದರೆ, ಬಹಳ ಕಷ್ಟಕರ ವಾಗಿದೆ. ಅದರಲ್ಲಿಯೂ ಪ್ರಾಮಾಣಿಕರಾಗಿರತಕ್ಕ ಕೆಳದರ್ಜೆ ನೌಕರರು ಬಹುಶಃ ನರಕಯಾತನೆ ಯನ್ನು ಅನುಭವಿಸುತ್ತಿದ್ದಾರೆಂದು ನನ್ನ ಭಾವನೆ. ಅವರು ನಮ್ಮೆಲ್ಲರ ಗೌರವಕ್ಕೆ ಅರ್ಹರಾಗಿ ದ್ದಾರೆ. ನಾವೂ, ನೀವೂ, ಸಾವಿರಾರು ರೂಪಾಯಿ ಸಂಬಳ ಪಡೆಯುವವರೂ ಪ್ರಾಮಾಣಿಕರಾಗಿರು ವುದು ದೊಡ್ಡದಲ್ಲ. ಕೆಳದರ್ಜೆಯ......

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ನಾವೂ ಇಲ್ಲ ಸ್ವಾಮಿ.

ಶ್ರೀ ಕಡಿದಾಳ್ ಮಂಜಪ್ಪ.—ಕೆಳದರ್ಜೆಯ ನೌಕರರಲ್ಲಿ ಪ್ರಾಮಾಣಿಕರಾಗಿರತಕ್ಕವರು, ನಮ್ಮೆಲ್ಲರಿಗಿಂತ ಶ್ರೇಷ್ಠರು, ಕೆಳದರ್ಜೆಯ ನೌಕರರು ಅವರ ಜೀವನ ಇವತ್ತು ನಿಜವಾಗಿಯೂ ಬಹಳ ಕಷ್ಟಕರವಾದ ಜೀವನವಾಗಿದೆ. ಅವರ ವಿಚಾರದಲ್ಲಿ ನಮ್ಮ ಸಂಪೂರ್ಣ ಸಹಾನುಭೂತಿ ಬಹಳ ಅಗತ್ಯ. ಅವರ ಇಂದಿನ ಪರಿಸ್ಥಿತಿಯಲ್ಲಿ ಅವರ ಸಹಾಯಕ್ಕೆ ನಾವು ಪ್ರಯತ್ನ ಪಡುವುದು ಬಹಳ ಅಗತ್ಯ ಎಂದು ನಾನು ಹಣಕಾಸಿನ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸರ್ಕಾರದ ಕಷ್ಟವೂ ನನಗೆ ಗೊತ್ತಿದೆ. ಆದರೆ ಅವರ ಕಷ್ಟಗಳನ್ನೂ ಪರಿಹಾರ ಮಾಡುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಅದಕ್ಕೆ ಸ್ವಲ್ಪ ಉಪಾಯವನ್ನು ಹೇಳುತ್ತಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಾನೂ ಮತ್ತು ಮಾನ್ಯ ಮಂತ್ರಿಗಳೂ ಆ ಬಗ್ಗೆ ಮಾತನಾಡ ಬಹುದು.

ಇನ್ನು ಕಂದಾಯದ ಪುನರ್ವಿಮರ್ಶೆ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳತಕ್ಕ ಇಚ್ಛೆಯುಳ್ಳವನಾಗಿದ್ದೇನೆ. ರೈತರು ಕಂದಾಯ ಕೊಡಬಾರದು ಎಂದು ಹೇಳುವುದಿಲ್ಲ. ಈಗಿರತಕ್ಕ ಕಂದಾಯವೇ ಶಾಶ್ವತವಾಗಿ ಉಳಿಯಬೇಕು ಎನ್ನುವ ಅಭಿಪ್ರಾಯವನ್ನೂ ಉಳ್ಳವ ನಾಗಿಲ್ಲ. ನಾನು ರೆವೆನ್ಯೂ ಮಂತ್ರಿಯಾಗಿದ್ದಾಗ ಕಂದಾಯದ ಪುನರ್ವಿಮರ್ಶೆ ಆಗಬೇಕೆಂದು ಕೆಲವು ಕಾರ್ಯಕ್ರಮಗಳನ್ನು ಕೈಗೊಂಡಿತ್ತು. ಆದರೆ ಈಗ ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಮುಂದೆ ವರದಿಯನ್ನು ಒಪ್ಪಿಸಿದ್ದಾರೆ. ಅದರ ಪ್ರಕಾರವಾಗಿ ನಾವು ಕಂದಾಯವನ್ನು ಒಪ್ಪುವು ದಾದರೆ ಜನಸಾಮಾನ್ಯರಲ್ಲಿ, ಅದರಲ್ಲಿಯೂ ವ್ಯವಸಾಯಗಾರರಲ್ಲಿ ಬಹಳ ಗಾಬರಿಯಾಗಿ ಭಯಾನಕ ವಾತಾವರಣ ಉಂಟಾಗಬಹುದು ಎಂದೆನ್ನಿಸುತ್ತದೆ. ಇತ್ತೀಚೆಗೆ ಕೆಲವರು ಪರಿಣತರು ಅನ್ನಿಸಿ ಕೊಂಡಿರುವವರು ಮತ್ತು ಕೆಲವರು ಮುಖಂಡರು ಪಂಚವಾರ್ಷಿಕ ಯೋಜನೆಗೆ ವ್ಯವಸಾಯಗಾರರನು ಹೆಚ್ಚು ತೆರಿಗೆಯನ್ನು ಕೊಡಬೇಕು ಎಂದು ಪ್ರತಿಪಾದನೆ ಮಾಡುತ್ತಿದ್ದಾರೆ. ವ್ಯವಸಾಯಗಾರರಲ್ಲಿ ಶೇಕಡ 90 ಜನರು ನವಾಜದ ಕೆಳ ಪದರದಲ್ಲಿದ್ದಾರೆ. ಸರ್ಕಾರಿ ನೌಕರಿಯಲ್ಲಿ ಜವಾನರೇನಿದ್ದಾರೆ, ಅವರಿಗೂ ಕೂಡ ಕಡಮೆ ಮಟ್ಟದಲ್ಲಿದ್ದಾರೆ. ಪಟ್ಟಣದಲ್ಲಿ ಕೈಗಾರಿಕೆಗಳಲ್ಲಿ ಕೂಲಿ ಕೆಲಸದಲ್ಲಿ ನಿರತ ರಾಗಿರುವ ಜನರೇನಿದ್ದಾರೆ ಅವರಿಗಿಂತ ಕೆಳಮಟ್ಟದಲ್ಲಿದ್ದಾರೆ. ಇಂಥವರು ಶೇಕಡ 90 ಜನ ರೈತರಿದ್ದಾರೆ. ಅವರ ಮೇಲೆ ತೆರಿಗೆಯನ್ನು ವಿಧಿಸುವಾಗ ಹಿಂದು ಮುಂದೆ ವಿಚಾರ ಮಾಡಬೇಕಾ ದುದು ಬಹಳ ಅಗತ್ಯವೆಂದು ವಿನಂತಿಮಾಡಿಕೊಳ್ಳುತ್ತೇನೆ.

ಈಚೆಗೆ ಕೆಲವು ವರ್ಷಗಳಿಂದ ವ್ಯವಸಾಯಗಾರರ ಮೇಲೆ ಹೆಚ್ಚಿನ ತೆರಿಗೆಯ ಹೊರೆ ಬಿದ್ದಿದೆ. ಅವರು ಕೊಡಬೇಕಾಗಿರುವ ವಾಟರ್ ರೇಟ್, ಭೂಕಂದಾಯ, ಮೇಂಟೆನೆನ್ಸ್ ಸೆಸ್, ಇದನ್ನೆಲ್ಲ ಲೆಕ್ಕ ಹಾಕಿದರೆ ಕೆಲವು ರೈತರ ರೈತಾಪಿ ಕಸಬನ್ನು ಬಿಡುತ್ತಾರೆ ಎನ್ನುವ ಸಂದೇಹ ಬರುತ್ತದೆ. ಕಂದಾಯ, ಅದರ ಜೊತೆಗೆ ಸೆಸ್, ನೀರಿನ ತೆರಿಗೆ, ಅದರ ಜೊತೆಗೆ ಬೆಟರ್‌ಮೆಂಟ್ ಲೆವಿ... ..

Mr. SPEAKER.—May I suggest to the Hon'ble Member that he can speak on Revenue when the Revenue Demand comes up ?

4-00 P.M.

ಶ್ರೀ ಕಡಿದಾಳ್ ಮಂಜಪ್ಪ.—ಆಗಬಹುದು. ರೆವಿನ್ಯೂ ಖಾತೆ ಬೇಡಿಕೆ ಬಂದಾಗ ಆ ವಿಷಯ ವನ್ನು ಪ್ರಸ್ತಾಪಮಾಡುತ್ತೇನೆ. ಈಗ ಒಟ್ಟಿನಲ್ಲಿ ಹೇಳುವುದಾದರೆ ಈಗ್ಗೆ 2-3 ವರ್ಷಗಳ ಹಿಂದೆ ಯಾವ ಕಂದಾಯವನ್ನು ಹಾಕಿದ್ದರೋ ಅದರ ಜೊತೆಗೆ ದುಬಾರಿ ಪ್ರಮಾಣದಲ್ಲಿ ಕಂದಾಯವನ್ನು ಹಾಕಿದರೆ ರೈತಾಪಿ ಜನರು ವ್ಯವಸಾಯಮಾಡಲು ಬಹಳ ಕಷ್ಟವಾಗುತ್ತದೆ, ಅವರು ಮರ್ಯಾದೆ ಯಿಂದ ಬಾಳುವುದೂ ಸಹ ಕಷ್ಟವಾಗುತ್ತದೆಂಬುದಾಗಿ ತಮ್ಮಲ್ಲಿ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಇನ್ನೊಂದು ವಿಚಾರ. ಒಂದೆರಡು ಇಲಾಖೆಗಳಲ್ಲಿ ಅಧಿಕಾರಿಗಳ ವಿಷಯದ ಬಗ್ಗೆ ಸ್ವಲ್ಪ ಚಮತ್ಕಾರಗಳು ನಡೆಯುತ್ತಾ ಇವೆಯೆಂದು ನನಗೆ ಕಾಣುತ್ತಿದೆ.

ಅಧ್ಯಕ್ಷರು.—" ಚಮತ್ಕಾರ " Which is that ?

ಶ್ರೀ ಕಡಿದಾಳ್ ಮಂಜಪ್ಪ.—ಸ್ವಲ್ಪ ಪಗಡೆಯಾಟ. ಅದು ಸರ್ಕಾರದವರು 5 ವರ್ಷಗಳ ಯೋಜನೆ ಮಾಡಿದರೆ ಅಧಿಕಾರಿಗಳಾಗಿರುವವರು 20 ವರ್ಷಗಳ ಯೋಜನೆಗಳನ್ನು ಮಾಡುವುದು. ಅಲ್ಲದೆ ತಮಗೆ ಬೇಕಾದವರನ್ನು ಆಯಕಟ್ಟಿನ ಆ ಸ್ಥಳಗಳಲ್ಲಿ ಹಾಕುವುದು, ಪ್ರೊಮೋಷನ್‌ಗಳನ್ನು ಕೊಡುವ ಹೊತ್ತಿಗೆ ತಮಗೆ ಬೇಡವಾದವರ ಮೇಲೆ ಚಾರ್ಜ್‌ಷೀಟ್ ಸರ್ವ್ ಮಾಡಿ ಅವರನ್ನು ಸೂಪರ್ ಸೀಡ್ ಮಾಡುವುದು, ಆ ರೀತಿ ಸೂಪರ್‌ಸೀಡ್ ಆದ ಇಬ್ಬರ ವಿಚಾರ ನನ್ನ ಗಮನಕ್ಕೆ ಬಂದಿದೆ. ಆ ಅಧಿಕಾರಿಗಳಿಬ್ಬರೂ ನನ್ನ ಕೈಕೆಳಗೆ ಕೆಲಸಮಾಡಿರುತ್ತಾರೆ. ಅವರ ಕೆಲಸ ನಾನು ಚೆನ್ನಾಗಿ ಬಲ್ಲೆ. ಅವರನ್ನು ಸೂಪರ್‌ಸೀಡ್ ಮಾಡಿ ಪ್ರಮೋಟ್ ಆದ ಅಧಿಕಾರಿಗಳಿಗಿಂತ ನನ್ನ ಕೈಕೆಳಗೆ ಕೆಲಸ ಮಾಡಿದ ಆ ಇಬ್ಬರು ಅಧಿಕಾರಿಗಳು ಉತ್ತಮರು ಎಂಬುದಾಗಿ ನಾನು ಧೈರ್ಯವಾಗಿ ಹೇಳಬಲ್ಲೆ. ಸಂಬಂಧಪಟ್ಟ ಮಂತ್ರಿಗಳು ಈ ರೀತಿಯಾಗುತ್ತಿರುವುದನ್ನು ಕೂಡಲೇ ತಡೆಗಟ್ಟಬೇಕು.

ಕೊನೆಯದಾಗಿ ಮಾನ್ಯ ಅಧ್ಯಕ್ಷರು ಇಷ್ಟು ಹೊತ್ತು ನನಗೆ ಈ ಸಭೆಯಲ್ಲಿ ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**Sri V. S. PATIL** (Belgaum I).—Sir, in this budget speech, the Hon'ble Finance Minister has stated several things but I do not find any change in the outlook so far as framing of the budget is concerned. We have seen these budgets being prepared when we were under British rule. At that time the main point that was considered by the imperialistic powers was His Majesty the King Emperor and then through Governor General and the Viceroy and from him downwards to the iron-frame i.e., I.C.S. people, Maharajas and Rajas on the other side and then it went down up to the village level of Patels and Talatis, etc. In those budget the interest of those links was alone before the Government. They wanted to strengthen the interest and powers of this particular link and that was correct so far as maintenance of the British Empire was concerned. After independence, when our country is declared to be a Republic and when our Constitution came into force from 26th January 1950 we expected a changed outlook, so far as preparation of the budget is concerned. We expected that the main intention must be the welfare of the individuals of this country because notionally and legally every individual in this country is the owner or is the person occupying the highest position in the country and so his interest must be looked into first. That outlook ought to have been kept while framing the budget of our States. This fundamental change in the outlook has not at all been carried out or even attempted by any of the Finance Ministers. Hence I would like to say that we are following the same pattern that was devised by the Britishers and we cannot say this is people's budget. It is a budget of the civil servants and other servants of the State and not of the people. Due to this attitude of the Government we are still in darkness; we are still in wilderness or I may say, we are still wandering in the sandy deserts to find out solace for the people of the country. In this budget there are one or two places just like oasis in the desert. There are some remarks which deserve to be encouraged and therefore, I may point out them. These remarks relate to economy measures. The Hon'ble Minister has stated that it would be possible to retrench staff atleast by 20 to 30 per cent by stages by not filling up posts arising from retirement and drafting the existing staff for new planned scheme. What is required is that the existing staff should put in more effort and turn out more work and the tendency of creating a hierarchy of staff at all levels should be given up. Instead of having larger number of discontented and inefficient staff, it should be our endeavour to have smaller number of well-trained and contented staff. This is an oasis in the desert of this speech. This is not a new thing but what has our Government done during all these years to enforce this idea in the administration. Have they effected this retrechment ? According to the Minister 20 to 30 per cent of the staff is in exces. May I ask this Hon'ble Minister why have you allowed all these hands to continue all these years ? The main thing appears to be that so far as recruitment and continuance in the services are concerned it is not the efficiency, not the knowledge of work turned out by the servants, that were the criteria for enlistment or retention in the service

(SRI V. S. PATIL)

but the corruption and pulls which the ruling party has got on these officers appear to be the main cause for all this deterioration in the administration. So, atleast now when the finacial crisis is raising its head and when the Government is rather unable to cope with the financial position, a good idea has struck the Finance Minister and I hope this policy will be proceeded further. In that respect we all will help him so far as possible within our power. But it must be done; it is no use merely saying in the House or printing in books.

Our officers are concerned not with the actuals needs of the State, but they are concerned more with the papers. I can say Sir, in our District, they are more concerned with the papers they get. He will never look into the actual needs or never listen to the difficulties or any sort of such things or reasons. I can quote, one instance when the food crisis was going on about six months back, private cellection of food was made in Maharastra through the political leaders co-operating with the Government servants. The same idea was placed before the Head of the District both by the Congress Party and Opposition and requested him to lend help to us to go to the villages and that help was simply to ask the subordinates to co-operate with us and we can collect the foodgrains from the villages for distribution. But bluntly told us unless I receive orders from the Government I cannot do anything". This is the attitude from the concerned officers. They are concered only with the papers and that is why we call them Paper Tigers and such attitude on the part of the Government Officers will really hamper the work that is enuntiated by the Government. They restrict themselves only to the papers and orders without looking to the actual difficulty in the country side which is coming in the way of our prosperity. Referring to pege 7, the Hon ble Minister has said " if our economy has to develop and stabilise, it will only be possible if we are in a position to generate agricultural surpluses." This is the basic idea. But what the Government is doing. The Minister may say these words on the floor of the House. The newspapers will print them. But what about the actual difficulty? Are the Officers really helping people in food production. That is the main thing which we have to consider. Sir, there is a recent example in my own District so far this point is concerned. Agricultural preduction Seminars were held at Village Bolcks and District levels. The District level Seminar was held on the 27th of last month. Sir, a request was made to the Deputy Commissioner that as 26th has been fixed for attending the Sessions of this House, the meeting may be called on the 24th so that the representatives of the people may be able to attend and listen to expert opinion and experience and we must also know how agricultural production could be increased and we can also contribute to some extent in that Seminar. But he bluntly refus d and said that he has no time on the 24th and on 25th he has to go to certain villages as programmed, and that he would be very glad if we make it convenient to attend.

on the 27th. Is that the way in which the co-operation of the people is to be obtained by these Officers. If these Officers are simply to say or to look to their own conveniences and not to the convenience of the representatives of this type-M.L.As, I do not think that they have real intentions to do the work. Tney simply hold Seminars and meetings whether anybody attends, whether it will be beneficial to the people, whether there is any effect on the increase of food production. This is none of their concern. We have discussed so many things and sent reports—that is all. They do not look to anything that is coming in the way of prosperity. They have nothing to say in fact what is being increased in production. Is anybody carring for this particular thing. That is why there is a tremendous downfall in production. I have no faith in the present statistics, because they are not based on facts but more conjuctures. Once I happened to see a particular Officer and asked him how do you say that increase in paddy crop is so much. He stated when water is supplied, two more bags of paddy per acre we will get; if a particular fertilizer is used, two more bags we get. In this way they calculate and send reports that the production of paddy in Belgaum is increased by so many thousands of tons without knowing whether it was actually sown, watered manured etc. Similarly in this report they say so many wells were dug up and so many tons have been increased Was it actually increased and whether it was actually used, no body knows. That is why I have made suggestions several times on the floor of this House, that Village Panchayats must be entrusted with the work of collecting data in their village and what is the total yield of the Village of various kinds etc. But this is not done. We are merely summerising which is not known to ourselves. In this way we are collecting this data and that is one of the reasons why our plans are hampered. Even though we are spending so many crores, still our plans are not I do not—say complete failure—successful.

I should like to say one thing that due to deficit in this Budget, the Hon'ble Minister has, it appears, axed to the Minor Irrigation to the extent of about 4 crores to meet out the deficiency of 8 crores in the plan sector that it appears rather unreasonable because, minor Irrigation is the main thing that is required to be done. The Hon'ble Finance Minister has attempted to clarify that whatever money was provided for minor irrigation in the Third Plan we have spent and we hope to get more money. Minor Irrigation is the thing which is really immediately paying so far as the agricultural sector is concerned. On big schemes even though we have spent more than hundred crores, still they have not been fully utilised. That is not the case with Minor irrigation; minor irrigation immediately pays. I should like to request the Hon'ble Minister to bestow more attention on minor irrigation works.

One more thing which I should like to bring to the notice of the Hon'ble Minister is that the burden on education has increased. It is increasing by leaps and bounds. It is no doubt correct. But, to meet the expenditure of this education, we have consented to impose sales tax. Sales tax is the main thing to meet the expenses of education. Further,

(SRI V. S. PATIL)

more, we are of the opinion that if there is a dificit so far as education and other things are concerned, why are we afraid of prohibition ? That will give you more money. In order to have some prestege of the old Congress, you have introduced it. The old Congress wanted to create some sort of atmosphere by having prohibition. That is not the difficulty now. We have to say, for that purpose prohibition should be scrapped. Bangalore is a wet area. Are the Bangalore people beasts as compared to other people who are in the dry area ? I say 'beasts' because one of the biggest leaders of Congress has once said not once, but several times in the Bombay Assembly that when a man drinks he is indeed the beast. Is there no human beast here ? I should like to request the Government to collect the money by scrapping prohibition and use it for good purposes such as education and other enterprises.

I should like to refer only to one thing and that is about the N.G.O.s agitation that is going on. Those poor people are really suffering due to abnormal rise in prices. Adequate measures must be taken to see that none of them really suffer for want of funds. Adequate provision must be made towards D. A. by cutting all other expenditure.

With these words, I should like to endorse the opinion expressed by Sri Kadidal Manjappa, Sri Gadag and Sri M. R. Patil from the Congress Party, so far as the administration of the country or the State is concerned.

**Sri B. D. JATTI.**—There is one change. You have suggested to cut-down other expenditure, but they have not.

†ಶ್ರೀ ಜಿ. ಎ. ತಿಮ್ಮಪ್ಪ ಗೌಡ—(ಅರಕಲಗೂಡು). ಸ್ವಾಮಿ, ನಮ್ಮ ಮುಂದಿರುವ ಸಮಸ್ಯೆಗಳಲ್ಲಿ ಬಹಳ ಮುಖ್ಯ. ವಾದುದು ಆಹಾರ ಸಮಸ್ಯೆ ಮತ್ತು ವ್ಯವಸಾಯದಲ್ಲಿ ಅಧಿಕ ಉತ್ಪಾದನೆಯಾಗದೆ ಇರತಕ್ಕಂಥಾದ್ದು ಈ ಸಮಸ್ಯೆಯನ್ನು ನಾವು ಪರಿಹಾರ ಮಾಡಿದಲ್ಲದೆ ನಮ್ಮ ದೇಶಕ್ಕೆ ಭವಿಷ್ಯ ಚೆನ್ನಾಗಿಲ್ಲ ಅನ್ನತಕ್ಕಂಥಾದ್ದನ್ನು ನಾವು ಖಚಿತಪಡಿಸಿಕೊಳ್ಳಬೇಕಾಗಿದೆ. ಮೂರನೆ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಸುಮಾರು 10 ಲಕ್ಷ ಟನ್ ಆಹಾರಧಾನ್ಯಗಳನ್ನು ಹೆಚ್ಚಿಸಬೇಕು ಎಂದುಕೊಂಡಿತ್ತು. ಅದರ ಅಂಕಿಅಂಶಗಳನ್ನು ನೋಡಿದಲ್ಲಿ 1961-62 ನೆಯ ಸಾಲಿನಲ್ಲಿ 2.13 ಲಕ್ಷ ಟನ್ನುಗಳನ್ನು ಹೆಚ್ಚಿಸಬೇಕೆಂದಿದ್ದು, ಕೇವಲ .6 ಲಕ್ಷ ಟನ್ ಜಾಸ್ತಿಯಾಗಿದೆ. 1962-63ರಲ್ಲಿ 2.2 ಲಕ್ಷ ಟನ್ ಏರಿಸಬೇಕೆಂದಿದ್ದದ್ದು 1.4 ಲಕ್ಷ ಟನ್ ಏರಿದೆ. ಹೀಗೆ ವರ್ಷ ವರ್ಷ ಈ ಆಹಾರದ ಅಧಿಕ ಉತ್ಪಾದನೆ ಈ 5 ವರ್ಷಗಳಲ್ಲಿ 10 ಲಕ್ಷ ಟನ್ ಹೆಚ್ಚಿಸಬೇಕೆಂದಿದ್ದು ಈ ಗುರಿಯನ್ನು ಸಾಧಿಸುವುದಕ್ಕೆ 4 ವರ್ಷವಾದರೂ ಕೂಡ ಸಾಧ್ಯವಾಗಿಲ್ಲ ನಮ್ಮ ಆಹಾರ ಮಂತ್ರಿಗಳು ಆಗಾಗ್ಗೆ ಹೇಳುತ್ತಾ ಇದ್ದಾರೆ: ನಮಗೆ ಸುಮಾರು 2-3 ಲಕ್ಷ ಟನ್ ಧಾನ್ಯ ಕಡಿಮೆಯಾಗುತ್ತದೆ ಅಂತ. ಶ್ರೀಮಾನ್ ವಿ. ಎಸ್. ಪಾಟೀಲರು ಹೇಳಿದ ಹಾಗೆ ಅಂಕಅಂಶಗಳ ಮೇಲೆ ಹೋದರೆ, ಇಷ್ಟು ಉತ್ತಮ ಬೀಜಗಳನ್ನು ಒದಗಿಸಿದ್ದೇವೆ ಇಷ್ಟು ಆಹಾರ ಹೆಚ್ಚಾಗಿದೆ, ಒಳ್ಳೆಯ ಗೊಬ್ಬರವನ್ನು ಕೊಟ್ಟಿರುವುದರಿಂದ ಇಷ್ಟು ಸಾವಿರ ಟನ್ ಹೆಚ್ಚಾಗಿದೆ, ಎಂದು ಹೇಳುವ ಲೆಕ್ಕಗಳನ್ನೆಲ್ಲಾ ನೋಡುತ್ತಾ ಹೋದರೆ ಸುಮಾರು 20 ಪರ್ಸೆಂಟ್ ಆಹಾರಧಾನ್ಯ ಹೆಚ್ಚಿಸಿದ ಲೆಕ್ಕ ಸಿಗುತ್ತದೆ—ಇಲಾಖೆಯವರ ಲೆಕ್ಕದ ಆಧಾರದ ಮೇಲೆ ಹೋದರೆ, ಆದರೆ ಆಕ್ಚುಯಲ್ಸ್ ತೆಗೆದುಕೊಂಡರೆ, ಬೆಳೆ ಹೆಚ್ಚಾಗಿದೆ ಎಂಬುದಕ್ಕೆ ಯಾವ ಆಧಾರಗಳೂ ಕಂಡು ಬರುತ್ತಿಲ್ಲ. ಅಲ್ಲದೇ ನಮ್ಮಲ್ಲಿ ಅಪಾರವಾದಂಥ ಪ್ರದೇಶ, ವ್ಯವಸಾಯಕ್ಕೆ ಯೋಗ್ಯವಾದಂಥ ಜಮೀನು, ಈ ಫಲವತ್ತಾದ ಜಮೀನು, ಪ್ರಕೃತಿ ದತ್ತವಾದ ಎಲ್ಲ ಅನುಕೂಲ, ಜನಸಂಪತ್ತು ಇದೆ. ಶೇಕಡ 75 ಪರ್ಸೆಂಟ್ ಜನರು ವ್ಯವಸಾಯದಲ್ಲಿ ತೊಡಗಿದ್ದಾರೆ, ಇಷ್ಟು ಎಲ್ಲಾ ದೈವದತ್ತವಾದ ಅನುಕೂಲಗಳು ಇದ್ದರೂ ಕೂಡ, ನಮಗೆ ಸಾಕಾದಷ್ಟು ಆಹಾರವನ್ನು ಬೆಳೆದುಕೊಳ್ಳುವುದಕ್ಕೆ ನಾವು ಸಮರ್ಥರಾಗಿಲ್ಲ. ನನಗೆ ಅನ್ನಿಸುತ್ತದೆ, ಮೊನ್ನೆ ಶ್ರೀಮಾನ್ ಎಂ. ಆರ್. ಪಾಟೀಲರು ಹೇಳಿದ ಹಾಗೆ ಈ ವ್ಯವಸಾಯದ ಕ

ಬನ್ನು ಬಹಳ ಕಾಲದಿಂದಲೂ ಕೂಡ, ನೂರಾರು ವರ್ಷಗಳಿಂದಲೂ ಕೂಡ, ಅನಾದರಣೆ ಮಾಡಿರುವುದು ಕಂಡು ಬಂದಿದೆ. ಈ ವ್ಯವಸಾಯಕ್ಕೆ ಎಷ್ಟು ಪ್ರಾಶಸ್ತ್ಯವನ್ನು ಕೊಡಬೇಕಾಗಿತ್ತೋ, ಈ ವ್ಯವಸಾಯವನ್ನು ಅಭಿವೃದ್ಧಿಪಡಿಸುವುದಕ್ಕೆ ವ್ಯವಸಾಯದಲ್ಲಿ ತೊಡಗಿರತಕ್ಕಂಥ ಜನಗಳಿಗೆ ಸಹಾಯ ಸೌಕರ್ಯಗಳನ್ನು ಒದಗಿಸುವುದಕ್ಕೆ, ಹೆಚ್ಚಿನ ಬೆಳೆಯನ್ನು ಬೆಳೆಯುವುದಕ್ಕೆ ಅನುಕೂಲಗಳನ್ನು ಕಲ್ಪಿಸಿಕೊಡುವುದಕ್ಕೆ ಏನೇನು ಮಾಡಬೇಕಾಗಿತ್ತೋ ಅದನ್ನು ಮಾಡಿಲ್ಲ. ವ್ಯವಸಾಯ ಆಕರ್ಷಣೀಯ ಮತ್ತು ಲಾಭವಾದಂಥ ಒಂದು ವೃತ್ತಿಯಾಗಬೇಕಾದರೆ ಏನೇನು ಸೌಕರ್ಯಗಳನ್ನು ಒದಗಿಸಿಕೊಡಬೇಕು ಎಂದು ಸರ್ಕಾರದವರು ತಿಳಿದುಕೊಂಡು, ಈ ವಿಚಾರದಲ್ಲಿ ಹಿಂದಿನ ಸರ್ಕಾರಗಳು ಸೂಕ್ತ ಕ್ರಮಗಳನ್ನು ಸಕಾಲದಲ್ಲಿ ಅವರಿಗೆ ಹಾಕಿಕೊಳ್ಳದೇನೆ, ಈ ರೀತಿ ಕೆಲಸಮಾಡಿಕೊಂಡು, ಮುಂದುವರಿಸಿಕೊಂಡು ಬರುತ್ತಾ ಇರುವುದರಿಂದ, ಈ ದಿವಸ ಆಹಾರ ಅಭಾವವನ್ನು ಎಲ್ಲಾ ಕಡೆಯಲ್ಲಿಯೂ ಎದುರಿಸಬೇಕಾಗಿದೆ. ಮುಖ್ಯವಾಗಿ ಹೆಚ್ಚಿನ ಬೆಳೆ ಬೆಳೆಯಬೇಕಾದರೆ, ರೈತರಿಗೆ ಸುಧಾರಿತ ಬೀಜಗಳನ್ನು ಒದಗಿಸತಕ್ಕಂಥಾದ್ದು, ಒಳ್ಳೆಯ ಗೊಬ್ಬರವನ್ನು ಒದಗಿಸತಕ್ಕಂಥಾದ್ದು, ಆಧುನಿಕ ಉಪಕರಣಗಳನ್ನು ರೈತರು ಉಪಯೋಗಿಸಿಕೊಳ್ಳುವಂತೆ ಪ್ರೋತ್ಸಾಹ ಮಾಡುವಂಥಾದ್ದು, ಅವರ ಪೈರುಗಳಿಗೆ ಒದಗತಕ್ಕಂಥ ರೋಗರುಜಿನಗಳನ್ನು ನಿವಾರಿಸುವುದಕ್ಕೆ ಔಷಧಿ ಕೊಡಿಸತಕ್ಕಂಥಾದ್ದು, ನೀರಾವರಿ ಸೌಕರ್ಯಗಳನ್ನು ಒದಗಿಸತಕ್ಕಂಥಾದ್ದು ಅವರು ಬೆಳೆದಂಥ ಪೈರಿಗೆ ಯೋಗ್ಯವಾದಂಥ, ಲಾಭದಾಯಕವಾದಂಥ ಬೆಳೆಯನ್ನು ನಿಗದಿಮಾಡತಕ್ಕಂಥಾದ್ದು—ಈ ಸೌಕರ್ಯಗಳನ್ನೆಲ್ಲಾ ನಮ್ಮ ಸರ್ಕಾರದವರು ರೈತರಿಗೆ ಒದಗಿಸಿದರೆ, ರೈತರು ಸಾಕಾದಷ್ಟು ಬೆಳೆಯನ್ನು ಬೆಳೆಯುತ್ತಾರೆ; ಮತ್ತು ನಮ್ಮ ದೇಶದಲ್ಲಿ ಆಹಾರದ ಕೊರತೆಯನ್ನು ನೀಗುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ನಾವೆಲ್ಲರೂ ಕೂಡ ಅರಿತುಕೊಳ್ಳಬೇಕು.

4.30 P.M.

ಸುಧಾರಿತವಾದ ಬೀಜಗಳನ್ನು ಎಷ್ಟು ಜನ ರೈತರಿಗೆ ಒದಗಿಸುತ್ತಿದ್ದಾರೆ? ಆಧುನಿಕ ವ್ಯವಸಾಯದ ಉಪಕರಣಗಳನ್ನು ಎಷ್ಟು ಪರ್ಸೆಂಟೇಜಷ್ಟು ರೈತಾಪಿ ಜನಗಳಿಗೆ ಕೊಟ್ಟು ಅದನ್ನು ಉಪಯೋಗಿಸುತ್ತಿದ್ದಾರೆ? ಬೆಳೆಗಳಿಗೆ ತಗಲುವ ರೋಗಗಳನ್ನು ತಡೆಯಲು ಎಷ್ಟು ಮಟ್ಟಿನ ಔಷಧಿಗಳನ್ನು ಕೊಟ್ಟು ಅಂತಹ ರೋಗಗಳನ್ನು ಹೊಡೆದೋಡಿಸುತ್ತಿದ್ದಾರೆ? ಮತ್ತು ಎಷ್ಟರಮಟ್ಟಿನ ನೀರಾವರಿ ಸೌಕರ್ಯಗಳನ್ನು ಕೊಟ್ಟು ಅದರಿಂದ ರೈತರು ಉಪಯೋಗ ಪಡೆಯುತ್ತಿದ್ದಾರೆ? ಇವನ್ನೆಲ್ಲಾ ನೋಡಿದರೆ ನಮಗೆ ಅಷ್ಟು ಆಶಾದಾಯಕವಾಗಿ ಕಾಣುತ್ತಿಲ್ಲ. ಇದರ ಬಗ್ಗೆ ನನ್ನ ಮಿತ್ರರು ಆಗಲೇ ಹೇಳಿದ್ದಾರೆ. ಉತ್ತಮವಾದ ಸುಧಾರಿತವಾದ ಬೀಜಗಳನ್ನು ಒದಗಿಸುವ ವಿಚಾರದಲ್ಲಿ ನೋಡುವುದಾದರೆ ಕೇವಲ ಶೇಕಡಾ ಎರಡು ಮೂರರಷ್ಟು ಜನ ರೈತರಿಗೆ ಕೂಡ ಅದನ್ನು ಹೇಗೆ ಉಪಯೋಗಿಸಬೇಕು ಎನ್ನುವುದು ಗೊತ್ತಿಲ್ಲ. ಇನ್ನು ಸೀಡ್ ಫಾರಂಗಳೆಂದು ಅಲ್ಲಿ ಬೆಳೆಯುತ್ತಿದ್ದಾರೆ ಮತ್ತು ಅವು ಸಾಕಾದಷ್ಟು ಪ್ರಮಾಣದಲ್ಲಿ ಬರುತ್ತಿಲ್ಲ ಮತ್ತು ಬೀಜಗಳು ಸಕಾಲದಲ್ಲಿ ಸಾಕಾದಷ್ಟು ಪ್ರಮಾಣದಲ್ಲಿ ರೈತರಿಗೆ ದೊರೆಯುತ್ತಿಲ್ಲ. ಸೀಡ್ಸ್ ಫಾರಂಗಳೆಂದು ವ್ಯವಸಾಯದ ಇಲಾಖೆಯವರು ಮಾಡಿ ಅಲ್ಲಿ ಬೆಳೆಗಳನ್ನೇನೋ ಮಾಡುತ್ತಿರುತ್ತಾರೆ. ಅಲ್ಲಿ ಅವರು ಬೆಳೆಯುತ್ತಿರುವ ಬೀಜಗಳಿಂದ ಅನುಕೂಲವಾಗುತ್ತದೆ ಎನ್ನುವ ನಂಬಿಕೆಯೂ ರೈತರಿಗೆ ಹುಟ್ಟಿಲ್ಲ. ಅನೇಕ ಕಡೆಗಳಲ್ಲಿ ಇಲಾಖೆಯವರೇನೋ ಭತ್ತದ ಮಾದರಿ ಬೀಜಗಳನ್ನು, ಅಲೂಗೆಡ್ಡೆಯ ಬೀಜಗಳನ್ನು ಮಾಡಿ ಉತ್ತಮವಾದ ಬೆಳೆಗಳನ್ನು ಬೆಳೆಯಬಹುದು ಎಂದು ಮಾಡಿದರೂ ಅದನ್ನು ರೈತರುಗಳು ಹೇಗೆ ಉಪಯೋಗ ಮಾಡಬೇಕೆನ್ನುವುದೇ ಅವರಿಗೆ ಗೊತ್ತಿಲ್ಲ ಮತ್ತು ಅವರಿಗೆ ಸರಿಯಾದ ತಿಳುವಳಿಕೆಯನ್ನೂ ಕೊಡುತ್ತಿಲ್ಲ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳಷ್ಟು ಹಣವನ್ನು ಸರ್ಕಾರದವರು ಖರ್ಚು ಮಾಡುತ್ತಿರುತ್ತಾರೆ. ಇಂತಹ ಉತ್ತಮವಾದ ಬೀಜಗಳನ್ನುಪಯೋಗಿಸಬೇಕೆಂದು ಎಲ್ಲ ರೈತರಿಗೂ ಸರಿಯಾದ ತಿಳುವಳಿಕೆ ಸಿಗದೆ ಇರುವುದರಿಂದ ಈಗ ದೇಶದಲ್ಲಿ ನೂರಕ್ಕೆ ಹತ್ತು, ಹದಿನೈದು ಜನರಿಗಿಂತ ಹೆಚ್ಚಾಗಿ ಈ ಬೀಜಗಳನ್ನುಪಯೋಗಿಸುತ್ತಿಲ್ಲ. ಅಲ್ಲದೆ ಬೆಳೆಯುವ ಫಸಲಿಗೆ ರೋಗ ಬಂದಾಗ ಅದನ್ನು ತಡೆಯಲು ಸರಿಯಾದ ಔಷಧಿಗಳನ್ನುಪಯೋಗಿಸಿ ಕ್ರಿಮಿಕೀಟಗಳನ್ನು ನಾಶಮಾಡಬೇಕು ಎನ್ನುವುದರ ಬಗ್ಗೆ ಇಲಾಖೆಯವರು ಸರಿಯಾದ ತಿಳುವಳಿಕೆಯನ್ನು ಕೊಡುತ್ತಿಲ್ಲ. ಹಾಗೆ ಔಷಧಿಗಳನ್ನುಪಯೋಗಿಸುವವರ ಸಂಖ್ಯೆ ಸುಮಾರು ಶೇಕಡಾ 10, 15 ಕ್ಕಿಂತ ಮೇಲ್ಪಟ್ಟು ಇಲ್ಲ ಎಂದು ನಾವು ಹೇಳಬಹುದು. ಇಷ್ಟೆಲ್ಲಾ ಇದ್ದರೂ ಕೂಡ ಸಕಾಲದಲ್ಲಿ ನಮ್ಮ ರೈತರಿಗೆ ಯಾವ ವಿಧವಾದ ಅನುಕೂಲಗಳನ್ನೂ ಕೊಡಲು ಇಲಾಖೆಯವರು ತಯಾರಾಗಿಲ್ಲ. ಈ ವ್ಯವಸಾಯದ ಇಲಾಖೆಯಲ್ಲಿ ನಾನೂ ಅನೇಕ ಕಡೆಗಳಲ್ಲಿ ನೋಡಿರುವಂತೆ ಜನಗಳಿಗೆ ಇಂತಿಂತಹ ಸೌಕರ್ಯಗಳನ್ನು ಒದಗಿಸಿಕೊಟ್ಟು ರೈತರುಗಳಿಗೆ ಒಂದು ಮಾರ್ಗದರ್ಶನವಾಗಿರುವಂತೆ ಮತ್ತು ಯಾವ ವಿಧವಾದ ಪ್ರಯೋಜನಗಳನ್ನೂ ಅವರು ಕೊಡುತ್ತಿರುವುದನ್ನು ನಾನು ಎಲ್ಲಿಯೂ ಕಾಣುತ್ತಿಲ್ಲ.

(ಶ್ರೀ ಜಿ. ಎ. ತಿಮ್ಮಪ್ಪಗೌಡ)

ಯಾವ ಕಡೆಗೆ ಹೋಗಲೀ, ಯಾವ ಜಿಲ್ಲೆಗೇ ಹೋಗಲೀ ವ್ಯವಸಾಯದ ಇಲಾಖೆಯಲ್ಲಿರುವ ಅಧಿಕಾರಿಗಳಲ್ಲಿ ಎಂದರೆ ಡೈರೆಕ್ಟರವರಿಂದ ಹಿಡಿದು ಫೀಲ್ಡ್‌ಮನ್ ರವರೆಗೆ ನೋಡಿದರೆ 'ನಮಗೆ ಇನ್ನೂ ನಮ್ಮ ಸೀನಿಯಾರಿಟಿ ಲಿಸ್ಟನ್ನು ಬಗೆಹರಿಸಿಲ್ಲ ; ಹಾಗೂ ಕೇಡರು ಮತ್ತು ರೆಕ್ರೂಟುಮೆಂಟು ರೂಲ್ಸ್‌ಗಳನ್ನು ಬಗೆಹರಿಸಿಲ್ಲ ಎಂದು ಇದೇ ಒಂದು ದೊಡ್ಡ ಸಮಸ್ಯೆ ಆಗಿದೆ ಎಂದು ನಾವು ಕೇಳುತ್ತಲಿದ್ದೇವೆ. ಸುಮಾರು 7—8 ವರ್ಷಗಳಾದರೂ ಕೂಡ ಕೇಡರು ಮತ್ತು ರೆಕ್ರೂಟುಮೆಂಟು ರೂಲ್ಸು ಇನ್ನೂ ತಯಾರು ಮಾಡಿಲ್ಲ ಮತ್ತು ಸೀನಿಯಾರಿಟಿ ಲಿಸ್ಟು ಇನ್ನೂ ಪೆಂಡಿಂಗ್‌ನಲ್ಲಿದೆ ಎನ್ನುವುದು ಎಲ್ಲರಿಗೂ ತಿಳಿದ ವಿಚಾರಗಳಾಗಿವೆ. ಯಾವ ವ್ಯವಸಾಯ ಇಲಾಖೆಯ ನೌಕರರನ್ನೇ ನೋಡಲಿ ಅವರ ಸೀನಿಯಾರಿಟಿ ಲಿಸ್ಟು ಕೆಳಗೆ ಮೇಲೆ ಆಗಿದೆ ಎಂದು ಅವರಲ್ಲಿ ಒಂದು ವಿಧವಾದ ಅತೃಪ್ತಿ ಹಾಗೂ ಅಸಮಾಧಾನಗಳಿಗೆ ಕಾರಣವಾಗಿದೆ. ಇದನ್ನು ತಪ್ಪಿಸಿದ ಹೊರತು ಯಾವ ಅಧಿಕಾರಿಗಳೂ ಇಲ್ಲಿ ಸರಿಯಾಗಿ ಕೆಲಸ ಮಾಡುತ್ತಾರೆ ಎನ್ನುವುದು ಕಂಡುಬರುತ್ತಿಲ್ಲ. ಇಂತಹ ಒಂದು ವ್ಯವಸಾಯ ಇಲಾಖೆ ರೈತನಿಗೆ ಸ್ನೇಹಿತನಾಗಿ ಅವನಿಗೆ ಮಾರ್ಗದರ್ಶಕನಾಗಿ ಯಾವಾಗಲೂ ಉತ್ತಮವಾದ ಬೀಜಗಳು ಗೊಬ್ಬರಗಳು ಮತ್ತು ಒಳ್ಳೆಯ ಉಪಕರಣಗಳು ಇವನ್ನೆಲ್ಲಾ ಕೊಟ್ಟು ಅವನನ್ನು ಉಪಯೋಗಿಸುವಂತೆ ಇಂಡ್ಯೂಸ್ ಮಾಡಿ ಅವನಿಗೆ ಸ್ನೇಹಿತನಂತಿರಬೇಕೋ ಅಂತಹ ಒಂದು ಇಲಾಖೆ ಇಂದು ಮುಗ್ಗುರಿಸುತ್ತಾ ಕುಂಟುತ್ತಾ ನಡೆಯುತ್ತಿದೆ. ಜನಗಳಲ್ಲಿರುವ ಒಂದು ವಿಧವಾದ ಅತೃಪ್ತಿ ಹಾಗೂ ಅಸಮಾಧಾನಗಳಿಂದಾಗಿ ಇಲಾಖೆಯಲ್ಲಿರುವ ಜನಗಳಲ್ಲಿ ಯಾವ ವಿಧವಾದ ಉತ್ಸಾಹವೂ ಕಂಡುಬರುತ್ತಿಲ್ಲ. ಸೀನಿಯಾರಿಟಿ ಲಿಸ್ಟನ್ನು ಇಷ್ಟು ವರ್ಷಗಳಾದರೂ ಇನ್ನೂ ಸರಿಪಡಿಸಿಲ್ಲ ಹಾಗೂ ಕೇಡರು ಮತ್ತು ರಿಕ್ರೂಟುಮೆಂಟು ರೂಲ್ಸುಗಳನ್ನು ಇಷ್ಟು ದಿನಗಳಲ್ಲಾದರೂ ಮಾಡುತ್ತೇವೆಂದಲಾದರೂ ತಿಳಿಸಬೇಕು. ಹೀಗೆ ನಿಧಾನ ಮಾಡುತ್ತಾ ಹೋದರೆ ನೌಕರರುಗಳ ಅತೃಪ್ತಿಯಿಂದಾಗಿ ದೇಶದ ಯಾವ ಡೆವಲಪ್‌ಮೆಂಟು ಕೆಲಸಗಳೇ ಆಗಲಿ ಚೆನ್ನಾಗಿ ನಡೆಯಲು ಸಾಧ್ಯವಿಲ್ಲ. ಇದು ಬಹು ಪ್ರಾಮುಖ್ಯವಾದ ವಿಚಾರ ಎಂದು ಇಲ್ಲಿ ತಿಳಿಯಪಡಿಸುತ್ತೇನೆ. ಹೀಗೆ ನಾನಾ ವಿಧವಾದ ಪ್ರೋತ್ಸಾಹಗಳನ್ನು ರೈತರಿಗೆ ಕೊಡಬೇಕು. ವ್ಯವಸಾಯಕ್ಕೆ 'ನೆಕ್ಸ್ಟ್ ಟು ಡಿಫೆನ್ಸ್', ನಂತೆ ಪ್ರಾಮುಖ್ಯತೆ ಕೊಡಬೇಕು. ದೇಶಕ್ಕೆ ರಕ್ಷಣೆ ಮೊದಲು ಮುಖ್ಯವಾಗಿರುವಂತೆ ವ್ಯವಸಾಯ ನಮಗೆ ಬಹಳ ಮುಖ್ಯ. ಇಂತಹ ಪ್ರಾಮುಖ್ಯವಾದ ವ್ಯವಸಾಯವನ್ನು ಅಭಿವೃದ್ಧಿ ಮಾಡಲು ಅವರಿಗೆ ಉತ್ತಮವಾದ ಬೀಜಗಳನ್ನು ಕೊಡುವುದು ಮತ್ತು ಇತರ ಸೌಕರ್ಯಗಳನ್ನು ಒದಗಿಸಿ ಕೊಟ್ಟರೆ ಅವರಿಂದ ಉತ್ತಮವಾದ ಫಲಗಳನ್ನು ಪಡೆಯಲು ಅವಕಾಶವಾಗುತ್ತದೆ. ನಾವು ಎಲ್ಲಿಯವರೆಗೆ ವ್ಯವಸಾಯ ಮಾಡುವಂತಹ ರೈತಾಪಿ ಜನಕ್ಕೆ ಉತ್ತಮವಾದ ಸುಧಾರಿತವಾದ ಬೀಜಗಳನ್ನು ಕೊಡುವುದು ಗೊಬ್ಬರಗಳನ್ನು ಹಾಗೂ ಇತರ ಉಪಕರಣಗಳನ್ನು ಒದಗಿಸುವುದಕ್ಕೆ ಸಾಧ್ಯವಾಗುವುದಿಲ್ಲವೋ ಅಲ್ಲಿಯವರೆಗೆ ಯಾವ ವಿಧವಾದ ಉತ್ಪಾದನೆಯನ್ನೂ ಹೆಚ್ಚಾಗಿಪಡೆಯಲು ಸಾಧ್ಯವಾಗುವುದಿಲ್ಲ. ಇಲ್ಲಿ ಇದಕ್ಕೆ ಯಾವ ಕಾರಣವನ್ನೂ ಕೊಟ್ಟಿಲ್ಲ. ಯಾವ ಯಾವ ಕೆಲಸಗಳನ್ನು ಮಾಡಬೇಕಾಗಿದೆ ಎನ್ನುವುದಕ್ಕೆ ನಮ್ಮ ಮಾನ್ಯ ಅರ್ಥಿಕ ಸಚಿವರಾದ ಶ್ರೀಮಾನ್ ಜತ್ತಿಯವರು ಹಣಕಾಸಿನ ತೊಂದರೆಗಳನ್ನು ಹೇಳಿ ವ್ಯವಸಾಯ ಮಾಡುವ ಜನಕ್ಕೆ ಸಾಕಾದಷ್ಟು ಸಹಾಯಗಳನ್ನು ಕಲ್ಪಿಸಿಕೊಡದೇ ಇದ್ದರೆ ಯಾವ ದೃಷ್ಟಿಯಿಂದಲೂ ಇದನ್ನು ಬಗೆಹರಿಸಲು ಸಾಧ್ಯವಿಲ್ಲ. ವ್ಯವಸಾಯವನ್ನು ಈ ದೇಶದಲ್ಲಿ ಅಭಿವೃದ್ಧಿ ಪಡಿಸಬೇಕು ಅಂತಹ ಮನುಷ್ಯನನ್ನು ಪ್ರೋತ್ಸಾಹಿಸಬೇಕು ಮತ್ತು ಅವನಿಗೆ ಎಲ್ಲ ಸಹಾಯ ಸಲಕರಣೆಗಳನ್ನೂ ಒದಗಿಸಿ ಕೊಡುವಂತಾದರೆ ಒಳ್ಳೆಯ ಕೆಲಸಗಳನ್ನು ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಲು ಇಷ್ಟಪಡುತ್ತೇನೆ. ಇದೂ ಅಲ್ಲದೆ ಈಗ ರೈತರಿಗೆ ಇರುವ ಹೊರೆಯೇ ಸಾಲದು ಎಂದು ಈಗ ಕಂದಾಯದ ಹೊರೆಯನ್ನೂ ಏರಿಸುವುದಕ್ಕೆ ಹೋಗುತ್ತಿದ್ದಾರೆ. ಈ ವಿಷಯದಲ್ಲಿ ಈಗ ಹೆಚ್ಚಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ಇದರ ಸೈಕಾಲಜಿಕಲ್ ಅಟ್‌ಮಾಸ್‌ಫಿಯರ್ ಈ ದೇಶದಲ್ಲಿ ಯಾವರೀತಿ ಬರುತ್ತಿದೆ ಮತ್ತು ವ್ಯವಸಾಯ ಮಾಡುತ್ತಿರುವ ಜನಗಳು ಸರಕಾರದ ಬಗ್ಗೆ ಯಾವರೀತಿ ಹೇಳುತ್ತಿದ್ದಾರೆಂಬುದನ್ನು ಸರಿಯಾಗಿ ಅರಿತುಕೊಳ್ಳಬೇಕಾಗಿದೆ. ಬಹುತೇಕ ಜನ ಎಂದರೆ ಶೇಕಡಾ 75 ರಿಂದ 80 ರಷ್ಟು ರೈತಾಪಿ ಜನರು ಈಗ ಕಂದಾಯವನ್ನು ಏರಿಸುತ್ತಿರುವುದು ಒಂದು ರೀತಿಯ ಹೆಚ್ಚಿನ ಹೊರೆ ಎಂದು ಹೇಳುತ್ತಿದ್ದಾರೆ. ತಾವೇನೋ ಇದರಿಂದ ನಮಗೆ ಬರುವುದು ಕೇವಲ ಮೂರು, ಮೂರೂವರೆ ಕೋಟಿಯಷ್ಟು ಮಾತ್ರ ಎಂದು ಹೇಳಬಹುದು. ಇದರಿಂದ ತಾವು ಈ ದೇಶದ ಸುಮಾರು ಶೇಕಡಾ 75 ರಿಂದ 80 ರಷ್ಟು ಜನರ ಅತೃಪ್ತಿ ಹಾಗೂ ಅಸಮಾಧಾನಗಳಿಗೆ ಕಾರಣರಾಗುತ್ತಿದ್ದೀರಿ. ಕಂದಾಯವನ್ನು ಯಾರೂ ನಿರ್ದಿಷ್ಟವಾಗಿ ಕೊಡುವುದಿಲ್ಲ. ಇಂತಹ ಅತೃಪ್ತಿ ಅಸಮಾಧಾನಗಳನ್ನು ಸರಕಾರದವರುಗಳಿಸುವುದು ನ್ಯಾಯವಾದುದಲ್ಲ. ಈ ರೀತಿ ರೈತರಮೇಲೆ ಕಂದಾಯದ ಹೊರೆಯನ್ನು ಹೆಚ್ಚಿಸುವುದು ಬಹಳ ಅನ್ಯಾಯವಾದುದು ಮತ್ತು ಇದರಿಂದ ಈ ದೇಶದಲ್ಲಿ ದುಷ್ಪರಿಣಾಮಗಳುಂ

ಟಾಗುತ್ತವೆ. ಸರಕಾರಕ್ಕೆ ಹಣ ಬೇಕು ಎಂದು ಈ ರೀತಿ ಮೂರೂವರೆ ಕೋಟಿಯಷ್ಟು ಕಂದಾಯದಿಂದ ಸಿಗುತ್ತದೆ ಎಂದು ಹೆಚ್ಚು ಮಾಡುವುದು ಸರಿಯಾಗಿ ಕಾಣುವುದಿಲ್ಲ. ಕಂದಾಯದ ವಿಚಾರದಲ್ಲಿ ಇಷ್ಟು ಹೆಚ್ಚು ಮಾಡುವುದಕ್ಕಿಂತ ಈ ಹಿಂದೆ ಅರ್ಬನ್ ಇಮ್ಮೂವಬಲ್ ಪ್ರಾಪರ್ಟಿ ಬಿಲ್ ಎನ್ನುವುದನ್ನು ಇಲ್ಲಿ ತಂದಿದ್ದರು, ಅದನ್ನು ತಂದು ಇಲ್ಲಿ ಪಾಸು ಮಾಡಿದರೆ ಅದರಿಂದ ಕೋಟ್ಯಾಂತರ ರೂಪಾಯಿಗಳಷ್ಟು ಆದಾಯ ಸರಕಾರಕ್ಕೆ ಬರುತ್ತದೆ. ಆದರೆ ಆ ಬಿಲ್ಲನ್ನು ತರುವುದಕ್ಕೆ ಪ್ರಯತ್ನ ಮಾಡದೇ ಇದರಲ್ಲಿ ಆಸಕ್ತ ಹಿತಗಳ ಒಂದು ವಿರೋಧ ಹಾಗೂ ಪ್ರತಿಷ್ಟೆಗಳಿಂದಾಗಿ ಅದನ್ನು ಇಲ್ಲಿಯವರೆಗೂ ತರುವುದ ಕ್ಕಾಗದೆ ಅವರನ್ನು ಸಮಾಧಾನ ಮಾಡುವುದಕ್ಕಾಗಿ ಹಿಂತೆಗೆಯುತ್ತಿದ್ದಾರೆ. ಈಗಲಾದರೂ ಆ ಬಿಲ್ಲನ್ನು ತಂದು ಇಲ್ಲಿ ಅದನ್ನು ಶಾಸನವನ್ನಾಗಿ ಮಾಡಿ ಇದರಿಂದ ದೇಶಕ್ಕೆ ಹೆಚ್ಚು ಹಣವನ್ನು ಸಂಪಾದಿಸಬಹುದು, ಇಷ್ಟು ಮಾತನಾಡಲು ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟುದಕ್ಕಾಗಿ ಅವರಿಗೆ ನಾನು ವಂದಿಸುತ್ತೇನೆ.

† ಕೆ. ಎಸ್. ಗೌಡಯ್ಯ (ಕೃಷ್ಣರಾಜ ನಗರ).—ಸ್ವಾಮೀ, 1965-66 ನೇ ಸಾಲಿನ ಮುಂಗಡ ಪತ್ರದ ಬಗ್ಗೆ ನನಗೆ ಮಾತನಾಡಲು ಅವಕಾಶ ಕೊಟ್ಟದ್ದಕಾಗಿ ತಮಗೆ ವಂದನೆಗಳು.

ನಮ್ಮ ಅರ್ಥ ಸಚಿವರು ರಾಜ್ಯದ ಆರ್ಥಿಕ ವ್ಯವಸ್ಥೆಗಳನ್ನು ಕುರಿತು ಮೂರು ವರ್ಷಗಳಿಂದಲೂ ಅವು ಕುಂಠಿತವಾಗಿವೆ ಎಂದು ಇಲ್ಲಿ ಅದಕ್ಕೆ ಕೆಲವು ಕಾರಣಗಳನ್ನೂ ಕೊಟ್ಟಿದ್ದಾರೆ. ಹೆಚ್ಚು ಹೆಚ್ಚಾಗಿ ವಹಿಸಬೇಕಾದ ಸಾಲದ ಹೊರೆ ಋತುಮಾನದ ವಿಚಿತ್ರ ಸ್ಥಿತಿ ಮತ್ತು ಇನ್ನಿತರ ಕಾರಣಗಳಿಂದಾಗಿ ಎಂದು ಇಲ್ಲಿ ಹೇಳಿದ್ದಾರೆ. ಇದಕ್ಕಿಂತ ಗುರುತರವಾದ ಕಾರಣಗಳೂ ಇವೆ. ವಿದ್ಯಾರ್ಥಿಗಳ ಮುಷ್ಕರ ಎಂಬುದನ್ನು ಕಣ್ಣಿನಿಂದ ನೋಡಿದ್ದೇವೆ. ಅದರಿಂದ ನಮ್ಮ ದೇಶಕ್ಕೆ ಹೆಚ್ಚು ಖರ್ಚು ಗಳಾದವು. ಇಂತಹ ಖರ್ಚುಗಳಿಗೆಲ್ಲಾ ಯಾರು ಕಾರಣ ? ಸರಕಾರದವರು ಯಾವ ಒಂದು ಹೊಸ ನೀತಿಯನ್ನು ರೂಪಿಸುವಾಗಲೂ ಸರಕಾರದ ಆಜ್ಞೆಯನ್ನು ಸರಿಯಾಗಿ ಹೊರಡಿಸದೆ. ದೇಶದ ಆಗು ಹೋಗುಗಳನ್ನು ಸರಿಯಾಗಿ ವಿಚಾರ ಮಾಡದೇ ಈ ತರಹದ ಒಂದು ಹೊಸ ನೀತಿಯನ್ನು ರೂಪಿಸುವುದರಿಂದಾಗಿ ಈ ದೇಶದಲ್ಲಿ ಇಂತಹ ಪರಿಸ್ಥಿತಿ ಒದಗಿದರೆ ಅದನ್ನು ನಿವಾರಿಸುವುದು ಸರಕಾರಕ್ಕೆ ತುಂಬಾ ಕಷ್ಟವಾಗುತ್ತದೆ. ಇನ್ನು ಮೇಲಾದರೂ ಇಂತಹ ಪರಿಸ್ಥಿತಿಗಳು ಉದ್ಭವಿಸುವು ದಕ್ಕೆ ಅವಕಾಶ ಕೊಡದೇ ಸರಕಾರದವರು ಸರಿಯಾದ ಆಜ್ಞೆಗಳನ್ನು ಹೊರಡಿಸುತ್ತಾರೆಂದು ಭಾವಿಸುತ್ತೇನೆ.

ಇನ್ನು ಆಹಾರ ಪರಿಸ್ಥಿತಿ ವಿಚಾರ. ಇಂದು ದೇಶದಲ್ಲಿ ಆಹಾರ ಉತ್ಪತ್ತಿಯಾಗಿದ್ದರೂ ಕೂಡ ಅಭಾವ ಪರಿಸ್ಥಿತಿ ಉಂಟಾಗುವುದಕ್ಕೆ ಕಾರಣವೇನು ? ಭತ್ತ, ಅಕ್ಕಿ ಮುಂತಾದ ಆಹಾರ ಪದಾರ್ಥ ಗಳ ಬೆಲೆ ಇಷ್ಟು ಏಕೆ ಏರಿದೆ ? ಮಳೆ ಅಭಾವದಿಂದ ಬೆಳೆ ಬರುವುದು ಕಡಮೆಯಾಗಿರಬಹುದು. ಆದರೆ ಇಂಥ ಅಭಾವ ಪರಿಸ್ಥಿತಿ ಉಂಟಾಗುವುದಕ್ಕೆ ಮುಖ್ಯವಾಗಿ ಜನಸಂಖ್ಯೆ ವಿಪರೀತವಾಗಿ ಹೆಚ್ಚಾಗಿ ರುವುದೇ ಕಾರಣ. ಕೇಂದ್ರ ಸರಕಾರವಾಗಲಿ ರಾಜ್ಯ ಸರಕಾರವಾಗಲಿ ಆಹಾರ ಅಭಾವ ಬರುವುದಕ್ಕೆ ಕಾರಣವೇನು ಎನ್ನುವುದನ್ನು ಶಾಸ್ತ್ರೀಯವಾಗಿ ವಿವೇಚನೆ ಮಾಡಿಲ್ಲ. ಇದಕ್ಕೆ ಯಾವ ಯಾವ ಮುಖ್ಯ ಕಾರಣಗಳಿವೆ ಎಂಬುದನ್ನು ಎಚ್ಚರಿಕೆಯಿಂದಕಂಡು ಹಿಡಿದು ಅದಕ್ಕೆ ಪರಿಹಾರೋಪಾಯ ಸೂಚಿಸಬೇಕು. ಇದನ್ನು ಬಗೆಹರಿಸುವುದು ಹೇಗೆ ? ನನ್ನ ಅಭಿಪ್ರಾಯದಲ್ಲಿ ಬೆಳೆ ಕಡಿಮೆಯಾಗಿರುವುದಕ್ಕಿಂತಲೂ ನಮ್ಮ ದೇಶದಲ್ಲಿ ಇಂದು ಜನಸಂಖ್ಯೆ ಹೆಚ್ಚಾಗುತ್ತಿರುವುದೇ ಆಹಾರ ಅಭಾವಕ್ಕೆ ಕಾರಣವಾಗಿದೆ. ಜನನ ನಿಯಂತ್ರಣ ಮಾಡದೇ ಸ್ಕೀಂ ಮಾಡುವುದು ಸಾಧ್ಯವಿಲ್ಲ. ಅದು ಸಾಧು ಕೂಡ ಅಲ್ಲ. ಈಗ ಜನಸಂಖ್ಯೆ ವಿಪರೀತವಾಗಿದೆ. ಇದರ ನಿಯಂತ್ರಣಕ್ಕಾಗಿ ಶಸ್ತ್ರ ಚಿಕಿತ್ಸೆ ನಡೆಯುತ್ತಾ ಇದೆ. ಗರ್ಭನಿರೋಧ ಸಾಧನ ತರಿಸಬಹುದು. ಅಮೇರಿಕಾ ದೇಶದಲ್ಲಿ ಹೊಸ ಹೊಸ ಪ್ರಯೋಗ ಮಾಡಿ ಗರ್ಭ ನಿರೋಧ ಯಶಸ್ವಿಯಾಗಿ ಮಾಡುವುದನ್ನು ಕಂಡುಹಿಡಿದಿದ್ದಾರೆ. ಕೆಲವರು ಅಂಥ ಸಾಧನಗಳನ್ನು ಉಪಯೋಗಿಸುತ್ತಿದ್ದಾರೆ. ಆದರೆ ಇಂಥ ಸಾಧನಗಳಿಗೆ ಹೆಚ್ಚು ಬೆಲೆ ಕೊಡಬೇಕಾಗುತ್ತದೆ. ಇದು ಕಡಿಮೆ ಬೆಲೆಗೆ ಸಾಮಾನ್ಯ ಜನರಿಗೆ ಸುಲಭವಾಗಿ ದೊರೆಯುವ ಹಾಗೆ ಏನಾದರೂ ಮಾಡಬೇಕು. ಈ ರೀತಿ ಮಾಡಬೇಕಾದುದು ತಮ್ಮ ಕರ್ತವ್ಯ ಎಂದು ಹೇಳು ತ್ತೇನೆ.

ಇನ್ನು ನೀರಾವರಿ ಯೋಜನೆಗಳ ಬಗ್ಗೆ ಹೇಳುವುದಾದರೆ, ದೀರ್ಘಾವಧಿ ಯೋಜನೆಗಳು ಬೇಗ ಆಗಬೇಕು. ಈಗಾಗಲೇ ಅಪ್ಪರ್ ಕೃಷ್ಣ ಹಾರಂಗಿ ಮೊದಲಾದ ದೊಡ್ಡ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸತಕ್ಕದ್ದು ಅಗತ್ಯ. ಕಪಿನಿ ಯೋಜನೆಗೆ ಸಾಕಷ್ಟು ಹಣ ಒದಗಿಸಿ ಈ ಕೆಲಸ ತೆಗೆದು ಕೊಳ್ಳಬೇಕಾಗಿದೆ. ಈ ವರ್ಷದ ಬಡ್ಜೆಟನ್ನು ಅವಲೋಕನ ಮಾಡಿ ನೋಡಿದರೆ ಇಂಥ ಯೋಜನೆ ಗಳಿಗೆ ಒದಗಿಸಿರತಕ್ಕಂಥ ಹಣ ಬಹಳ ಕಡಿಮೆಯಾಗಿದೆ. ಈ ಯೋಜನೆಗಳಿಗೆ ಒಂದು ಲಕ್ಷ, ಎರಡು ಲಕ್ಷ, ಹತ್ತು ಲಕ್ಷ ಹೀಗೆ ಹಣ ಒದಗಿಸಿದ್ದೀರಿ. ಇಷ್ಟು ಅಲ್ಪ ಹಣದಿಂದ ಇಂತಹ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸಲು ಸಾಧ್ಯವೇ ಎಂಬುದನ್ನು ಅರ್ಥ ಮಂತ್ರಿಗಳು ಯೋಚನೆ ಮಾಡ

(ಶ್ರೀ ಕೆ. ಎಸ್. ಗೌಡಯ್ಯ)

ಬೇಕು. ಮಹಾತ್ಮಾ ಗಾಂಧೀಜಿಯವರ ಶತಮಾನೋತ್ಸವ ಆಚರಿಸುವ ಹೊತ್ತಿಗೆ ಎಷ್ಟೋ ನೀರಾವರಿ ಯೋಜನೆಗಳನ್ನು ಪೂರ್ತಿ ಮಾಡಬೇಕೆಂದು ಇಟ್ಟುಕೊಂಡಿದ್ದೀರಿ. ಅವುಗಳನ್ನು ನಿರ್ವಹಿಸುತ್ತೀರಿ ಎಂಬ ಆಶೆ ಇದೆ. ಆದರೆ ಹಣ ಒದಗಿಸಿರುವುದನ್ನು ನೋಡಿದರೆ ಇದು ಸಾಧ್ಯವೇ ಎಂದು ಅನಿಸುತ್ತದೆ. ಈ ಯೋಜನೆಗಳ ಕೆಲಸ ಮುಗಿಯುವುದಿಲ್ಲ ಎನ್ನುವುದು ಎದ್ದು ಕಾಣುತ್ತದೆ. ಇನ್ನು ವ್ಯವಸಾಯ ಹುಟ್ಟುವಳಿ ಹೆಚ್ಚಿಸ ತಕ್ಕ ವಿಚಾರ ಇಟ್ಟುಕೊಂಡಿದ್ದಾರೆ. ಅನೇಕ ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಹೊಸ ನೀರಾವರಿ ಪ್ರದೇಶ ಉಂಟು ಮಾಡುವುದು, ರಾಸಾಯನಿಕ ಗೊಬ್ಬರ ಒದಗಿಸುವುದು ಇಂಥ ಅನೇಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇವು ಸಮರ್ಪಕವಾಗಿ ಯಶಸ್ವಿಯಾಗಿ ನಡೆಯುತ್ತಿಲ್ಲ. ನಮ್ಮ ಕ್ಷೇತ್ರದಲ್ಲಿ ಒಂದು ನೀರಾವರಿ ಯೋಜನೆಗೆ ಅನುಕೂಲ ಮಾಡಿಕೊಡ ಬೇಕಾಗಿದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ನಿವೇದಿಸುತ್ತೇನೆ. ಭತ್ತ ಬೆಳೆಯುವ ಪ್ರದೇಶದಲ್ಲಿ ತೊಂದರೆ ಇರುವುದರಿಂದ ಇರಿಗೇಷನ್ ಟ್ರ್ಯಾಕ್ಟ್ ರೂಢಿಸಿ ಬೇಗನೆ ಮಾಡಬೇಕು. ಇದರ ಬಗ್ಗೆ ಯಾವ ಯೋಜನೆ ಮಾಡಿಲ್ಲ. ಅದಕ್ಕೆ ಹಣ ಒದಗಿಸಿಲ್ಲ. ಮುಖ್ಯವಾಗಿ ಈ ಸುಧಾರಣೆ ಯಾಗಬೇಕಾದದು ಅಗತ್ಯ. ಎಷ್ಟೋ ಕೆಲಸಗಳಿಗೆ ಹಣ ಖರ್ಚು ಮಾಡಲಾಗುತ್ತಿದೆ. ಇದೂ ಸಹ ಅಷ್ಟೇ ಪ್ರಾಮುಖ್ಯವಾದ ವಿಚಾರವಾಗಿರುವುದರಿಂದ ಇನ್ನೂ ಹೆಚ್ಚು ಇರಿಗೇಷನ್ ಟ್ರ್ಯಾಕ್ಟ್ ರೂಢಿಸುವುದು ಅತ್ಯಗತ್ಯ. ಇದನ್ನು ನೀರಾವರಿ ಪ್ರದೇಶದಲ್ಲಿ ಮಾಡದೇ ಹೋದರೆ ಅಷ್ಟು ಉತ್ಪತ್ತಿ ಬರುವುದಿಲ್ಲ. ಅನೇಕ ಕಡೆ ಅರ್ಧ ಮೈಲಿ ದೂರ ಇರುವ ತನ್ನ ಜಮೀನಿಗೆ ಹೋಗುವುದಕ್ಕೆ ರೈತನು ಮೂರು ನಾಲ್ಕು ಮೈಲಿ ಸುತ್ತಿಕೊಂಡು ಬರಬೇಕಾಗುತ್ತದೆ. ರೈತನ ಎಷ್ಟೋ ಕಾಲ ಇದಕ್ಕೆ ವ್ಯಯವಾಗುತ್ತದೆ. ರೈತನ ಎತ್ತುಗಳಿಗೆ ಸಹ ತೊಂದರೆಯಾಗುತ್ತದೆ. ಸರಕಾರ ಇದನ್ನು ಯೋಚನೆ ಮಾಡಬೇಕು ಎಂದು ಕೇಳಿಕೊಳುತ್ತೇನೆ. ತೀವ್ರಗತಿಯ ವ್ಯವಸಾಯಕ್ಕೆ ತೊಂದರೆ ಯಾಗಿರುವುದರಿಂದ ಈ ಪ್ರದೇಶದಲ್ಲಿ ರಸ್ತೆ ದುರಸ್ತಿ ಮಾಡಿಸುವುದಲ್ಲದೆ ಹೊಸ ರಸ್ತೆಗಳ ನಿರ್ಮಾಣ ಮಾಡಲು ಬಜೆಟ್ಟಿನಲ್ಲಿ ಹೆಚ್ಚು ಹಣ ಒದಗಿಸಬೇಕು. ಈ ವರ್ಷ ಹಣ ಒದಗಿಸಿ ನೀರಾವರಿ ಪ್ರದೇಶದ ರಸ್ತೆ ರಚನೆಯ ಕಾರ್ಯ ಮೊದಲು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆಹಾರ ಅಭಾವದ ವಿಚಾರದಲ್ಲಿ ಸರಕಾರ ಹೊರಡಿಸಿದ ಆಜ್ಞೆಗಳು ಸಂಬಂಧಪಟ್ಟ ಜನರಿಗೆ ಆಗತಕ್ಕ ತೊಂದರೆ ಹಾಗೂ ವ್ಯವಸಾಯ ಇವುಗಳ ಬಗ್ಗೆ ಎರಡು ಮಾತು ಹೇಳಲು ಬಯಸುತ್ತೇನೆ. ಸರಕಾರದ ಆಜ್ಞೆಯ ಪ್ರಕಾರ ರೈತನು ಅಕ್ಕಿಯ ಗಿರಣಿಗೆ ಭತ್ತ ತೆಗೆದುಕೊಂಡು ಹೋದರೆ ಶೇಕಡ 60 ರಷ್ಟು ಭಾಗ ಕೊಡಬೇಕೆಂದು ಇದೆ. ಇದರಿಂದ ಅನೇಕರಿಗೆ ತೊಂದರೆಯಾಗಿದೆ. ಈಗಿನ ಸುಧಾರಣೆಯ ಕಾಲ ಬಂದ ಮೇಲೆ ಅಕ್ಕಿಯ ಗಿರಣಿಗೆ ಎಲ್ಲ ರೈತರೂ ಭತ್ತ ತೆಗೆದ ಕೊಂಡು ಹೋಗುತ್ತಾರೆ. ತಮ್ಮ ಮನೆಯಲ್ಲಿ ಭತ್ತ ಕುಟ್ಟಿ ಅಕ್ಕಿ ಯಾರೂ ಮಾಡುವುದಿಲ್ಲ. ಮನೆಯಲ್ಲಿ ಪೂರ್ವ ಕಾಲದಿಂದ ಇರತಕ್ಕ ಒನಕೆಯನ್ನು ಎಲ್ಲೋ ಮೂಲೆಯಲ್ಲಿ ಇಟ್ಟುಬಿಟ್ಟಿದ್ದಾರೆ. ಕೆಲವರು ಒನಕೆಯನ್ನು ಸೌದೆ ಮಾಡಿ ಉಪಯೋಗಿಸಿದ್ದಾರೆ. ಇದಲ್ಲದೆ ಒಂದು ಮನೆಯಲ್ಲಿ ನಾಲ್ಕೈದು ಭಾಗಗಳಾಗಿ ಮಕ್ಕಳು ಹೆಚ್ಚಾಗಿರುವುದರಿಂದ ಮನೆಯಲ್ಲಿ ಅಕ್ಕಿ ಮಾಡುವುದನ್ನು ಎಲ್ಲ ರೈತರೂ ಬಿಟ್ಟುಕೊಟ್ಟಿದ್ದಾರೆ. ಇಂಥ ಸಂದರ್ಭದಲ್ಲಿ ಅಕ್ಕಿಯನ್ನು ಗಿರಣಿಯಲ್ಲಿಯೇ ಮಾಡಿಸಬೇಕಾಗುತ್ತದೆ. ಈ ವಿಚಾರ ಎಲ್ಲ ಶಾಸನ ಸಭಾ ಸದಸ್ಯರಿಗೂ ಮಂತ್ರಿಗಳಿಗೂ ಗೊತ್ತಿದೆ. ಈ ನಿರ್ಬಂಧವನ್ನು ಸ್ವಲ್ಪ ಸಡಿಲಗೊಳಿಸಿ ರೈತನಿಗೆ ಅನುಕೂಲ ಮಾಡಿಕೊಡಬೇಕು. ಈ ಆಜ್ಞೆ ಡಿಸೆಂಬರ್ ತಿಂಗಳಿನಲ್ಲಿ ಹೊರಡಿಸಿದ ನಂತರ ಜನವರಿ ತಿಂಗಳಲ್ಲಿ ಇನ್ನೊಂದು ಆಜ್ಞೆ ಹೊರಡಿಸಿದ್ದೀರಿ. ಈ ಮಧ್ಯ ಕಾಲದಲ್ಲಿ ರೈತನಿಗೆ ಬಹಳ ತೊಂದರೆಯಾಗಿದೆ. ಯಾಕೆಂದರೆ ಎರಡನೇ ಆಜ್ಞೆಯಲ್ಲಿ ಒಂದು ಎಕರೆಗೆ ಇಷ್ಟು ಭತ್ತ ಕೊಡಬೇಕು ಎಂದು ಇದೆ. ಇದರ ಅನುಕೂಲ ಪಡೆದು ಅನೇಕ ದಳ್ಳಾಳಿಗಳು ರೈತರಿಂದ ಭತ್ತ ಕೊಂಡು ಇಟ್ಟುಕೊಂಡಿದ್ದಾರೆ. ಈಗ ಗಿರಣಿಯ ಮೇಲೆ ಕಟ್ಟುನಿಟ್ಟಾಗಿ ಆಜ್ಞೆ ಜಾರಿ ಮಾಡಿದರೆ ರೈತ ಶೇಕಡ 50 ರಷ್ಟು ಭತ್ತ ಎಲ್ಲಿಂದ ಕೊಡಬೇಕು ? ಯಾಕೆಂದರೆ ಈಗಾಗಲೇ ಅವನು ಭತ್ತ ಮಾರಿಕೊಂಡು ಬಿಟ್ಟಿದ್ದಾನೆ. ತನಗೆ ಬೇಕಾಗುವಷ್ಟನ್ನು ಮಾತ್ರ ಹತ್ತಿರ ರೈತ ಇಟ್ಟುಕೊಂಡಿದ್ದಾನೆ. ಹೆಚ್ಚಿನ ಭತ್ತ ರೈತನ ಹತ್ತಿರವಿಲ್ಲ. ಈಗ ಕೊಡಿ ಅಂದರೆ ಅವನು ಎಲ್ಲಿಂದ ಕೊಡಬೇಕು ? ಅದುದರಿಂದ ಭತ್ತ ತೆಗೆದುಕೊಂಡು ಹಲ್ಲರಿಗೆ ಹೋಗಿ ಅಕ್ಕಿ ಮಾಡಿಸಿಕೊಳ್ಳುವುದಕ್ಕೆ ರೈತನಿಗೆ ಪರ್ಮಿಟ್ ಕೊಡಬೇಕೆಂದು ನಾನು ಹೇಳುತ್ತೇನೆ. ಈ ವರ್ಷ ಇಂಥ ಆಜ್ಞೆಯ ಮೂಲಕ ರೈತನಿಗೆ ಬಹಳ ತೊಂದರೆಯಾಗಿದೆ. ಮುಂದಿನ ವರ್ಷ ಈ ರೀತಿ ಮಾಡದೆ ಮೊದಲೇ ಅಕ್ಟೋಬರ್ ನವಂಬರ್ ತಿಂಗಳಿನಲ್ಲಿಯೇ ಆಜ್ಞೆ ಹೊರಡಿಸಿ ಭತ್ತ ಕೇಳಿದರೆ ಸರಿಯಾಗಿ ಭತ್ತವನ್ನು ರೈತ ಸರಕಾರಕ್ಕೆ ಕೊಡುತ್ತಾನೆ. ಆದುದರಿಂದ ಈ ವರ್ಷ ರೈತನಿಂದ ಕಡ್ಡಾಯವಾಗಿ ಭತ್ತ ವಸೂಲ್ಮಾಡುವುದಕ್ಕೆ ಹೋಗಬಾರದು. ಇದಲ್ಲದೆ ಜಿಲ್ಲೆಯಿಂದ ಜಿಲ್ಲೆಗೆ ತೆಗೆದುಕೊಂಡು ಹೋಗುವುದಕ್ಕೆ ನಿರ್ಬಂಧ ಇರುವುದರಿಂದ

ಬೇರೆ ಬೇರೆ ಕಡೆ ಬೇರೆ ಬೇರೆ ರೇಟು ಇದೆ. ಕೆಲವು ಕಡೆ ರೇಟ್ ಕಡಿಮೆ ಇದೆ. ಹೆಚ್ಚು ಭತ್ತ ಬೆಳೆದಿರುವ ಕಡೆ ಒಂದು ರೇಟ್ ಇದೆ. ಯಾರು ಹೆಚ್ಚು ಭತ್ತ ಬೆಳೆದು ಮಾರಾಟ ಮಾಡಬೇಕೆಂದು ಇರುವರೋ ಅಂಥ ರೈತರಿಗೆ ತೊಂದರೆಯಾಗಬಹುದು.

ಅಧ್ಯಕ್ಷರು.—ಮಾತನಾಡುವುದಕ್ಕೆ ಮಾನ್ಯ ಸದಸ್ಯರಿಗೆ ಹೆಚ್ಚು ಕಾಲಾವಕಾಶವಿಲ್ಲ. ವಿವರಣೆ ಕೊಡುತ್ತಾ ಹೋಗುವುದರ ಬದಲು ಬರೀ ಹೊಸ ವಿಷಯದ ಪಾಯಿಂಟ್ಸ್ ಬಗ್ಗೆ ಹೇಳಬೇಕು. ಇನ್ನೂ ಅನೇಕ ಸದಸ್ಯರು ಮಾತನಾಡತಕ್ಕವರು ಇದ್ದಾರೆ. ಬೇರೆ ಸದಸ್ಯರಿಗೆ ಮಾತನಾಡಲು ಅವಕಾಶ ಕೊಟ್ಟು ಅವರಿಗೆ ಸಮಾಧಾನವನ್ನು ಉಂಟು ಮಾಡಬೇಕಾಗುತ್ತದೆ.

ಶ್ರೀ ಕೆ. ಎಸ್. ಗೌಡಯ್ಯ.—ಈ ಪಂಚಾಯಿತಿಗಳ ಮೂಲಕ ಆಹಾರ ಧಾನ್ಯಗಳನ್ನು ಅಸಹಾಯಕ ಜನರಿಗೆ ಒದಗಿಸಿ ಅವರನ್ನು ಕಾಪಾಡತಕ್ಕ ಹೊಣೆಗಾರಿಕೆಯನ್ನು ಸರ್ಕಾರ ವಹಿಸಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಅಣ್ಣಾರಾವ್ ಗಣಮುಖಿ (ಅಫ್ಜಲ್‌ಪುರ).—ಅಧ್ಯಕ್ಷರೇ, ಶ್ರೀ ಕಡಿದಾಳ್‌ರವರು ಮಾನ್ಯ ಜತ್ತಿಯವರನ್ನು ಅಭಿನಂದಿಸಿದ್ದರೆ, ನಾನು ಅವರಿಗೆ ಶಾಪವನ್ನು ಕೊಡುತ್ತಾನೆಂದು ಅವರು ತಿಳಿಯಬಾರದು. ಮಾನ್ಯ ಮಂತ್ರಿಯವರು ಮಾಡಿರತಕ್ಕ ಬಜೆಟ್ ಭಾಷಣವನ್ನು ನೋಡಿದರೆ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ ಯಾರೋ ಒಬ್ಬ ಒಂದು ಕುರಿಯನ್ನು ಕಳೆದುಕೊಂಡಿದ್ದನಂತ. ಅದನ್ನು ಅವನು ಹುಡುಕುವುದಕ್ಕೆ ಹೊರಟ. ಆದರೆ ಆಗ ಕತ್ತಲಾಗಿತ್ತು. ಆದರೂ ಆ ಕತ್ತಲೆಯಲ್ಲಿ ಅವನು ಕುರಿಯನ್ನು ಹುಡುಕಲು ಹೋಗಿದ್ದಾಗ ಆ ಕತ್ತಲೆಯಲ್ಲಿ ಕುಳಿತಿದ್ದ ಕರಡಿಯನ್ನೇ ಕುರಿಯೆಂದು ಭಾವಿಸಿ, ಅವನು ಹಿಡಿಯುವುದಕ್ಕೆ ಹೋದಾಗ ಅದು ಗುರ್ರೆಂದಿತಂತೆ. ಅಷ್ಟೇ ಅಲ್ಲ ಅವನ ಮೈಮೇಲೆ ಬಂದಿತಂತೆ......

ಶ್ರೀ ಬಿ. ಡಿ. ಜತ್ತಿ.—ಆದರೆ ನೀವೇನೂ ಕರಡಿಯಾಗಿಲ್ಲವಲ್ಲವೇ ?

ಶ್ರೀ ಅಣ್ಣಾರಾವ್ ಗಣಮುಖಿ.—ಇಲ್ಲಿ ತಾವೂ ಬಜೆಟನ್ನು ಮಂಡಿಸಿದ್ದೀರಿ, ಕೇಂದ್ರದಲ್ಲಿ ಅಲ್ಲಿಯ ಆರ್ಥಿಕ ಸಚಿವರೂ ಬಜೆಟ್ಟನ್ನು ಮಂಡಿಸಿದ್ದಾರೆ. ಅಲ್ಲಿ ಅವರು ಟಾಕ್ಸ್‌ಪೇಯರುಗಳಿಗೆ ಕೆಲವು ಪರಿಹಾರಗಳನ್ನಾದರೂ ಕೊಟ್ಟಿದ್ದಾರೆ. ಆದರೆ ತಾವಿಲ್ಲಿ ಒಂದು ಕಾಸು ಟ್ಯಾಕ್ಸನ್ನಾದರೂ ಕಡಮೆ ಮಾಡಿದ್ದೀರಾ ? ತಾವು ಪರಿಹಾರ ಕೊಡುವುದರ ಬದಲು ಒಂದು ಕಡೆ ಇನ್ನೂ ರಾಜ್ಯ ಸರ್ಕಾರಕ್ಕೆ 7-8 ಕೋಟಿ ರೂಪಾಯಿಗಳ ಕೊರತೆ ಬೀಳುತ್ತದೆ, ಅಷ್ಟನ್ನು ಭರ್ತಿಮಾಡಿಕೊಳ್ಳುವ ಸಲುವಾಗಿ ಯಾವುದಾದರೂ ಟ್ಯಾಕ್ಸನ್ನು ಹಾಕಿದರೂ ಹಾಕೋಣ ಎನ್ನುವ ಪ್ರಪೋಸಲ್ ಇದೆ ಎಂಬುದಾಗಿ ಹೇಳಿದ್ದೀರಿ. ಇಲ್ಲಿಯ ಸರ್ಕಾರಕ್ಕೆ ನಾನಾ ರೂಪದಲ್ಲಿ ವರಮಾನ ಬರುತ್ತೆ— ರಾಜ್ಯದಲ್ಲಿ ನಾನಾ ಮುಖವಾದ ತೆರಿಗೆಗಳನ್ನು ಹಾಕಿ, ಅದರಿಂದ ವರಮಾನ ಪಡೆಯುತ್ತಿದ್ದಾರೆ, ಕೇಂದ್ರ ಸರ್ಕಾರದಿಂದ ಬೇರೆ ಹಣ ಬರುತ್ತೆ, ಇಷ್ಟೂ ಸಾಲದೆ ಇನ್ನೂ ಹೊಸ ಹೊಸ ತೆರಿಗೆಗಳನ್ನು ಹಾಕಬೇಕೆಂದು ಹೇಳುತ್ತಿದ್ದರೆ, ಈ ಸರ್ಕಾರದವರ ಆರ್ಥಿಕ ಧೋರಣೆ ಏನಿದೆ ಎಂಬುದೇ ಗೊತ್ತಾಗುವುದಿಲ್ಲ. ಈ ಹಣವೆಲ್ಲಾ ಏನಾಗುತ್ತದೆ ? ಸರ್ಕಾರದವರು ಈ ಸಂಪತ್ತನ್ನೆಲ್ಲಾ ಯಾವ ಯಾವ ಬಾಬಿಗೆ ಖರ್ಚು ಮಾಡುತ್ತಾರೋ ಆ ಬಾಬಿನಿಂದ ಅಷ್ಟು ಸರ್ಕಾರಕ್ಕೆ ವರಮಾನ ಬರಬೇಕು. ಆದರೆ ನಮ್ಮ ಸರ್ಕಾರದವರು ಇಲ್ಲಿ ತೆರಿಗೆಗಳಿಂದ ಹಾಗೂ ಕೇಂದ್ರದವರಿಂದ ಬರತಕ್ಕ ಹಣವನ್ನೆಲ್ಲಾ ಕೈಗಾರಿಕೆಗಳಮೇಲೆ ಹಾಕುತ್ತೇವೆಂದು ಹೇಳಿಕೊಂಡು ಅದನ್ನೆಲ್ಲಾ ನುಂಗಿ ನೀರು ಕುಡಿದುಬಿಟ್ಟಿದ್ದಾರೆ. ನನಗೆ ಒಬ್ಬರು ಒಂದಾವರ್ತಿ ಒಂದು ಮಾತನ್ನು ಹೇಳಿದ್ದರು—ಅದೇನೆಂದರೆ : ನಮ್ಮ ಸರ್ಕಾರ ಒಂದು ಎಮ್ಮೆ ಇದ್ದಹಾಗೆ ಅಂತ. ಏಕೆಂದರೆ, ಅವರು ಹೇಳಿದ್ದ ಎಮ್ಮೆ ಎಷ್ಟೇ ಹತ್ತಿಕಾಳನ್ನು ಹಾಕಲೀ, ಯಾವುದನ್ನೇ ಹಾಕಲಿ ಎಷ್ಟು ಸಾರ್ತಿ ಹಾಕಲಿ ತಿಂದೇ ತಿನ್ನುತ್ತೆ, ಆದರೆ ಹಾಲನ್ನು ಮಾತ್ರ ಹೆಚ್ಚಿಗೆ ಕೊಡುವುದಿಲ್ಲ ಎಂಬುದಾಗಿ ಹೇಳಿದ್ದರು. ಇಲ್ಲಿ ನಮ್ಮ ಸರ್ಕಾರದ ವಿಚಾರವೂ ಹಾಗೇ ಇದೆ. ಈ ಸಂದರ್ಭದಲ್ಲಿ ಹಿಂದೊಮ್ಮೆ ಒಬ್ಬ ಎಕಾನಮಿಸ್ಟ್ ಹೇಳಿದ್ದ ಒಂದು ಮಾತು ಜ್ಞಾಪಕಕ್ಕೆ ಬರುತ್ತಿದೆ. ಅದೇನೆಂದರೆ : ನಾವು ಎಷ್ಟು ಟ್ಯಾಕ್ಸನ್ನು ಕಟ್ ಮಾಡಿದರೆ ನಮಗೆ ಅಷ್ಟು ಅದರಿಂದ ಉತ್ಪನ್ನ ಹೆಚ್ಚಾಗುತ್ತದೆ ಎಂದು. ಹಾಗಿರುವಾಗ ಸರ್ಕಾರದವರು ಮಾತೆತ್ತಿದರೆ ಜನರಮೇಲೆ ಯಾವಾಗಲೂ ತೆರಿಗೆಗಳನ್ನು ಹಾಕುತ್ತಾ ಹೋದರೆ ಸರ್ಕಾರದವರು ಕೈಗೊಳ್ಳಬೇಕೆಂದು ಇರತಕ್ಕ ವೆಲ್‌ಫೇರ್ ಯೋಜನೆಗಳಿಗೆ ಹಣವೆಲ್ಲಿಂದ ಬರುತ್ತೆ ? ಇನ್ನು ಮೊನ್ನೆ ತಾನೆ ಹಣಕಾಸಿನ ಸಚಿವರು ಮದ್ರಾಸಿಗೆ ಆ ಫೈನಾನ್‌ಷಿಯಲ್ ಕಮಿಷನ್ನಿನವರನ್ನು ಭೇಟಿ ಮಾಡಲು ಹೋಗಿದ್ದರು. ಅವರು ಅಲ್ಲಿಗೆ ಹೋಗುವುದಕ್ಕೆ ಮುನ್ನ ನಾನು ಕೆಲವು ಸಲಹೆಗಳನ್ನು ನಮ್ಮ ಹಣಕಾಸಿನ ಮಂತ್ರಿಗಳಿಗೆ ಕೊಡಬೇಕೆಂದಿದ್ದ. ಆದರೆ ಅದಕ್ಕೆ ಅವಕಾಶ ಸಿಗಲಿಲ್ಲ. ನಾನು ಅವರಿಗೆ 'ಯೂನಿಯನ್ ನೈಜೇಷನ್ ಆಫ್ ಟ್ಯಾಕ್ಸೇಷನ್ನಿನ' ವಿಚಾರವಾಗಿ ಹೇಳಬೇಕೆಂಬ ಇರಾದೆಯಿತ್ತು. ಕೇಂದ್ರದವರು ರೈಲ್ವೆ ದರಗಳನ್ನು ಜಾಸ್ತಿಮಾಡಿ ಪ್ರಯಾಣೀಕರ ರೈಲ್ವೆ ದರಗಳನ್ನು ಹೆಚ್ಚಿಸಿದ್ದರಿಂದ ಅವರಿಗೀಗ 56 ಲಕ್ಷ ರೂಪಾಯಿ ಜಾಸ್ತಿ ಉತ್ಪನ್ನ ಬಂದಿತು. ಹೀಗೇ ರಾಜ್ಯಕ್ಕೆ

(ಶ್ರೀ ಅಣ್ಣಾರಾವ್ ಗಣಮುಖಿ)

ಬರಬೇಕಾಗಿದ್ದ ಒಳ್ಳೊಳ್ಳೆಯ ಸಂಪನ್ಮೂಲಗಳನ್ನೆಲ್ಲಾ ಕೇಂದ್ರದವರು ತೆಗೆದುಕೊಂಡಿದ್ದಾರೆ. ಆದರೆ ಅವರು ರಾಜ್ಯ ಸರ್ಕಾರಗಳಿಗೆ ರಾಜ್ಯಾಂಗದ 216ನೇ ವಿಧಿಯ ಪ್ರಕಾರವಾಗಿ ಎಷ್ಟನ್ನು ಕೊಡಬೇಕೋ ಅಷ್ಟನ್ನು ಕೊಡುತ್ತಿಲ್ಲ, ಈ ದಿವಸ ಕೇಂದ್ರದವರು ರಾಜ್ಯಸರ್ಕಾರಗಳಿಗೇನು ಇದರಲ್ಲಿ ಶೇ. 15 ರಷ್ಟನ್ನು ಕೊಡುತ್ತಿದ್ದಾರೋ ಅದನ್ನೀಗ ಈ ರೈಲ್ವೆ ದರಗಳಲ್ಲೇ ಮರ್ಜ್ ಮಾಡಿದ್ದಾರೆ. ಆದುದರಿಂದ ಅವರ ಅಲೋಕೇಷನ್ ಆಫ್ ಫೈನಾನ್ಸಸ್ ವಿಧಾನ ಸರಿಯಾಗಿಲ್ಲ. ಈ ದಿವಸ ಕೇಂದ್ರ ಸರ್ಕಾರದವರು ಅನುಸರಿಸುತ್ತಿರುವ ಧೋರಣೆಯನ್ನು ನೋಡಿದರೆ ರಾಜ್ಯಗಳ ಒಳ್ಳೊಳ್ಳೆಯ ಸಂಪನ್ಮೂಲಗಳನ್ನೆಲ್ಲಾ ಕಸಿದುಕೊಳ್ಳಬೇಕೆಂದಿರುವಂತೆ ನನಗೆ ಭಾಸವಾಗುತ್ತಿದೆ. ಇಂಥ ವಿಷಯಗಳನ್ನು ಮಂತ್ರಿಗಳು ಅಸೆಂಬ್ಲಿಯ ಮುಂದೇಕೆ ತಂದು ಚರ್ಚೆ ಮಾಡಬಾರದು ? ನಮಗೆ ಅವರು ರಾಜ್ಯಾಂಗದ ಪ್ರಕಾರ ಎಷ್ಟನ್ನು ಕೊಡಬೇಕೋ ಅಷ್ಟನ್ನು ಕೊಡುತ್ತಿಲ್ಲ. ಸರ್‌ಛಾರ್ಜ್, ಕಂಪನಿ ಟ್ಯಾಕ್ಸ್, ಹೀಗೆ ಪ್ರತಿಯೊಂದೂ ಅವರ ಪಾಲಾಗಿವೆ. ನಮಗಿನ್ನು ಉಳಿದಿರುವುದು ಕೇವಲ ಲೋಕಲ್ ಟ್ಯಾಕ್ಸ್‌ಗಳು ಮಾತ್ರ. ಹೀಗೆ ಈ ಇನ್‌ಕಂ ಟ್ಯಾಕ್ಸ್ ಬಾಬಿನಲ್ಲಿ ನಮಗೆ ಭಾರಿ ಹೊಡೆತ ಬಿದ್ದಿದೆ......

ಶ್ರೀ ಬಿ. ಡಿ. ಜತ್ತಿ.—ಅವರ ಮುಂದೆ ವಾದವನ್ನು ಮಾಡಿ ನಮ್ಮ ಕೇಸನ್ನು ಅವರ ಮುಂದಿಟ್ಟಿದ್ದೇವೆ.

ಶ್ರೀ ಅಣ್ಣಾರಾವ್ ಗಣಮುಖಿ.—ಆದರೆ ಆಪರೇಷನ್ ಸಕ್ಸೆಸ್‌ಫುಲ್, ಪೇಷೆಂಟ್ ಡೈಡ್ ಎನ್ನುವಂತಾಗಬಾರದು ಎಂದು ಹೇಳುತ್ತೇನೆ.

Sri B. D. JATTI.—Before the award is given, how can anybody come to the conclusion, I do not know.

ಶ್ರೀ ಅಣ್ಣಾರಾವ್ ಗಣಮುಖಿ.—ಹೀಗೆ ಯೂನಿಯನೈಜೇಷನ್ ಮಾಡುತ್ತೇವೆಂದು ಹೇಳಿ ಸಕ್ಕರೆ, ಬಟ್ಟೆ, ಟೊಬ್ಯಾಕೋ ಇವುಗಳಮೇಲೆಲ್ಲಾ ಹೆಚ್ಚು ತೆರಿಗೆಯನ್ನು ವಿಧಿಸಬೇಕೆಂದಿದ್ದಾರೆ. ಯೂನಿಫಾರಂ fiscal policy ಎಂದರೆ ಇದೇನೇನು ? ನಾವು ಅವರಲ್ಲಿ ಒತ್ತಾಯ ಹಾಕಿ ಡಿವಿಜಬಲ್‌ಪೂಲಿನಲ್ಲಿ ನಮಗೆ ಬರಬೇಕಾದ್ದನ್ನು ಬರುವಂತೆ ಮಾಡಿಕೊಳ್ಳಬೇಕು. ಹೀಗೆ ಕೇಂದ್ರದವರು ಈ ವಸ್ತುಗಳಮೇಲೆ ಹೆಚ್ಚು ತೆರಿಗೆ ಹಾಕಿದರೆ ನಾಳೆ ರಾಜ್ಯ ಸರ್ಕಾರದವರು ಇಲ್ಲಿ ಅವುಗಳ ಬಗ್ಗೆ ತೆರಿಗೆಯನ್ನು ಅಥವಾ ಎಸ್.ಟಿ.ಯನ್ನು ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಹಾಗೆ ಮಾಡಿದರೆ ಜನರಿಗೆ ಬಹಳ ತ್ರಾಸಾಗುತ್ತದೆ. ಆದುದರಿಂದ ಪ್ರತಿಯೊಂದು ಐಟಂನ್ನೂ ಡಿವಿಜಬಲ್‌ಪೂಲ್‌ಗೆ ಹಾಕಿ ಸ್ಟೇಟುಗಳಿಗೆ 20 ಪರ್ಸೆಂಟ್ ಮತ್ತು ಕೇಂದ್ರದವರಿಗೆ 80 ಪರ್ಸೆಂಟ್ ಎಂತ ಹೇಳುವುದೆಂದರೇನು ? ಇದರಿಂದ ನಾವು ಯಾವ ಯೋಜನೆಗಳನ್ನೂ ಮಾಡುವುದಕ್ಕಾಗುವುದಿಲ್ಲ ಎಂದು ಹೇಳಿ, ಸರ್ಕಾರದವರು ಅವರಲ್ಲಿ ಪಾರ್ಟಿಸಿಪೇಟ್ ಮಾಡುವುದಿಲ್ಲ ಎಂತ ಹೇಳಬೇಕು. ಆ ರೀತಿ ನಮ್ಮ ಸರ್ಕಾರದವರು ವಾದಿಸಿ ಹೆಚ್ಚು ಹಣವನ್ನು ಕೇಂದ್ರದಿಂದ ಪಡೆಯದಿದ್ದರೆ ನಿಮ್ಮ ಸೊಂಟ ಮುರಿದೀತು !......

ಅಧ್ಯಕ್ಷರು.—ಯಾರ ಸೊಂಟ ಎಂದು ಹೇಳಿದಿರಿ ?

ಶ್ರೀ ಅಣ್ಣಾರಾವ್ ಗಣಮುಖಿ.—ನಮ್ಮ ಜನರ ಸೊಂಟ ಮುರಿದೀತು ಎಂತ ಹೇಳಿದೆ. ಅಂದರೆ ಟ್ಯಾಕ್ಸ್‌ಪೇಯರ್ಸ್ ಸೊಂಟ ಮುರಿಯುತ್ತೆಂದು ನನ್ನ ಭಾವನೆ.

ಶ್ರೀ ಎಸ್. ಎಂ. ಕೃಷ್ಣ.—ಶ್ರೀ ಜತ್ತಿಯವರ ಸೊಂಟ ಅಂತ ಹೇಳಲಿಲ್ಲವಲ್ಲಾ.

ಶ್ರೀ ಅಣ್ಣಾರಾವ್ ಗಣಮುಖಿ.—ಇಷ್ಟೆಲ್ಲಾ ಇವರು ಕಮಿಟ್ ಮಾಡಿಕೊಂಡಿರುವುದರಿಂದ ಇವರು ಜನರಿಗೇನಾದರೂ ಪರಿಹಾರ ಕೊಡಬೇಕೆಂದರೆ—ಅದು ಆನೆಯಮೇಲೆ ಬರುತ್ತದೆ, ಇವರು ಜನರಮೇಲೆ ಹಾಕತಕ್ಕ ತೆರಿಗೆಗಳಾದರೆ—ಅದು ರೇಸ್‌ಹಾರ್ಸಿನಮೇಲೆ ಬರುತ್ತದೆ. ಉದಾಹರಣೆಗೆ, ಮೊನ್ನೆ ತಾನೆ ತಂದಿದ್ದ ಪಂಚಾಯ್ತಿ ಆಕ್ಟ್, ಇರಿಗೇಷನ್ ಸೆಸ್ ಆಕ್ಟ್, ಮೈಂಟೆನೆನ್ಸ್ ಆಫ್ ಇರಿಗೇಷನ್ ಪ್ರಾಜೆಕ್ಟ್ಸ್ ಆಕ್ಟ್, ಭೂಕಂದಾಯದ ಹೆಚ್ಚುವರಿ—ಇವುಗಳೆಲ್ಲಾ ಎಷ್ಟು ಬೇಗ ಬಂದವೋ ಅಷ್ಟು ಬೇಗ ಜನರಿಗೆ ಅನುಕೂಲ, ಪರಿಹಾರ ಸಿಗತಕ್ಕ ಮಷರ್ಸು ಬರುವುದಿಲ್ಲ.

5-00 P. M.

ಈ ರೀತಿ ಆನೆಯಮೇಲೆ ಕುಳಿತುಕೊಂಡು ಬರತಕ್ಕ ವ್ಯವಹಾರವನ್ನು ಬಿಟ್ಟುಬಿಡಬೇಕು. ಏಕೆಂದರೆ ಮುಂದಿನ ಬಡ್ಜೆಟ್ ಬಂದರೂ ಕೂಡ ಇದೇ ನಮೂನೆ ಡೆಫಿಸಿಟ್ ಆಗಿರುತ್ತದೆ. ಲೋನ್ಸ್ ನೋಡಿ. ಇಂಟರ್ ನ್ಯಾಷನಲ್‌ಅಸಿಸ್ಟೆನ್ಸ್ ಏನಿದೆ ? ಮುಕ್ಕಾಲು ಪರ್ಸೆಂಟ್‌ನಂತೆ ಸಾಲ ತೆಗೆದುಕೊಂಡು ಬರುತ್ತೀರಿ ಅದು ಒಂದು ಪರ್ಸೆಂಟ್ ಕೂಡ ಆಲ್ಲ. ಅದನ್ನು ನಮಗೆ ಎಷ್ಟಕ್ಕೆ ಕೊಡುತ್ತೀರಿ? ನಾಲ್ಕೂವರೆ, ಐದುವರೆ ಪರ್ಸೆಂಟ್‌ನಂತೆ, ಹೇಗೆ ಆದರೂ 3ರ ಮೇಲೆಯೇ

ಕೊಡುತ್ತೀರಿ? ಈ ಬಜೆಟ್ ಪುಸ್ತಕದಲ್ಲಿ ಎಲ್ಲಿನೋಡಿದರೂ ಕೂಡ ಅರ್ಧಭಾಗವೆಲ್ಲಾ ಬರೀ ಸಾಲ ತೆಗೆದುಕೊಂಡಿರುವುದೇ ಇದೆ. 1956 ರಿಂದ ಸಾಲವೇ ಸಾಲ. ಇನ್ನೂ ಕೊಡದೇ ಉಳಿದಿರತಕ್ಕದ್ದು ಎಷ್ಟು ಇದೆ, ಅದನ್ನು ಹೇಗೆ ತೆಗೆದುಕೊಳ್ಳುತ್ತೇವೆ ಎಂಬುದು ಗೊತ್ತಾಗುವುದಿಲ್ಲ. ಮುಕ್ಕಾಲು ಪರ್ಸೆಂಟ ನಂತೆ ತಂದು ಶ್ರೀಮಾನ್ ಎಂ. ಆರ್. ಪಾಟೀಲ್ ಅವರು ಹೇಳಿದಂತೆ ಕೋ-ಆಪರೇಟೀವ್ಸ್ ಮುಖಾಂತರ ಹಂಚುವಾಗ ಅದು 9 ಪರ್ಸೆಂಟ್‌ವರೆಗೂ ಕೂಡ ಹೋಗುತ್ತದೆ. ಅದು ಒಕ್ಕಲಿಗನಿಗೆ ತಲಪುವ ಹೊತ್ತಿಗೆ 9 ಪರ್ಸೆಂಟ್‌ಗೆ ಬರುತ್ತದೆ. ಒಕ್ಕಲಿಗರಿಗೆ, ವ್ಯವಸಾಯಗಾರರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ರಿಸರ್ವ್ ಬ್ಯಾಂಕ್‌ನವರು ಕಡಿಮೆ ಬಡ್ಡಿ ದರದಲ್ಲಿ ಕೊಟ್ಟರೂ ಕೂಡ ನೀವು ಮಾತ್ರ ಬಹಳ ಹೆಚ್ಚಿನ ದರದಲ್ಲಿ ಅದನ್ನು ಅವರಿಗೆ ಕೊಡುತ್ತಾ ಇದ್ದೀರಿ. ಶ್ರೀಮಾನ್ ಬಸಪ್ಪನವರು ರಿಸರ್ವ್ ಬ್ಯಾಂಕಿನಿಂದ ತಂದ ಹಣವನ್ನು ಕೊಡುವಾಗ ಎರಡೂವರೆ ಪರ್ಸೆಂಟ್‌ಗಿಂತ ಹೆಚ್ಚಿನ ದರದಲ್ಲಿ ಕೊಡಬಾರದು, ಅವರು ಕೊಡುವುದಕ್ಕಿಂತ ಸ್ವಲ್ಪ ಹೆಚ್ಚಿನ ಮಾರ್ಜಿನ್ ಇಟ್ಟುಕೊಳ್ಳಬೇಕೆಂದು ಹೇಳಿದರು ಅವರ ಮಾತನ್ನು ಗಮನಿಸಿದಂತೆ ಕಾಣುವುದಿಲ್ಲ ಈಗ ಎಲ್ಲಾ ಕಡೆಯಲ್ಲೂ 'ತ್ರೀ ಟೈರ್ ಸಿಸ್ಟಂ' ಬಂದಿದೆ. ಮುಂದೆ ಯಾವಾಗ ಫೋರ್ ಟೈರ್ ಸಿಸ್ಟಂ ಬರುತ್ತದೆಯೋ ಗೊತ್ತಿಲ್ಲ. ಮುಂದೆ ಇದರ ಯುಟಿಲೈಸೇಷನ್ ಹೆಚ್ಚಾದಾಗ ಈ ಹಣ ಕೈಬಿಟ್ಟು ಹೋದರೆ ಆಗ ಬಹಳ ಕಷ್ಟವಾಗುತ್ತದೆ ಎಂದು ನನಗೆ ಅನಿಸುತ್ತದೆ. ಫೈನಾನ್ಸ್ ಕಮೀಷನ್ ಅವರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದ್ದಾರೆ ಖರ್ಚುಎಷ್ಟು ಹೆಚ್ಚಾಗಿದೆ, ಟ್ಯಾಕ್ಸಿನ ರಿಯಾಯಿತಿ ಎಷ್ಟು ಏರಿದೆ ಎಂಬ ಎರಡು ಮಾತನ್ನು ಹೇಳಿದ್ದಾರೆ. ಜನರ ಇನ್‌ಕಂ ಎಷ್ಟು ಹೆಚ್ಚಾಗಿದೆ ಅದಕ್ಕೆ ತಕ್ಕಂತೆ ಟ್ಯಾಕ್ಸ್ ಕೊಡತಕ್ಕ ಶಕ್ತಿ ಹೆಚ್ಚಾಗಿದೆಯೇ ಎಂಬುದನ್ನು ಅವರು ಹೇಳುವುದಿಲ್ಲ ಅದನ್ನು ಸ್ವಲ್ಪ ಮರೆ ಮಾಡಿದ್ದಾರೆ. ಅದನ್ನು ಹೇಳಿದ್ದಿದ್ದರೇ ಏನಾಗುತ್ತಿತ್ತೋ ಗೊತ್ತಿಲ್ಲ. ಅಂತೂ ಅದನ್ನು ಹೇಳಬೇಕಾಗಿತ್ತು. ಎಲ್ಲಾ ಮಾತನ್ನೂ ಹೇಳುತ್ತಾರೆ, ಅದನ್ನೂ ಹೇಳಿದ್ದರೇ ಚೆನ್ನಾಗಿತ್ತು. ಟ್ಯಾಕ್ಸನ್ನು ಕೊಡತಕ್ಕ ಶಕ್ತಿ ಹೆಚ್ಚಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡಿದ್ದೆ ಆದರೆ ಅದನ್ನು ಅವರು ಸೈನ್‌ಟಿಫಿಕ್ ಆಗಿ ಹೇಳಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಅದನ್ನು ಎಲ್ಲಿ ಹುಡಿಕಿನೋಡಿದರೂ ಕೂಡ ಅದು ಎಲ್ಲೂ ಕಾಣಲಿಲ್ಲ. ಡೈರೆಕ್ಟ್ ಟ್ಯಾಕ್ಸೇಷನ್, ಇನ್‌ಡೈರೆಕ್ಟ್ ಟ್ಯಾಕ್ಸೇಷನ್ ಹೆಚ್ಚು ಆದ್ದದ್ದು, ಕಡಿಮೆ ಆದ್ದದ್ದು ನೋಡಿದ್ದೇವೆ. ಇನ್‌ಡೈರೆಕ್ಟ್ ಟ್ಯಾಕ್ಸೇಷನ್ 200ಪರ್ಸೆಂಟ್‌ಗೆ ಏರಿದೆ. ಟಾಕ್ಸ್ ಏರಿರುವುದು ಎಷ್ಟು? ಅದು ಇಂಡಿಯಾ ಸರ್ಕಾರದವರ ಕೈಯಲ್ಲಿ ಒಂದು ಪಾಲಸಿ ಆಗಿ ಒಂದು ಡ್ಯೂಯಲ್ ಪಾಲಿಸಿಯಾಗಿದೆ. ರಾಜ್ಯಾಂಗದ ಪ್ರಕಾರ ಮಾನಿಟರಿ ಪಾಲಿಸಿ ಎಂದರೆ ಕರೆನ್ಸಿ ಸೆಂಟ್ರಲ್ ಗವರ್ನಮೆಂಟಿನವರಿಗೆ ಸೇರಿದ್ದು. ಒಂದು ವೇಳೆ ಅವರ ಕರೆನ್ಸಿ ಪಾಲಿಸಿಯಿಂದ ಪ್ರೈಸಸ್ ಹೆಚ್ಚಾದುದ್ದು ಎಂದರೆ ಅದು ಅವರ ಹೊಣೆಯಾಗುತ್ತದೆ, ಪ್ರೊಡಕ್ಷನ್ ಕಡಿಮೆಯಾಗಿದ್ದು ಬೆಲೆಗಳು ಏರಿದ್ದರೆ ಆಗ ಅದು ನಿಮ್ಮ ಹೊಣೆಯಾಗುತ್ತದೆ. ಈ ಎರಡರಲ್ಲಿ ನಿಮ್ಮ ಹೊಣೆ ಎಷ್ಟು, ಅವರ ಹೊಣೆ ಎಷ್ಟು ಎಂಬುದನ್ನು ಹೇಳಬೇಕು. ನಿಮ್ಮ ಇಬ್ಬರ ನಡುವೆ ಜನರ ಗತಿ ಏನು? ಪ್ರೈಸ್‌ಫಿಕ್ಸೇಷನ್ ಸೆಂಟ್ರಲ್ ಗವರ್ನ್‌ಮೆಂಟ್ ಕಡೆ, ಡಿಸ್ಟ್ರಿಬ್ಯೂಷನ್ ನಿಮ್ಮ ಕಡೆ ಇದ್ದರೆ ಮಾನಿಟರಿ ಪಾಲಿಸಿ ಏನು? 9 ಪರ್ಸೆಂಟ್ ಪ್ರೊಡಕ್ಷನ್ ಹೆಚ್ಚಾಗಿದ ನ್ಯಾಷನಲ್ ಇನ್‌ಕಂ ಹೆಚ್ಚಾಗಿದೆ ಎಂದು ಹೇಳಬಹುದು. 9 ಪರ್ಸೆಂಟ್ ಪ್ರೊಡಕ್ಷನ್ ಹೆಚ್ಚಾಗಿದ್ದರೂ ಮಾನಿಟರಿ ಸಪ್ಲೈ ಎಷ್ಟು ಹೆಚ್ಚಾಗಿದೆ ಎಂದರೆ 30 ಪರ್ಸೆಂಟ ಹೆಚ್ಚಾಗಿದೆ. ಎಲ್ಲ ಕಡೆಯಲ್ಲೂ ಸೌಂಡ್‌ಫೈನಾನ್ಷಿಯಲ್ ಪಾಲಿಸಿ ಎಂದರೆ ಪ್ರೊಡಕ್ಷನ್ ಎಷ್ಟು ಹೆಚ್ಚಾಗಿದೆಯೋ ಅಷ್ಟೇ ನೋಟ್ ಸರ್ಕ್ಯುಲೇಷನ್ ಕೂಡ ಹೆಚ್ಚಾಗಬೇಕೆಂದು ಇದೆ. ಅದು ಸಾಧಾರಣವಾಗಿ ಸಮ ಸಮ ಇರಬೇಕು, ಆದರೆ ಈಗ ಅದು ಸಮ ಸಮ ಇಲ್ಲ. 9 ಪರ್ಸೆಂಟ್ ನ್ಯಾಷನಲ್ ಇನ್‌ಕಂ ಹೆಚ್ಚಾಗುತ್ತದೆ, ಆ ಕಡೆ ಮಾನಿಟರಿ ಸಪ್ಲೈ 30 ಪರ್ಸೆಂಟ್ ಜಾಸ್ತಿಯಾಗುತ್ತಾ ಇದೆ. ಎಂದರೆ ಇನ್‌ಫ್ಲೇಷನ್ ಜಾಸ್ತಿಯಾಗಿದೆ. ಹೀಗಿರುವಾಗ ಈ ವಿಷಯದಲ್ಲಿ ನಿಮ್ಮ ಹೊಣೆ ಎಷ್ಟು ಭಾಗ, ಇಂಡಿಯಾ ಸರ್ಕಾರದವರ ಹೊಣೆ ಎಷ್ಟು ಭಾಗ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಧಾರಣೆಗಳೆಲ್ಲಾ ಜಾಸ್ತಿಯಾದಾಗ ನೌಕರರು ಡಿ. ಎ. ಲಾವ್ ಅನ್ನುತ್ತಾರೆ. ಡಿ. ಎ. ಹೆಚ್ಚಾದ ಕೂಡಲೇ ಧಾರಣೆಗಳು ಹೆಚ್ಚಾಗುತ್ತದೆ. ಹೀಗೆ ಇದು ಒಂದು ವಿಷಚಕ್ರವಾಗಿದೆ. ಎಕನಾಮಿಕ್ ಪಾಲಿಸಿ, ಮಾನಿಟರಿ ಪಾಲಿಸಿ ಮತ್ತು ಫಿಸ್‌ಕಲ್ ಪಾಲಿಸಿ ಇವು ಮೂರರಲ್ಲೂ ಹಾರ್ಮೊನಿ ಇರಬೇಕು ಸೆಂಟ್ರಲ್ ಫೈನಾನ್ಸ್ ಮಿನಿಸ್ಟರಿಗೆ ಎಲ್ಲೆಲ್ಲೂ ಅಭಿನಂದನೆಗಳನ್ನು ಕೊಡುತ್ತಾ ಇದ್ದಾರೆ. ಏಕೆಂದರೆ ಇನ್‌ಕಂ ಟ್ಯಾಕ್ಸನಲ್ಲಿ ವಿನಾಯಿತಿಯ ಮಟ್ಟವನ್ನು ಹೆಚ್ಚು ಮಾಡಿದರು ಮತ್ತು ಎಕ್ಸೈಜ್‌ನಲ್ಲಿ ಕೆಲವು ಕಡಿಮೆ ಮಾಡಿದರು. ಇನ್ನೂ ಏನೇನು ಮಾಡುತ್ತಾರೋ ಗೊತ್ತಿಲ್ಲ. ಇದರಲ್ಲಿ ಸ್ಟೇಟ್ ಗವರ್ನ್‌ಮೆಂಟಿನವರ ಭಾಗ ಕೂಡ ಇದೆ. ಇದರಲ್ಲಿ ನಿಮ್ಮ ಅಭಿಪ್ರಾಯ ತೆಗೆದುಕೊಂಡು ಖರ್ಚು ಮಾಡಿದ್ದಾರೆಯೋ ಇಲ್ಲವೋ ಗೊತ್ತಿಲ್ಲ ಈ ಎಲ್ಲಾ ದೃಷ್ಟಿಯಿಂದ ನೋಡಿದರೆ ಒಂದು ತರಹ ಹಾರ್ಮೊನಿ ಇರಬೇಕು. ಪ್ರೈಸಸ್ ಹೆಚ್ಚಾದರೆ ಸೇಲ್ಸ್ ಟ್ಯಾಕ್ಸ್ ಹೆಚ್ಚಾಗಿ ಬರುತ್ತದೆ; ಅದ್ದರಿಂದ ಸೇಲ್ಸ್‌ಟಾಕ್ಸ್‌ನಲ್ಲಿರತಕ್ಕ ಲೂಪ್‌ಹೋಲ್ಸನ್ನು

(ಶ್ರೀ ಅಣ್ಣಾರಾವ್ ಗಣಮುಖಿ)

ತಿದ್ದಿ ಬಹಳವಾಗಿಸೇಲ್ಸ್‌ಟ್ಯಾಕ್ಸ್‌ನ ಗಳಿಸುತ್ತಾ ಇದ್ದೇವೆ ಎಂದು ಒಪ್ಪಿಕೊಂಡಿದ್ದಾರೆ. ಈ ಎಲ್ಲಾ ದೃಷ್ಟಿಯಿಂದ ನೋಡಿದರೆ ಪ್ರೈಸಸ್‌ನು ಕಡಿಮೆ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

Sri G. V. GOWDA.—Mr. Speaker, Sir Ever since the begenning of the Third Plan, the financial position has been very gloomy and precarious. The budget presented to us for 1965-66 discloses a worse position. I must compliment the Finance Minister for his frank opinion in this regard. At the same time he has not indicated the manner in which he proposes to tide over the situation. So far as the deficit on the revenue account is concerned, it is nearly Rs. 4 crores. He has not given any hint in respect of the deficit on capital account, but according to my calculation it should be Rs. 6 crores because we have a deficit of nearly Rs. 6 crores in the current year. So the overhall picture would be Rs. 10 crores deficit. According to me, there are one or two important causes for this deficit. One is the fallacious approach in respect of revenue receipts that they anticipated since the inception of the Third Plan. As a matter of fact, based on the rates of taxation for 1960-61 up to the current year they had expected to have Rs 9 crores towards internal resources, but on the other hand the figures furnished by the Finance Minister himself disclose that there would be a minus figure of Rs.8.46 crores from 1961-62 to 1964-65. So everything has been upset because of a very wrong approach at the time of formulating the third plan. The second reason is that out of the revenue account we are meeting the interest charges and also repayment of instalments of the debts borrowed for investment in huge projects. We are meeting all these things out of the revenue account and that is why we are having deficit always on the revenue account from 1960-61. When they formulated the third plan they had proposed to raise internal resources to the extent of Rs. 110 crores which would be made up of Rs 9.8 crores balance from current revenue at 1960-61 level of taxation, but that has become an impossibility because they are having a minus figure of Rs. 8.46 crores deficit. Then they had planned to withdraw from the reserves nearly Rs. 15 crores, but we could see now that they have withdrawn Rs. 32 crores from the reserves. They expected to borrow Rs. 30 crores by way of open loan, but so far they have been able to borrow only Rs. 16.34 crores by way of open loan. Even in respect of other matters everything has been upset and that is why we have so much of strain and stress on our finances So far as additional taxation is concerned they contemplated to raise Rs. 42 crores against which they have been able to get only Rs. 25 crores. Therefore, I am suggesting that these are the two factors, that is, meeting the interest charges and the repayment of debts from the revenue account. This is a fallacious approach to the question. They should have convinced the Government of India or any lender for the matter of that, that the money will be repaid or interest will be paid only after the concerned project starts giving return. That has not been done.

Now the Finance Minister is saying that they have made these points very clear to the Fourth Finance Commission and asked for larger share of incometax, estate duty, etc. So far as excise duty is concerned, they were giving 40 per cent share to the States when the collection from excise duty was somewhere about Rs. 230, crores, but now it has gone up fivefold and yet the States' share has been reduced to 25 per cent. So there is an urgent need for urging upon the Government of India that this divisible pool should be enhanced to atleast to 50 per cent. I read in papers the other day that our Chief Minister has asked for cent percent share in the matter of income tax etc. to the States. Even if that is not possible, atleast to an appreciable extent the States' share from income tax has to be increased and that is the only way by which we can augment our resources and tide over the situation and not otherwise.

The grant-in-aid from the Government of India on this account has remained stagnant and no effort appears to have been made to get more aid from them under the provisions of the Constitution. We have been given only Rs. 6.75 crores whereas others have got Rs. 15 crores or so. When they are giving much higher amounts to Kerala and other States, why should we also not get a higher amount? If we analyse the resources available in Mysore, we have got sufficient hydro-electric potential, we have got lot of forest wealth, we have got rich irrigation projects and mining potential. We are still to develop all these. When we have got so much potential wealth, why should we not ask for more from the Government of India under the provisions of the Constitution? That is the thing they thought to have done. I hope that they have made out a case for much larger grant from the Government of India before the Finance Commission.

The other thing that they should have done is to tell the Government of India at the time of taking these loans that it is not possible to pay the interest charges and repayment instalments unless the projects for which these loans are sanctioned begin to give return. The interest charges that the Government had to bear last year was very much and this year it has gone up by 25 per cent. In 1963-64 we paid Rs. 8.86 lakhs towards interest charges and this year we are paying Rs.11,24 lakhs, *i. e.*, 25per cent more. Apart from this, we have to pay instalment of repayment of the debts. Unless all these debts are consolidated and the interest accruing is added on to the principal till all our projects begin to give return, it will notbepossible to meet this Commitment. If this is not done it will be impossible for the Finance Minister to show a surplus budget or to reduce the deficit because he is meeting everything out of revenue account. That is not a correct fiscal policy, if I may so put it. This point was touched by the hon'ble member Sri Kadidal Manjappa also. He also raised the point about unaccounted money. I do not know what the Government have done and whether they have taken any steps to bring out the unaccounted money. Nothing appears to have been done. So far as Mysore State is concerned, the abnormal increase in prices could be assigned to this factor that there is a wide circulation of unaccounted

(SRI G. V. GOWDA)

money in the State and nothing has been done to enearth this. Then our taxation policy also is not consistent with a Welfare State and we have got a defective collection machinery and this has led to deficit financing. It is often said that in a developing rural economy deficit financing is inevitable. I do concede that, but if we analyse all the facts that we have got so far as the rural sector is concerned, nothing has been done to better the lot of the rural people.

So far as the outstanding debts are concerned, they are nearly Rs. 200 crores. If we are to analyse the *per capita* tax revenue and the *per capita* gross receipt and the *per capita* incomee, I am afraid that we have not been able to do anything for our people in the country. So far as the dircet taxes are concerned, they have not increased to any appreciable extent. So far as indirect tax is concerned, from 1959-60 it has increased by 110 per cent while direct tax has increased by 25 per cent. This will have very wide repurcussions on our society. So far as non-tax revenue is concerned, no step appears to have been taken to improve the position In 1959-60 the non-tax revenue was Rs. 536 crores, but in 1964-65 it is only Rs. 422 crores and so it is on the decline. I do not know the net revenue from industrial concerns. We have invested so much, and we are not able to get even the interest charges. Then our revenue from forests is on the decline. In respect of other matters also, the net receipt shows a decline from the previons years.

The fundamental fiscal policy is to see that non-tax revenue is improved rather than tax revenue. I do not want to take much time of the House. I will invite attention of the House to one or two points and finish the speech. So far as the controversy that existed between the U-P. legislature and the judiciary, I am told this Government is asked to give its opinion. It is concerned with the privileges and rights of this legislature also. Therefore this House has got to be taken into confidence and a day or two should be allotted to express our opinion.

Mr. SPEAKER.—How many times I have appealed to the members! Soon after the Supreme Court's verdict I consulted the members Irrespective of party affiliation. No body was interested.

Sri G. V. GOWDA.—The second thing is about the three language formula to be considered by the Chief Ministers.

Mr. SPEAKER.—The Hon'ble Member can take it up under the Demands on education or Legislature.

Sri G. V. GOWDA.—With these observations I hope that something better would be done to improve the financial position of the State. The Finance Minister has not stated the measures he contemplates to fill the gap. Though he has hinted that revenue assessments can be implemented, it could be only from 1966-67 but not in the next financial year because one year's time has to be given.

Thank you.

ಶ್ರೀಮತಿ ಚಂಪಾಬಾಯಿ ಬೋಗಾಳೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, 1965-66ನೇ ಸಾಲಿನ ಬಜೆಟ್ಟನ್ನು ಅನುಮೋದಿಸುತ್ತಾ ಚುರುಕಾದ ಮತ್ತು ಹೊಸರೀತಿಯ ಬಜೆಟ್ಟನ್ನು ಹಣ ಕಾಸಿನ ಮಂತ್ರಿಯವರು ಮಂಡಿಸಿದ್ದು ನೋಡಿ ನನಗೆ ಬಹಳ ಆನಂದವಾಗುತ್ತದೆ ಮತ್ತು ಅಷ್ಟೇ ದುಃಖವಾಗುತ್ತದೆ. ಏಕೆಂದರೆ 1964ನೇ ಸಾಲಿನಲ್ಲಿ ಷೆಡ್ಯೂಲ್ ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್‌ನವರಿಗೆ ಕೊಡಬೇಕಾಗಿದ್ದ 20 ಲಕ್ಷ ರೂಪಾಯಿ ಹಣ ಕೊಡದೇ ಇದ್ದದನ್ನು ಈ ಬಜೆಟ್ಟಿನಲ್ಲಿ ಜಮಾ ತೆಗೆದುಕೊಳ್ಳಬೇಕಾಗಿತ್ತು. ಮಾನ್ಯ ಸಚಿವರು ಹಾಗೆ ಜಮಾ ತೆಗೆದುಕೊಳ್ಳದೇ ಇದ್ದದ್ದು ಬಹಳ ದುಃಖವಾಗುತ್ತದೆ. 35 ಲಕ್ಷ ಹರಿಜನರು ಉದ್ಯೋಗವಿಲ್ಲದೆ ಇದ್ದಾರೆ. ಅವರೆಲ್ಲ ಸ್ಕೀಮಿಗೆ ಸೇರಿಸಿ ತಮಗೆ ಸಹಾಯ ಮಾಡಬೇಕೆಂದು ಕೇಳಲಿಕ್ಕೆ ಹತ್ತಿದ್ದಾರೆ. ಅವರಿಗೆಲ್ಲ ಹೊಲ ಇಲ್ಲ, ಮನೆ ಇಲ್ಲ. ಯಾವುದಾದರೂ ಉದ್ಯೋಗ, ದಂಧೆ ತೆಗೆಯುವ ಯೋಜನೆಯನ್ನು ಮಾಡಿದರೆ ಅನುಕೂಲವಾಗುತ್ತದೆ. ಅಂಥಾದ್ದು ಮಾಡಿಲ್ಲ ಎಂದು ನನಗೆ ದುಃಖವಾಗುತ್ತದೆ. ಮಾನ್ಯ ಹಣ ಕಾಸಿನ ಸಚಿವರು, ಮುಖ್ಯ ಮಂತ್ರಿಗಳು ಮತ್ತು ಸಮಾಜ ಕಲ್ಯಾಣ ಸಚಿವೆಯರು ಇದಕ್ಕೆ ಲಕ್ಷ್ಯ ಕೊಟ್ಟು ಹೋದ ವರ್ಷ ಕೊಡದೇ ಇದ್ದ 20 ಲಕ್ಷ ರೂಪಾಯಿಗಳನ್ನು ಇದರಲ್ಲಿ ಸೇರಿಸಿ ಹರಿಜನರ ಉದ್ಧಾರ ಮಾಡಬೇಕೆಂದೂ ಗಾಂಧಿ ತತ್ವವನ್ನು ಆಚರಣೆಯಲ್ಲಿ ತರಬೇಕೆಂದೂ ಒತ್ತಿ ಒತ್ತಿ ವಿನಂತಿ ಮಾಡಿಕೊಳ್ಳಬೇಕಾಗಿದೆ. ಗಾಂಧಿ ತತ್ವವನ್ನು ತಮ್ಮ ನೆನಪಿಗೆ ತಂದು ಕೊಡುವುದು, ಹರಿಜನರ ಸ್ಕೀಮನ್ನು ಹಾಕಿಕೊಟ್ಟ ಗಾಂಧಿಯವರು ಇಲ್ಲ ಇಲ್ಲ, ಅದನ್ನು ನಮ್ಮ ಸರ್ಕಾರದವರು ಕಾರ್ಯಗತ ಮಾಡಬೇಕೆಂದು ವಿನಂತಿಸುತ್ತೇನೆ.

ಆಹಾರ ಪರಿಸ್ಥಿತಿಯ ವಿಚಾರದಲ್ಲಿ ಹಾಹಾಕಾರ ಬಹಳ ಬಂದಿದೆ. ಸರ್ಕಾರದವರು ಸಾಕಷ್ಟು ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಆ ಯೋಜನೆಗಳು ಪೂರ್ತಿ ಆಗಬೇಕಾಗಿದೆ. ಆ ಯೋಜನೆ ಗಳಿಗೆ ಪ್ರತಿ ವರ್ಷ ಎಷ್ಟು ಖರ್ಚು ಮಾಡಬೇಕು ಎನ್ನುವುದಕ್ಕೆ ಬಜೆಟ್ಟಿನಲ್ಲಿ ಹಣ ಮತ್ತು ಅಧಿಕ ಅಂಕಿ ಸಂಖ್ಯೆಗಳನ್ನು ಕೊಡಲಿಕ್ಕೆ ಹತ್ತಿದ್ದಾರೆ. ಈ ಅಂಕಿ ಸಂಖ್ಯೆಗಳಿಂದ ನೋಡಿದರೆ ನಮ್ಮ ರಾಜ್ಯಕ್ಕೆ ಬಹಳ ಉಪಯುಕ್ತವಾದೀತು ಎಂದು ಕಂಡುಬರುತ್ತದೆ. ಸರ್ಕಾರದವರು ನೀರಾವರಿ ಮತ್ತು ಇತರ ಯೋಜನೆಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದ್ದಾರೆ. ಈ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರುವಾಗ ಜಮೀನು ಮುಳುಗಡೆಯಾಗಿರುವ ರೈತರಿಗೆ ತಗಾವಿ ಸಾಲ ಕೊಡಲು ತೊಂದರೆಯಾಗುತ್ತಿದೆ. ಹಾಗೆ ಮಾಡದೆ ಜನರಿಗೆ ಅನುಕೂಲತೆ ಮಾಡಿಕೊಡಬೇಕು. ಬೇಗ ಮಾಡಿ ತಗಾವಿ ಸಾಲ ಕೊಡದೆ ಒಂದು ಯೋಜನೆ ಆಗಲು ಹತ್ತಾರು ವರ್ಷ ತೆಗೆದುಕೊಂಡು ಅಲ್ಲಿಯ ವರೆಗೂ ಜನರ ಅನುಕೂಲತೆ ಏನೂ ಮಾಡದೇ ಇದ್ದದ್ದೂ ಉಂಟು. ಮುಳುಗಡೆ ಜನರಿಗೆ ಭೂಮಿ ಸಾಗುವಳಿಗೆ ಗೊಬ್ಬರ ಸಿಕ್ಕುವುದಿಲ್ಲ, ಬೀಜ ಸಿಕ್ಕುವುದಿಲ್ಲ, ಪಂಪ್‌ಸೆಟ್ ಸಿಕ್ಕುವುದಿಲ್ಲ. ಹತ್ತು ವರ್ಷಗಳ ತನಕ ಈ ಯೋಜನೆಗಳು ಆಗದೆ ಇದ್ದರೆ, ರೈತರಿಗೆ ಸೌಕರ್ಯ ಸಿಕ್ಕದೆ ಇದ್ದರೆ ಆಹಾರ ಪರಿಸ್ಥಿತಿ ಸುಧಾರಿಸುವುದಿಲ್ಲ. ಇದನ್ನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಸರ್ಕಾರದವರು ತಗಾವಿ ಸಾಲ ಕೊಟ್ಟು ರೈತರಿಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಟ್ಟು ಆಹಾರ ಪರಿಸ್ಥಿತಿ ಯನ್ನು ಉತ್ತಮ ಪಡಿಸಲು ಪ್ರಯತ್ನ ಮಾಡಬೇಕಾಗಿದೆ. ಇದನ್ನು ಸರ್ಕಾರದವರು ರೈತರಿಗೆ ಸಕಾಲದಲ್ಲಿ ಸಾಲ ತಗಾವಿ ರೂಪದಲ್ಲಿ ಸಿಗುವಂತೆ ಮಾಡಬೇಕು.

ಪ್ರತಿಯೊಂದು ಯೋಜನೆಯನ್ನು ಹಾಕುವಾಗಲೂ ಪ್ಲಾನ್ ಎಸ್ಟಿಮೇಟ್, ಪ್ಲಾನ್ ಎಸ್ಟಿಮೇಟ್ ಎಂದು ಹೇಳಿ ಹತ್ತಾರು ವರ್ಷ ಕಾಲ ಹೋಗುತ್ತದೆ. ಇದಕ್ಕಾಗಿ ಎಷ್ಟು ದುಡ್ಡು ಖರ್ಚಾಗುತ್ತದೆ, ಜನಸಂಖ್ಯೆ ಎಷ್ಟು ಬೆಳೆದಿದೆ ಎನ್ನುವುದನ್ನು ನೋಡಿದ್ದೀರಾ ? ದಯವಿಟ್ಟು ಇದನ್ನು ಹೇಳಬೇಕು. ಬೆಳಗಾಂ ಜಿಲ್ಲೆಯಲ್ಲಿ ನನ್ನ ತಾಲ್ಲೂಕು ಭಾಗದಲ್ಲಿರುವ ಜನರೆಲ್ಲ ರೈತರು. ಅವರು ಬಹಳ ಚಿಂತಾಜನಕ ಪರಿಸ್ಥಿತಿಯಲ್ಲಿದ್ದಾರೆ. ಸಾಲ ಬೇಕು ಎಂದರೆ ಸಾಲಸೋಲ ಸಿಕ್ಕುವುದಿಲ್ಲ. ಅವರಿಗೆ ಏನೂ ಕೊಡಲಿಕ್ಕೆ ಆಗುವುದಿಲ್ಲ ಎನ್ನುತ್ತಾರೆ. ಹೀಗಾದರೆ ಆಹಾರದ ಉತ್ಪನ್ನ ಹೇಗೆ ಆಗುತ್ತದೆ. ಐದು ಸಾವಿರ ಎಕರೆ ನೀರಾವರಿ ಯೋಜನೆಯಲ್ಲಿ ಮುಳುಗಿ ಹೋಗುವ ಹೊತ್ತಿನೊಳಗೆ ಹತ್ತು ವರ್ಷದ ತನಕ ಯೋಜನೆಯ ಕೆಲಸ ಆದರೆ ಆ ಜನರಿಗೆ ಯಾವುದೇ ಸೌಕರ್ಯ ಸಿಕ್ಕದೆ ಇದ್ದರೆ ಹೇಗೆ ? ಅದನ್ನು ತಾವು ವಿಚಾರ ಮಾಡಿರಿ. ಸಣ್ಣ ಸಣ್ಣ ನೀರಾವರಿ ಕೆಲಸಗಳನ್ನು ಮಾಡುತ್ತಿದ್ದೇವೆಂದು ಹೇಳಿದ್ದಾರೆ. ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ಎಕರೆಗೆ ನೀರನ್ನು ಕೊಟ್ಟಿದ್ದಾರೆ, ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ರಸ್ತೆಯನ್ನು ಮಾಡಿದ್ದಾರೆ ಎಂಬುದನ್ನು ದಯವಿಟ್ಟು ತಿಳಿಸಬೇಕಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ನಾನು ಪ್ರತಿ ವರ್ಷದ ಬಜೆಟ್ಟಿನಲ್ಲಿಯೂ ಮಾತನಾಡುವುದು ಎಂದರೆ ಬಹಳ ಕೆಡಕೆನಿಸುತ್ತದೆ. ನನ್ನ ತಾಲ್ಲೂಕದಲ್ಲಿ 125 ಹಳ್ಳಿಗಳಿರುತ್ತವೆ. ಪ್ರತಿ ಒಂದು ಕೆಲಸವನ್ನು ಬಿ.ಡಿ.ಓ.ಗಳ ಮೇಲೆ ಹೇರಿರುವಿರಿ. ಎಷ್ಟೋ ಮೀಟಿಂಗುಗಳನ್ನು ಮಾಡಿ ರೈತನ ಕೆಲಸವನ್ನು ಮಾಡುವುದು ಹೇಗೆ? ಇದರಿಂದ ಅನಾನುಕೂಲವಾಗುತ್ತದೆ. ಎಂದು ಪಂಪ್‌ಸೆಟ್ ಕೊಡಲು ಅಥವಾ ಯಾವುದೇ ಕೆಲಸವಾಗಲು ಬಿ.ಡಿ.ಓ. ಅವರ ಹತ್ತಿರ ಹೋಗಬೇಕು. ಪ್ರತಿಯೊಂದು

(ಶ್ರೀಮತಿ ಚಂಪಾಬಾಯಿ ಬೋಗಲೆ)

ಕೆಲಸದ ಸ್ಕೀಮಿನ 1,000 ರೂಪಾಯಿ ಯೋಜನೆಯನ್ನೂ ಅವರಿಗೆ ವಹಿಸಿರುತ್ತಾರೆ. ಆ ಸಂಬಂಧದಲ್ಲಿ ಅವರು ಮೀಟಿಂಗಿಗೆ ಹೋಗುವ ಹೊತ್ತಿನೊಳಗೆ ಕೆಲಸ ಹೇಗಾಗುತ್ತದೆ? ರೈತರಿಗೆ ಅನುಕೂಲತೆ ಮಾಡಲು ಯಾವ ಯಾವ ಯೋಜನೆಗಳನ್ನು ಹಾಕಿಕೊಂಡಿದ್ದೀರಿ ಪ್ರತಿಯೊಂದು ಇಲಾಖೆಗೂ ಸರಿಯಾಗಿ ಹಂಚಿರಿ. ವರ್ಷ ವರ್ಷವೂ ಹತ್ತಾರು ಯೋಜನೆಗಳು ನಡೆದರೆ ಅವುಗಳನ್ನೆಲ್ಲ ಬಿ.ಡಿ.ಓ. ಅವರ ಮೇಲೆ ಹಾಕುತ್ತೀರಿ. ಇದರಿಂದ ಅವರು ಯಾವಾಗಲೂ ಮೀಟಿಂಗಿಗೆ ಜೀಪ್ ತೆಗೆದುಕೊಂಡು ಓಡಾಡುತ್ತಿರುತ್ತಾರೆ. ಇದರಿಂದ ಎಷ್ಟು ದುಡ್ಡು ರೈತರಿಗೆ ಮತ್ತು ಹರಿಜನರ ಅಭಿವೃದ್ಧಿಗೆ ಸರ್ಕಾರ ಖರ್ಚು ಮಾಡುತ್ತದೆ ಎನ್ನುವುದನ್ನೂ ಎಷ್ಟು ಹಣ ಖರ್ಚಾಗದೆ ರೈತರಿಗೆ ಮುಟ್ಟದೆ ಲ್ಯಾಪ್ಸ್ ಆಯಿತು ಎನ್ನುವುದನ್ನೂ ಸರ್ಕಾರ ತಿಳಿಸಬೇಕು.

ಕೇಂದ್ರ ಸರ್ಕಾರದಿಂದ ದುಡ್ಡನ್ನು ಬಡ್ಡಿಗೆ ತೆಗೆದುಕೊಂಡು ಸರ್ಕಾರ ಬಡ್ಡಿ ಕೊಡುತ್ತಿದೆ. ಈ ಹಣ ನಮ್ಮ ರಾಜ್ಯದ ಸರ್ಕಾರದಿಂದ ಸರಿಯಾಗಿ ಹಂಚಿಕೆ ಆಯಿತೇ ಇಲ್ಲವೇ ಎನ್ನುವುದನ್ನು ನೋಡಬೇಕು. ಈ ಹಣವನ್ನು ಹಂಚುವುದರಲ್ಲಿ ಬಡವರ ಮತ್ತು ರೈತರಿಗೆ ತಗಾವಿ ಸಾಲ ಸಿಗಲಿಕ್ಕೆ, ಅವರ ಅನುಕೂಲದ ಕಡೆಗೆ ಲಕ್ಷ್ಯ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹರಿಜನರಿಗೆ ಏನಾದರೂ ಜಿಲ್ಲಾ ಮಟ್ಟದಲ್ಲಿ ಸ್ಕೀಮು ಹಾಕಿ ಉದ್ಯೋಗ, ದಂಧೆ ಪ್ರಾರಂಭ ಮಾಡಲು ಸಹಾಯ ಮಾಡಿ ಕೈಗಾರಿಕೆಗಳನ್ನು ಬೆಳೆಸಲು ಅನುಕೂಲತೆ ಮಾಡಿಕೊಡಬೇಕೆಂದು ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಹರಿಜನರು ಸಹಕಾರ ಸಂಘಗಳನ್ನು ಮಾಡಿಕೊಂಡಿರುವರು. ಅವರಿಗೆ ತಗಾವಿ ಸಾಲ ಸಿಗುವುದಿಲ್ಲ ಎಂತ ಸಂಘಗಳಿಗೆ ಎಲ್ಲ ಕಾನೂನು ತೆಗೆದು ಸಾಲ ಕೊಡಬೇಕು. ರೈತರಿಗೆ ಗೊಬ್ಬರ ಕೊಡಬೇಕು, ಪಂಪ್ ಸೆಟ್ ಕೊಡಬೇಕು, ಸಣ್ಣ ಸಣ್ಣ ನೀರಾವರಿ ಮಾಡಬೇಕು. ಅವರಿಗೆ ಹೊಲ, ಬಾವಿ ರಿಪೇರಿ ಇಂಥವುಗಳಿಗೆ ಸಾಲ ಕೊಡಬೇಕು. ಅಂತಹ ಸಂಘಗಳಿಗೆ ಪ್ರೋತ್ಸಾಹ ಕೊಡಬೇಕು. ಇಂಥ ಯೋಜನೆಗಳನ್ನು ಮಾಡಿಯೂ ನಮ್ಮ ಕಡೆ ಸುಮಾರು ಯಶಸ್ವಿಯಾಗಿಲ್ಲ ಎಂದು ಹೇಳುತ್ತೇನೆ. ನಮ್ಮ ಪ್ರದೇಶದ ಮಟ್ಟಿಗಾದರೂ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿ, ಮುಳುಗಡೆಯಾದ ಜನತೆಗೆ ಬೇಗ ಅದರ ಫಲ ಬರುವಂತೆ ಮಾಡಬೇಕು. ಸರ್ಕಾರ ಈ ಕಾರ್ಯವನ್ನು ಮಾಡಬೇಕು ಎಂದು ಹೆಚ್ಚು ಕಳಕಳಿಯಿಂದ ವಿನಂತಿ ಮಾಡಿಕೊಂಡು ಮಾನ್ಯ ಹಣಕಾಸಿನ ಮಂತ್ರಿಗಳು ಇದಕ್ಕೆ ಹೆಚ್ಚು ಗಮನ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

5-30 P.M.

ಇನ್ನು ಸಹಕಾರ ಸಂಘಗಳ ವಿಚಾರ. ಈಗ ಕೋ-ಆಪರೇಷನ್ ಎಂದರೆ ಒಂದು ಲೈಸನ್ ಇದ್ದ ಹಾಗೆ ಇದೆ. ಪರಸ್ಪರ ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡುವ ವಿಷಯದಲ್ಲಿ ಸರ್ಕಾರದವರು ಒಂದು ಲೈಸನ್ಸ್ ಕೊಡುತ್ತಿದ್ದಾರೆಂದು ನಾನು ಅಂದುಕೊಂಡಿದ್ದೇನೆ. ಎರಡನೆಯ ಪಾಂಚವಾರ್ಷಿಕ ಯೋಜನೆಯಲ್ಲಿ ಪಂಡಿತ ಜವಹರಲಾಲ್ ನೆಹರೂ ಅವರು ಸಹಕಾರ ಸಂಘಗಳನ್ನು ಮಾಡಿ ಜನತೆಗೆ ಅನುಕೂಲ ಮಾಡಿಕೊಡುವ ಯೋಜನೆಯನ್ನು ಹಾಕಿಕೊಟ್ಟಿದ್ದಾರೆ. ಆದರೆ ದುರ್ದೈವದಿಂದ ನಮ್ಮ ರಾಜ್ಯದಲ್ಲಿ ಎಷ್ಟೋ ಸಹಕಾರ ಯೋಜನೆಗಳು ನಡೆಯುತ್ತಿರುತ್ತವೆ. ಆದರೆ ಈ ಖಾತೆಯಲ್ಲಿ ನೌಕರ ವರ್ಗದ ಸಂಖ್ಯೆಯು ಹೆಚ್ಚಾಗಿದೆ. ಕೆಲಸ ಮಾತ್ರ ಕಡಿಮೆ ಇದೆ. ಅದಲ್ಲದೆ ಯಾವ ಯೋಜನೆಗಳು ಪ್ರಾಮಾಣಿಕತನದಿಂದ ಕಾರ್ಯ ಮಾಡಲ್ಪಡುತ್ತವೆಯೋ ಅಂಥವುಗಳಿಗೆ ಸಹಾಯವಿಲ್ಲ. ಆದರೆ ಸುಳ್ಳು ಇದ್ದ ಸ್ಕೀಮುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ನಮ್ಮ ಸರ್ಕಾರ ಕೊಡುವುದಾಗಿದೆ. ಅಂತಹವರಿಗೆ ಲಕ್ಕಿ ಚಾನ್ಸ್ ಕೊಡುವುದು ಸರ್ಕಾರದ ಪರಿಪಾಠವಾಗಿದೆ. ಈ ವಿಚಾರದಲ್ಲಿ ನಾನು ಒಂದೆರಡು ಉದಾಹರಣೆಗಳನ್ನು ತಮ್ಮ ಮುಂದೆ ಇಡಲು ಇಚ್ಛಿಸುವೆ. ನಮ್ಮ ಮುಂಬೈ ಕರ್ನಾಟಕ ಏರಿಯಾದಲ್ಲಿ ಸಹಕಾರ ಸಂಘಗಳನ್ನು ಮಾಡಿ 15 ವರ್ಷಗಳು ಆಗುತ್ತಾ ಬಂದರೂ ಅದನ್ನು ನೆನಪಿಗೆ ತರದೆ ನಾಲ್ಕು ಮೈಲಿಗಳ ಏರಿಯಾದಲ್ಲಿ ಸಂಘ ರಿಜಿಸ್ಟರ್ ಮಾಡಕೂಡದೆಂದು ಸರ್ಕ್ಯುಲರ್ ಇದ್ದರೂ ನಮ್ಮ ಸರ್ಕಾರದವರು 2 ಮೈಲಿಗಳ ಏರಿಯಾದಲ್ಲಿ ಸೊಸೈಟಿಯನ್ನು ರಿಜಿಸ್ಟರ್ ಮಾಡಿದ್ದಾರೆ. ಅವರಿಗೆ ಭೂಮಿ ಇಲ್ಲದೇ ಆ ಸೊಸೈಟಿಯನ್ನು ರಿಜಿಸ್ಟರ್ ಮಾಡಿದ್ದು ನ್ಯಾಯವೇ? ಖೂನಿ ಮಾರಾಮಾರಿ ಆಗುವ ಸಂಭವವೂ ಇದೆ. ಈರೀತಿಯಾಗಿ ಸರ್ಕಾರ ಮಾಡಿದ್ದು ತಪ್ಪು. ಆದರೆ ಈಗ ಒಂದು ಊರಿನಲ್ಲಿ ಸೊಸೈಟಿ ಇದ್ದುದ್ದನ್ನು ನೋಡಿ ಅದಕ್ಕೆ ಭೂಮಿ ಕೊಡದೆ ಎರಡನೆಯ ಊರಿನ ಸೊಸೈಟಿಗೆ ಭೂಮಿ ಕೊಡುವುದು ನ್ಯಾಯವೇ? ಭೂಮಿ ಇಲ್ಲದ ಸೊಸೈಟಿಗೆ ರಿಜಿಸ್ಟರ್ ಮಾಡುವುದರ ಮೂಲಕ ಒಂದು ಲೈಸನ್ಸನ್ನು ಕೊಟ್ಟು ಅವರೊಳಗೆ ಮೆಂಬರನ್ನು ಮಾಡಿಕೊಂಡು ತಿನ್ನಲಿಕ್ಕೆ ಆಸ್ಪದ ಮಾಡಿಕೊಟ್ಟಿರುವರೆಂದು ನಾನು ಇಲ್ಲಿ

ಹೇಳಬೇಕಾಗಿದೆ. ಆದ್ದರಿಂದ ಸರ್ಕಾರದವರು ಇದನ್ನು ವಿಚಾರಣೆ ಮಾಡಿ ಇದರಲ್ಲಿರತಕ್ಕ ಲೋಪದೋಷಗಳನ್ನು ತಡೆಗಟ್ಟಿ ಸರಿಪಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಬೆಳಗಾವಿಯ ಜಿಲ್ಲೆಯ ಬಗ್ಗೆ ತಿಳಿಸಬೇಕೆಂದು ನಾನು ಹೇಳುತ್ತೇನೆ. ಪರಸ್ಪರ ಸಹಕಾರ ಸಂಘಗಳನ್ನು ಮಾಡಿ ಸುಮಾರು 15 ವರ್ಷಗಳಾದರೂ ನಮ್ಮ ಜನಗಳಿಗೆ ಬಾವಿಯಿಂದ ನೀರಾವರಿ ಸೌಕರ್ಯ ಸಿಗುವುದಿಲ್ಲ. ನೂರಕ್ಕೆ ನೂರು, ಇನ್ನೂರರಷ್ಟು ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಆದರೂ ಅವರಿಗೆ ಅಷ್ಟಾಗಿ ಪ್ರಯೋಜನವಿಲ್ಲ. ಅಂದಮೇಲೆ ಹೇಗೆ ಭೂಮಿ ಮುಂದು ಬರುತ್ತದೆ? ಅದನ್ನು ಸರ್ಕಾರದವರು ಯೋಚಿಸಬೇಕು. ಮುಂದೆ ಜನತೆಗೆ ಮಾರ್ಗದರ್ಶನವಾಗಿ ಮಾಡುವುದೇ ಸರ್ಕಾರದ ಕರ್ತವ್ಯ ಪರಸ್ಪರ ಸಹಕಾರ ಸಂಘಗಳ ರೈತರಿಗೆ ತಕಾವಿ ಸಾಲ ಸಿಗುವುದಿಲ್ಲ. ಅಂತಹ ಸಂಘಗಳು ಬೆಳಕಿಗೆ ಬರಬೇಕಾದರೆ ಅವರಿಗೆ ಈ ತಕಾವಿ ಸಾಲವನ್ನು ಕೊಟ್ಟು ಹೆಚ್ಚಿಗೆ ಆಹಾರಧಾನ್ಯಗಳನ್ನು ಬೆಳೆಸಲಿಕ್ಕೆ ತಕ್ಕ ಪ್ರೋತ್ಸಾಹ ಕೊಡಬೇಕೆಂದು ನಾನು ಹೇಳುತ್ತೇನೆ. ಅಲ್ಲದೆ ಈಗಿರತಕ್ಕ ಕಾನೂನುಗಳನ್ನು ಸರಿಪಡಿಸಿ ಎಲ್ಲ ತರಹ ಸೌಕರ್ಯಗಳನ್ನು ಅವರಿಗೆ ಒದಗಿಸಬೇಕೆಂದು ನಾನು ವಿನಂತಿ ಮಾಡುತ್ತೇನೆ. ಇಂತಹ ಸಂಘದ ವತಿಯಿಂದ ಎಷ್ಟೋ ಜನರು ತಕಾವಿ ಸಾಲದ ಸಲುವಾಗಿ ಅರ್ಜಿಗಳನ್ನು ಹಾಕಿಕೊಂಡರೂ ಜಿಲ್ಲಾ ಅಫೀಸರು ಅವರು ಯಾವ ಕಾನೂನನ್ನು ತೋರಿಸಿ ಕೊಡಲಿಕ್ಕೆ ಬರುವುದಿಲ್ಲವೆಂದು ಎಷ್ಟೋವೇಳೆ ಹೇಳಿಬಿಟ್ಟಿರುವರು. ಇದು ದೇವರ ದರ್ಶನ ಮೊದಲು ಆಗುವುದಿಲ್ಲ, ಪೂಜಾರಿ ದರ್ಶನ ಮೊದಲು ಆಗುತ್ತದೆಂದು ಹೇಳುವ ಹಾಗೆ ಇದೆ. ಪೂಜಾರಿಗಳು ಬೂದಿ ಕೊಟ್ಟ ನಂತರ ದೇವರದರ್ಶನ. ಹಾಗೆ ವರ್ಷಾನುಗಟ್ಟಲೆ ರೈತರ ದೃಷ್ಟಿ ಸಹಕಾರ ಸಂಘಗಳ ಮೇಲೆ ಇರುತ್ತದೆ. ಆದ್ದರಿಂದ ಸರ್ಕಾರದವರು ಈಗಿರತಕ್ಕ ಕಾನೂನುಗಳನ್ನು ಸರಿಪಡಿಸಿ ಸಹಕಾರ ಸಂಘಗಳಿಗೆ ಅನುಕೂಲಮಾಡಿಕೊಡಬೇಕೆಂದೂ ಮತ್ತು ರೈತರ ಏಳಿಗೆಗೆ ತಕ್ಕ ಪ್ರೋತ್ಸಾಹ ಕೊಡಬೇಕೆಂದೂ ನಾನು ವಿನಂತಿಸುತ್ತೇನೆ. ಅಲ್ಲದೆ ರೈತನಿಗೆ ವೇಳೆಗೆ ಸರಿಯಾಗಿ ಸಾಲ ಸಿಗುತ್ತಿಲ್ಲ. ಅದು ಅವನಿಗೆ ಮುಟ್ಟಿದೆಯೋ ಇಲ್ಲವೋ ಎಂಬುದನ್ನು ನೋಡಲು ತಕ್ಕ ವ್ಯವಸ್ಥೆ ಮಾಡಬೇಕು.

ಎರಡನೆಯದಾಗಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಆದಿಮ ಜಾತಿಗಳವರ ಅಭಿವೃದ್ಧಿಗಾಗಿ ಹೋದಸಾರಿ ಬಡ್ಜೆಟ್ಟಿನಲ್ಲಿ 20 ಲಕ್ಷ ರೂಪಾಯಿಗಳನ್ನೂ ಸಹ ಕೊಟ್ಟಿಲ್ಲ. ಬಹಳ ಕಡಿಮೆ ಮಾಡಿದ್ದೀರಿ. ಈ ವರ್ಷ ಸಂದಿಗ್ಧ ಪರಿಸ್ಥಿತಿ ಇದೆಯೆಂದು ಬೇರೆ ಹೇಳುತ್ತಾರೆ. ನಮ್ಮ ಸಮಾಜದ ಮೇಲ್ಮೆಗೆ ಒದಗಿಸಿರುವ ಹಣ ಬಹಳ ಅತ್ಯಲ್ಪವೆಂದು ನಮ್ಮ ಸಮಾಜ ಬಹಳ ಅತೃಪ್ತಿಯಾಗಿದೆ. ಆದ್ದರಿಂದ ನಮ್ಮ ವರ್ಗದವರಿಗೆ ಎಲ್ಲ ಅನುಕೂಲತೆಗಳನ್ನು ಮಾಡಿಕೊಡುವುದಕ್ಕೆ ಈ ವರ್ಷದ ಬಡ್ಜೆಟ್ಟಿನಲ್ಲಿ 20 ಲಕ್ಷ ರೂಪಾಯಿಗಳನ್ನು ಸೇರಿಸಿದರೆ ನಮ್ಮ ಸಮಾಜ ಕಲ್ಯಾಣವಾಗುವುದಕ್ಕೆ ಅನುಕೂಲವಾಗುತ್ತದೆ. ಆದರೆ ಈ ವಿಚಾರವನ್ನು ಒಳಗೊಳಗೆ ಕೇಳಿ ಮಾಡಬಾರದೆಂದು ಹೇಳುತ್ತೇನೆ.

ಕೊನೆಯದಾಗಿ, ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಈ ವರ್ಷದಲ್ಲಿ ಆ ವರ್ಗದವರ ಅಭಿವೃದ್ಧಿಗಾಗಿ 99 ಲಕ್ಷ ರೂಪಾಯಿಗಳನ್ನು ಕೊಟ್ಟಿದೆ.

ಶ್ರೀಮತಿ ಅನ್ನಪೂರ್ಣ ಬಾಯಿ ರಾಗಟೆ (ಕಲ್ಯಾಣಿ).—ಮಾನ್ಯ ಅಧ್ಯಕ್ಷರೇ, 1965-66 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಗಳನ್ನು ಮಂಡಿಸಿರತಕ್ಕ ಶಿವಪ್ಪನವರು ಅಂದರೆ ಪರಮೇಶ್ವರನ ಶಿಷ್ಯರಾದ ಹಾಗೂ ಬಸವಣ್ಣನವರ ಭಕ್ತರಾದ ಶ್ರೀ ಬಸಪ್ಪ ದಾನಪ್ಪ ಜತ್ತಿಯವರನ್ನು ಮೊದಲು ವಂದಿಸಿ ನಾನು ತಮ್ಮ ಮುಂದೆ ಒಂದೆರಡು ಸಲಹೆಗಳನ್ನು ಕೊಡಬೇಕೆಂದು ನಿಂತಿದ್ದೇನೆ.

ಮೊದಲನೆಯದಾಗಿ ಆಹಾರ ಪರಿಸ್ಥಿತಿ ಬಗ್ಗೆ ನಾನು ಹೇಳಬೇಕಾದರೆ ನಮ್ಮಲ್ಲಿ ಆಹಾರ ಪರಿಸ್ಥಿತಿ ಜನತೆಯ ಮನಸ್ಸಿನ ಮೇಲೆ ಮಾಡಿರುವ ಪರಿಣಾಮ ಮತ್ತು ಜನತೆಯ ಕಷ್ಟವನ್ನು ನಾನು ಇಲ್ಲಿ ಹೇಳುವುದಕ್ಕೆ ಸಾಧ್ಯವೇ ಅಥವಾ ಇಲ್ಲವೇ ಎಂದು ನನಗೆ ನಿಜವಾಗಿ ಅನುಮಾನವಾಗುತ್ತದೆ. ಆದರೂ ಕೂಡ ನಾನು ನಮ್ಮ ಜನತೆಯ ಪ್ರತಿನಿಧಿಯಾಗಿರುವುದಕ್ಕಾಗಿ ಇಲ್ಲಿ ಆ ವಿಚಾರಗಳನ್ನು ನಾನು ಹೇಳದೇ ಇದ್ದರೆ ನನ್ನದು ಬಹಳ ತಪ್ಪಾಗುತ್ತದೆ. ಆದ್ದರಿಂದ ನಾನು ಈ ವಿಚಾರದಲ್ಲಿ ಕೆಲವು ಸೂಕ್ಷ್ಮವಾದ ಎರಡು ಸಲಹೆಗಳನ್ನು ಮಾತ್ರ ತಿಳಿಸಬೇಕೆಂದು ಇಚ್ಛಿಸುತ್ತೇನೆ. ನಿಜವಾಗಿ ನಮ್ಮಲ್ಲಿ ಕೆಲವರು ತಿಂಗಳಾನುಗಟ್ಟಲೆ ಕೈಯಲ್ಲಿ ಚೀಲ ಹಿಡಿದುಕೊಂಡು ಧಾನ್ಯವನ್ನು ತೆಗೆದು ಕೊಂಡು ನಮ್ಮಂತಹವರ ಮನೆಯ ಮುಂದೆ ತೋರಿಸುತ್ತಾ ಹೋಗುತ್ತಿದ್ದರು. ಅಂತಹ ಪರಿಸ್ಥಿತಿಯಲ್ಲಿ ಅಲ್ಲಿನ ಜನತೆಗೆ ಆಹಾರವನ್ನು ಕೊಡುವುದು ಯಾವರೀತಿ ಸುಧಾರಿಸಬೇಕೆಂಬುದನ್ನು ಬಹಳ ಚಿಂತಾಜನಕವಾಗಿದೆ. ಒಂದು ತಿಂಗಳಿಗೆ ಒಬ್ಬ ಮನುಷ್ಯನಿಗೆ ಒಂದು ಕಿಲೋಯಂತೆ ಧಾನ್ಯವನ್ನು ತೆಗೆದುಕೊಂಡು ಹೋಗಿ ಅವರು ಯಾವರೀತಿ ತಿನ್ನಬೇಕು? ನಮ್ಮಲ್ಲಿ ಎಷ್ಟೋ ಜನರು

(ಶ್ರೀಮತಿ ಅನ್ನಪೂರ್ಣಾ ಬಾಯಿ ರಾಗಟೆ)

ಆಹಾರ ಸಾಲದೆ ತಾನು ತಂದ ಧಾನ್ಯವನ್ನು ಕೊಳ್ಳದೆ ನೀರನ್ನು ಕುಡಿದು ಜೀವನ ಮಾಡುತ್ತಿದ್ದಾರೆ. ಈ ರೀತಿಯಾದರೆ ನಮ್ಮಲ್ಲಿರತಕ್ಕ ಜನರ ಜೀವನದಲ್ಲಿರತಕ್ಕ ತೊಂದರೆ ಖಂಡಿತವಾಗಿ ಹೋಗುವುದಿಲ್ಲ. ರೆವಿನ್ಯೂ ಸಚಿವರಾದ ಶ್ರೀಮಾನ್ ಕೃಷ್ಣಪ್ಪನವರಿಗೂ ನಮ್ಮ ಕ್ಷೇತ್ರದ ಪರಿಸ್ಥಿತಿ ಈ ರೀತಿ ಇದೆ, ಅಲ್ಲಿನ ಜನರ ಕಷ್ಟಗಳನ್ನು ದೂರಮಾಡಬೇಕು ಎಂಬುದಾಗಿ ನಾನು ತಿಳಿಸಿದೆ. ಮಾನ್ಯ ಸಚಿವರಿಂದ ಬರತಕ್ಕಂಥ ಉತ್ತರವನ್ನು ಜನತೆಯಮುಂದೆ ಇಡೋಣವೆಂತಲೂ ಇದ್ದೆ. ನಾನು ಈ ವಿಚಾರವನ್ನು ಅವರಿಗೆ ತಿಳಿಸಿ ಎರಡು ತಿಂಗಳುಗಳಾದರೂ ಕೂಡ ನನಗಿನ್ನೂ ಉತ್ತರ ಸಿಗಲಿಲ್ಲ. ನಿಜವಾಗಿ ಹೀಗೆ ಆಗಬಾರದು. ಏಕೆಂದರೆ ನಮ್ಮ ಕ್ಷೇತ್ರದಲ್ಲಿ ನೂರಾರು ಜನ ಬಂದು ಈ ವಿಚಾರದ ಬಗ್ಗೆ ನಮ್ಮನ್ನು ಕೇಳುತ್ತಿರುತ್ತಾರೆ. ಯಾರೋ ಒಬ್ಬರು ಇಷ್ಟು ಕೊಂಚ ಅಕ್ಕಿಯಿಂದ ಒಲೆಯಲ್ಲಿ ಬೆಂಕಿಹಾಕಿ ಅನ್ನವನ್ನು ಹೇಗೆ ಮಾಡಲಿ ಯಾರಿಗೆ ಇಡಲಿ, ಇದು ಏನುಸಾಲುತ್ತದೆಂದು ಹೇಳುತ್ತಿದ್ದರು. ಹೀಗೆ ಜನರು ಅನೇಕ ರೀತಿಯಲ್ಲಿ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಒಂದು ಸಾರಿ ಐದಾರುಮಕ್ಕಳನ್ನು ಪಡೆದಿದ್ದಂಥ ತಾಯಿ ತಂದೆಗಳು ಒಂದು ದಿವಸ ಒಂದು ಕಿಲೋ ಅಕ್ಕಿಯನ್ನು ತಂದು ತನ್ನಮನೆಯವರೆಲ್ಲರಿಗೂ ಅನ್ನಮಾಡಿ ಅದನ್ನು ಯಾವರೀತಿ ನೀಡಬೇಕೋ ಎಂದು ಮನಸ್ಸಿಗೆ ಬಹಳ ವ್ಯಥೆಮಾಡಿಕೊಂಡು ಅದರಲ್ಲಿ ವಿಷವನ್ನು ಬೆರೆಸಿ ತಾಯಿ ತಂದೆ ಮಕ್ಕಳೆಲ್ಲ ಆ ಅನ್ನವನ್ನು ಸೇವನೆ ಮಾಡಿದರು. ಅವರ ಪರಿಸ್ಥಿತಿ ಚಿಂತಾಜನಕವಾಗಿತ್ತು. ಈ ವಿಷಯ ಇಲ್ಲಿ ಹೇಳಿದರೆ ತಪ್ಪಾಗಲಾರದು ಎಂದು ಹೇಳುತ್ತಿದ್ದೇನೆ. ಆ ಸಮಯದಲ್ಲಿ ಅವರ ಪರಿಸ್ಥಿತಿ ಯಾವರೀತಿ ಇತ್ತೆಂದು ಹೇಳಬೇಕೋ ಅದನ್ನು ಸರಕಾರದವರು ಅರ್ಥಮಾಡಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ಕೂಲಿಮಾಡಿ ತಿನ್ನುವುದಕ್ಕೆ ನಮ್ಮಲ್ಲಿ ಕಾರ್ಮಿಕ ವರ್ಗದವರಿಗೆ ಯಾವ ಕೈಗಾರಿಕೆಯೂ ಇಲ್ಲ. ಆದ್ದರಿಂದ ಸರ್ಕಾರದವರು ಈ ಕಡೆ ಹೆಚ್ಚು ಗಮನವನ್ನು ಕೊಡಬೇಕು. ಆದರೆ ಈ ಆಹಾರ ಪರಿಸ್ಥಿತಿಯ ವಿಚಾರವನ್ನು ಎಷ್ಟು ಹೇಳಿದರೂ ಕಡಿಮೆಯೇ ಎಂದು ಹೇಳುತ್ತೇನೆ. ಆಹಾರೋತ್ಪತ್ತಿಯನ್ನು ಜಾಸ್ತಿ ಮಾಡಬೇಕಾದರೆ ಸಣ್ಣಸಣ್ಣ ನೀರಾವರಿ ಯೋಜನೆಗಳ ಬಗ್ಗೆ ಸರ್ಕಾರದವರು ತೀವ್ರಾಸಕ್ತಿಯನ್ನು ವಹಿಸಬೇಕು ಮಾನ್ಯ ಶ್ರೀ ಜತ್ತಿಯವರು ತಮ್ಮ ಭಾಷಣದಲ್ಲಿ ಅಲ್ಪ ಪ್ರಮಾಣದ ನೀರಾವರಿ ಯೋಜನೆಗಾಗಿ ಈಗಾಗಲೇ 20 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಹೇಳಿದ್ದಾರೆ. ಅದನ್ನು ಕೇಳಿ ನನಗೆ ಬಹಳ ಶೋಚನೀಯವಾಯಿತು. ಈ ವಿಷಯವನ್ನು 1952 ರಿಂದಲೂ ಹೇಳುತ್ತಾ ಬಂದಿದ್ದೇವೆ. ನನ್ನ ತಾಲ್ಲೂಕಿನಲ್ಲಿ ಇನ್ನು ಸರ್ವೆ ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಈ ಕಾರ್ಯಕ್ರಮವನ್ನು ಯಾರು ಮುಂದೆ ಮಾಡಬೇಕು ಎಂಬುದಾಗಿ ಇವರನ್ನು ನಾನು ಪ್ರಶ್ನೆ ಮಾಡುತ್ತೇನೆ. ನಾನು ಎಷ್ಟೋಸಲ ನಮ್ಮ ತಾಲ್ಲೂಕಿನಲ್ಲಿ ಆಗಬೇಕಾದ ಕೆರೆಗಳ ಅಭಿವೃದ್ಧಿಯ ಬಗ್ಗೆ ಒಂದು ಪಟ್ಟಿಯನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ನೂರಾರು ಸಲ ಸರ್ವೆ ಮಾಡಿಕೊಂಡು ಹೋಗಿದ್ದಾರೆ. ಆದರೆ ಒಂದೂ ಕೂಡ ಕಾರ್ಯಸಾಧನೆಯಾಗಿಲ್ಲ. ಜನಗಳ ಕಷ್ಟ ದೂರವಾಗಬೇಕಾದರೆ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೈಗಾರಿಕೆ ಅಭಿವೃದ್ಧಿ ಕಡೆ ಹೆಚ್ಚಿನ ಗಮನ ಕೊಡಬೇಕು. ನಮ್ಮಲ್ಲಿ ಸಾಧಾರಣವಾಗಿ ಬಡಜನರಿಗಾಗಿ ಒಂದು ಕೈಗಾರಿಕೆಯೂ ಇಲ್ಲ. ಸುಮಾರು 7 ವರ್ಷಗಳ ಹಿಂದೆ ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಬಸವ ಕಲ್ಯಾಣಕ್ಕೆ ಮಂಜೂರಾಗಿದೆ ಎಂದು ಕೇಳಿದ್ದೇನೆ. ಆದರ ವಿಷಯ ಏನಾಗಿದೆ ಎಂಬುದೇ ಗೊತ್ತಿಲ್ಲ.

ಮತ್ತೊಂದು ವಿಷಯ. ಈಗ ದೇಶದಲ್ಲಿ 8 ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತಿವೆ. 9ನೇ ಕಾರ್ಖಾನೆ ಬೇರೆ ಈಗ ಸಿದ್ಧವಾಗುತ್ತಿದೆ, ಅದೂ ಅಲ್ಲದೆ ಮೂರು ಹೊಸ ಸಕ್ಕರೆ ಕಾರ್ಖಾನೆಗಳು–ಅಂದರೆ ಬಿದರೆಯಲ್ಲಿ ಒಂದು ಮುಗುಟ್‌ಖಾನ್-ಹುಬ್ಬಳ್ಳಿಯಲ್ಲಿ ಒಂದು, ಹಿರಿಯೂರ್‌ನಲ್ಲಿ ಒಂದು—ಹೀಗೆ ಸ್ಥಾಪಿತವಾಗುವ ನಿರೀಕ್ಷೆ ಇದೆಯೆಂದು ಶ್ರೀಮಾನ್ ಜತ್ತಿಯವರು ತಮ್ಮ ಭಾಷಣದಲ್ಲಿಯೇ ಹೇಳಿದ್ದಾರೆ. ನಾನು ಬಹಳ ಶೋಚನೀಯವಾಗಿ ಒಂದು ಮಾತನ್ನು ಕೇಳುತ್ತೇನೆ. ಈಗಾಗಲೇ ಷೇರು ಮೊಬಲಗನ್ನು 8 ಲಕ್ಷ ಮಾಡಿದ್ದಾರೆ. ಅದಕ್ಕೆ ಹಣ ಯಾರು ಕೊಡುವವರು ? ಈ ವಿಚಾರದಲ್ಲಿ ಸರ್ಕಾರದವರು ಜಾಗ್ರತೆಯಾಗಿ ಲಕ್ಷ್ಯ ಕೊಡಬೇಕು. ಈ ಹೊಸ ಸಕ್ಕರೆ ಕಾರ್ಖಾನೆಗಳನ್ನು ಸ್ಥಾಪಿಸಲು ಆದಷ್ಟು ತೀವ್ರವಾಗಿ ಕ್ರಮ ಕೈಗೊಳ್ಳಲು ಪ್ರಯತ್ನ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಶಿಕ್ಷಣದ ವಿಚಾರವಾಗಿ ಹೇಳುವುದಾದರೆ, ನಮ್ಮ ಕಡೆ ಬೇಕಾದಷ್ಟು ಅನುಕೂಲವಾಗಿದೆ. ಆದರೆ ನಾವು ಸಾಧಾರಣವಾಗಿ ನಮ್ಮ ಕಡೆ ಹೆಣ್ಣು ಮಕ್ಕಳ ಹೈಸ್ಕೂಲುಗಳು ಹೆಚ್ಚಿನ ಸಂಖ್ಯೆಯಲ್ಲಿಲ್ಲ. ಏಕೆಂದರೆ ನಮ್ಮಲ್ಲಿ ಹೆಣ್ಣು ಮಕ್ಕಳು ಕೇವಲ 7ನೇ ಕ್ಲಾಸಿನವರೆಗೆ ಮಾತ್ರ ಪಾಠಶಾಲೆಗಳಿಗೆ ಬರುತ್ತಾರೆ. ಇನ್ನು ಅಷ್ಟು ಜನ ಮುಂದೆ ಬಂದಿಲ್ಲ. ಅವರು ಸಹಶಿಕ್ಷಣ ಹೈಸ್ಕೂಲುಗಳಿಗೆ

ಬರಲಿಕ್ಕೆ ತಯಾರೂ ಇಲ್ಲ. ಆದರೂ ಹೆಣ್ಣು ಮಕ್ಕಳ ಹೈಸ್ಕೂಲನ್ನು ಕನಿಷ್ಠಪಕ್ಷ ತಾಲ್ಲೂಕ್ ಲೆವೆಲ್‌ನಲ್ಲಿ ಕೊಡಬೇಕೆಂದು ನಾನು ಬಹಳ ವಿನಯದಿಂದ ಕೇಳುತ್ತೇನೆ. ಹೈಸ್ಕೂಲುಗಳನ್ನು ದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾಡುವುದಾಗಿ ಶ್ರೀಮಾನ್ ಜತ್ತಿಯವರೇ ಹೇಳಿದ್ದಾರೆ. ನಾನು ಕೇಳಿಕೊಳ್ಳುವುದು ಏನೆಂದರೆ ಹೆಣ್ಣು ಮಕ್ಕಳ ಹೈಸ್ಕೂಲುಗಳ ಸಂಖ್ಯೆಯನ್ನು ಈ ದೇಶದಲ್ಲಿ ಸರ್ಕಾರದವರು ಜಾಸ್ತಿ ಮಾಡಬೇಕೆಂದು ಮತ್ತೊಂದುಸಾರಿ ವಿನಯದಿಂದ ಹೇಳಬೇಕಾಗಿದೆ.

ಇನ್ನು ಪಿ. ಡಬ್ಲ್ಯು. ಡಿ. ವಿಷಯ. ಈ ವಿಚಾರದಲ್ಲಿ ಕೆಲವು ಹಳೆ ಮೈಸೂರಿನ ಸದಸ್ಯರು ಹೈದರಾಬಾದ್ ಏರಿಯಾಕ್ಕೆ ಬಹಳ ರಸ್ತೆಗಳಾಗಿವೆ ಎಂದು ಹೇಳಿದರು. ನಿಜವಾಗಿ ನಮ್ಮ ಕ್ಷೇತ್ರದ ಸ್ಥಿತಿಯನ್ನು ತಿಳಿಸಿದ್ದೇ ಆದರೆ ನಮ್ಮಲ್ಲಿ ಒಂದು ರಸ್ತೆಯನ್ನೂ ಸಹ ಮುಗಿಸುವುದಕ್ಕೆ ಸಾಧ್ಯವಾಗಿಲ್ಲ. ದೊಡ್ಡ ದೊಡ್ಡ ಪ್ರಾಜೆಕ್ಟುಗಳಂತೂ ಇಲ್ಲವೇ ಇಲ್ಲ. ಈ ವರ್ಷ ಹೊಸದಾಗಿ ರಸ್ತೆಯ ಕೆಲಸಗಳನ್ನು ಹೆಚ್ಚಿಗೆ ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗಿಯೇ ಇಲ್ಲ ಆದ್ದರಿಂದ ಈಗಿರತಕ್ಕ ರಸ್ತೆಗಳನ್ನೇ ಮುಂದೆ ಸರಿಯಾದ ರೀತಿಯಲ್ಲಿ ಮೈಂಟೇನ್ ಮಾಡಬೇಕೆಂದು ಕೇಳಿಕೊಂಡು ಹಿಂದೆ ಕೆಲವು ರಸ್ತೆಗಳ ಹೆಸರನ್ನು ಹೇಳಿದ್ದೇವೆ. ಅವೆಲ್ಲವೂ ಈ ಸಾರಿಯ ಬಜೆಟ್ಟಿನಲ್ಲಿ ಬಂದಿಲ್ಲ. ಅವನ್ನೂ ಕೂಡ ಜಾಗ್ರತೆ ಯಾಗಿ ತೆಗೆದುಕೊಳ್ಳಬೇಕೆಂದು ನಾನು ಸರ್ಕಾರದವರನ್ನು ಕೇಳುತ್ತಿದ್ದೇನೆ.

ಇನ್ನು ಶ್ರೀ ರುದ್ರಪ್ಪನವರು ಗುಲ್ಬರ್ಗ ವಿಷಯದಲ್ಲಿ ಹೇಳಿದ್ದಾರೆ. ಅಲ್ಲಿ ಕೆಲವು ಜನರಿಗೆ ಮೆಟೀರಿಯಲ್ ಅಂದರೆ ಕಾಪರ್ ಸಿಗುವುದು ಬಹಳ ಕಷ್ಟವಾಗುತ್ತಿದೆ. ಅಲ್ಲಿಂದ ಮುಗುಟ್ ಖಾನ್ ಹುಬ್ಬಳ್ಳಿಗೆ ಹೋಗಿ ತರುವುದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ನಾನು ಹೇಳುವುದಿಷ್ಟೇ. ಗುಲ್ಬರ್ಗಾದಲ್ಲಿ ಒಂದು ಡಿಪೋ ಕೂಡಲೆ ತೆರೆಯಬೇಕೆಂದು ನಾನು ಸರ್ಕಾರದವರನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ, ಈಗ ನಮ್ಮ ದೇಶದಲ್ಲಿ ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಮತ್ತು ಡಿವಿಜನಲ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಎಂದು ಏನಿವೆಯೋ ಅವುಗಳನ್ನು ಅಬಾಲಿಷ್ ಮಾಡಿದರೆ ಒಳ್ಳೆಯದು ಎಂದು ನನಗನ್ನಿಸುತ್ತದೆ. ಏತಕ್ಕೆಂದರೆ ಮೊದಲು ಪಬ್ಲಿಕ್ ಸರ್ವಿಸ್ ಕಮಿಷನ್‌ನಲ್ಲಿ 3 ಜನ ಸದಸ್ಯರುಗಳಿದ್ದರು. ಈಗ 5 ಜನಗಳನ್ನು ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಅವರಿಗೆ ಪೂರ್ತಿ ಕೆಲಸ ಇರಲಿಕ್ಕಿಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಮತ್ತು ಡಿವಿಜನಲ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಇವೆರಡನ್ನೂ ಅಬಾಲಿಷ್ ಮಾಡಿ ಅವುಗಳ ಕಾರ್ಯವನ್ನು ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ವಹಿಸ ಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಕೆಲವು ವಿಷಯಗಳನ್ನು ಹೇಳಬೇಕಾಗಿದ್ದರೆ, ಹೈದರಾಬಾದ್ ಏರಿಯಾದಲ್ಲಿ ಮೊದಲ ನಿಂದಲೂ ನಾವು ಹೇಳುತ್ತಾ ಬಂದ ಕೆಲಸಗಳು ಅಲ್ಲಿಯೇ ನಿಂತಿವೆ. ಒಂದು ಕೆಲಸವೂ ಪೂರ್ತಿ ಯಾಗಿ ಮುಗಿದಿಲ್ಲ. ಆ ಪ್ರದೇಶದಲ್ಲಿ ಜನಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಓಡಾಡುವುದಕ್ಕೆ ರಸ್ತೆಗಳಿಲ್ಲ. ಕೆಲವು ಹಳ್ಳಿಗಳಲ್ಲಿ ಸುಮಾರು 70-80 ಅಡಿ ಆಳದವರೆಗೆ ಬಾವಿಯನ್ನು ತೋಡಿದರೂ ಅವುಗಳಲ್ಲಿ ನೀರು ಬರುವುದಿಲ್ಲ. ಲಾಡವಾತಿ ಪಟ್ಟಿಯಲ್ಲಿ 26 ಹಳ್ಳಿಗಳಿವೆ. ಈ ಊರುಗಳಲ್ಲಿ ಬಾವಿಗಳನ್ನು ತೆಗೆಸಿ ಕೊಡಬೇಕೆಂದು ಸರ್ಕಾರದವರನ್ನು ಅನೇಕ ಸಾರಿ ಕೇಳಿ ಕೊಂಡರೂ ಕೂಡ ಅದನ್ನು ಮಾಡಿಕೊಟ್ಟಿಲ್ಲ. ಒಂದು ಕುಡಿಯುವ ನೀರಿನ ಬಾವಿಗೋಸ್ಕರ 10 ಸಾವಿರ ರೂಪಾಯಿ ಗಳನ್ನು ಖರ್ಚು ಮಾಡಿರತಕ್ಕ ಹಳ್ಳಿಗಳು ನಮ್ಮಲ್ಲಿವೆ. ಜನಗಳಿಗೆ ಯಾವುದನ್ನು ಕೊಡದಿದ್ದರೂ ಕುಡಿ ಯುವ ನೀರನ್ನಾದರೂ ಕೊಡದಿದ್ದರೆ ಹೇಗೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ. ಆದ್ದ ರಿಂದ ಸರ್ಕಾರದವರು ಕುಡಿಯುವ ನೀರಿನ ಸೌಕರ್ಯವನ್ನು ಜನಗಳಿಗೆ ಒದಗಿಸಲು ಸಹಾಯ ಮಾಡಬೇಕೆಂದು ಹೇಳಿ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕೆ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಅಧ್ಯಕ್ಷರೆ, ಕಡೆಯ ಕಾಲದಲ್ಲಿ ನನಗೆ ಮಾತನಾಡು ವುದಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಈಗ ಈ ಸಭೆಯ ಮುಂದಿರುವ ಆಯವ್ಯಯ ಅಂದಾಜು ಪಟ್ಟಿಯ ಮೇಲೆ ಕೆಲವು ವಿಷಯಗಳನ್ನು ನಾನು ಹೇಳ ಬಯಸುತ್ತೇನೆ.

ಮೊದಲನೆಯದಾಗಿ, ಆಹಾರದ ವಿಷಯವನ್ನು ಹೇಳುವುದಾದರೆ ಈ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಸವಿಸ್ತಾರವಾಗಿ ಹೇಳಿದ್ದಾರೆ. ಈ ಬಜೆಟ್ ಹೇಗಿದೆ ಎಂದರೆ, ಯಾರಾದರೂ ಒಬ್ಬ ಗುಮಾಸ್ತರನ್ನು ನಮ್ಮಲ್ಲಿರತಕ್ಕ ಕೆಲವು ಅಂಕಿ ಅಂಶಗಳನ್ನು ತೆಗೆದುಕೊಂಡು ಒಂದು ಲೆಕ್ಕ ವನ್ನ ತಯಾರು ಮಾಡಿ ಎಂದರೆ ಅವರು ಯಾವುದೋ ಒಂದು ಲೆಕ್ಕವನ್ನು ತೆಗೆದುಕೊಂಡು ನಮಗೆ ಆದಾಯ ಬಂದದ್ದು 6 ಕೋಟಿ ರೂಪಾಯಿಗಳು ಇಲ್ಲಿ ಖರ್ಚಾದದ್ದು 3½ ಕೋಟಿ ರೂಪಾಯಿಗಳು. ಇನ್ನು ಉಳಿದಿದ್ದು 2½ ಕೋಟಿ ರೂಪಾಯಿಗಳು ಎಂದು ಹೇಳಿ ಒಂದು ಲೆಕ್ಕವನ್ನು ತಯಾರು ಮಾಡು ತ್ತಾರೆ; ಹಾಗೆ ಈ ಬಜೆಟ್ಟನ್ನು ತಯಾರು ಮಾಡಿದ್ದಾರೆ. ಇದು ಯಾವುದೋ ಒಂದು ಬಂಧನಕೆ

(ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ)

ಮಾಡಿರತಕ್ಕ ಬಡ್ಜೆಟ್ಟು ಎಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಸಂದರ್ಭದಲ್ಲಿ ನನಗೆ ಒಂದು ಕತೆ ಜ್ಞಾಪಕಕ್ಕೆ ಬರುತ್ತದೆ. ಅದು ಏನೆಂದರೆ ಯಾರೋ ಒಬ್ಬರು ರಾತ್ರಿ ಮಲಗಿದ್ದಾಗ ನಾನು ಎಮ್ಮೆ ತಂದರೆ, ಅದು ಹಾಲು ಕೊಟ್ಟರೆ, ನನಗೆ ತುಪ್ಪ ಹಾಕಬೇಕು ಎಂದು ತನ್ನ ಪಕ್ಕದಲ್ಲಿದ್ದವರಿಗೆ ಹೇಳಿದರಂತೆ. ಹಾಗೆ ಕೇಂದ್ರ ಸರ್ಕಾರದವರು ನಿಮಗೆ ಹಣವನ್ನು ಕೊಟ್ಟರೆ ನೀವು ಆಯ್ಯವ್ಯಯ ಪಟ್ಟಿಯನ್ನ ತಯಾರು ಮಾಡುವುದಕ್ಕೆ ನಿಮಗೆ ಶಕ್ತಿ ಬರುತ್ತದೆ. ಈಗ ಬಜೆಟ್ಟನ್ನು ತಯಾರು ಮಾಡಿ ಈ ಸಭೆಯ ಮುಂಂಟ್ಟಿದ್ದಾರೆ. ನಾವೆಲ್ಲರೂ ಅದರ ಮೇಲೆ ಭಾಷಣ ಮಾಡುತ್ತಿದ್ದೇವೆ. ಆದರೆ ಇದರಿಂದ ಜನಗಳಿಗೆ ಏನು ಅನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ನಾವು ಇಲ್ಲಿ ಏನೇ ಹೇಳಿದರೂ ಕೂಡ ಸರ್ಕಾರದವರು ರೈತರಿಗೆ ಕೊಡಬೇಕಾದಂತಹ ಸೌಲಭ್ಯ ಸರಿಯಾಗಿ ಒದಗಿಸಿಕೊಡುತ್ತಿಲ್ಲ. ಈಗ ಮಂತ್ರಿಗಳು ತಾಲ್ಲೂಕು ಹೆಡ್‌ಕ್ವಾರ್ಟರುಗಳಿಗೆ ಟೂರು ಬರುತ್ತಾರೆ. ಅವರು ಟೂರು ಬಂದಂಥ ಸಂದರ್ಭದಲ್ಲಿ ಅಲ್ಲಿ ಏನು ಕೆಲಸ ಮಾಡುತ್ತಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ಈಗ್ಗೆ ತಿಂಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ತಿಪಟೂರಿಗೆ ಪ್ರವಾಸ ಬಂದಿದ್ದರು. ಈಗ ಅಲ್ಲಿ ಆಹಾರದ ಬಗ್ಗೆ ಅಭಾವ ಪರಿಸ್ಥಿತಿ ಇತ್ತು. ಆ ಸಂಧರ್ಭದಲ್ಲಿ ಅಲ್ಲಿಗೆ ಬಂದಿದ್ದ ಮುಖ್ಯ ಮಂತ್ರಿಗಳು ಏನು ಮಾಡಿದರು ಎಂದರೆ ಅಲ್ಲಿರತಕ್ಕ ಕೆಲವು ಕಾಂಗ್ರೆಸ್ ವರ್ಕರುಗಳನ್ನು ಭೇಟಿ ಮಾಡಿ ಅವರ ಜೊತೆಯಲ್ಲಿ ಕೆಲವು ವಿಷಯಗಳನ್ನು ಚರ್ಚೆ ಮಾಡಿದರು. ಈಗ ನಾವೂ ಸಹ ಮುಖ್ಯ ಮಂತ್ರಿಗಳನ್ನು ಕಂಡು ಈ ರೀತಿ ಆಹಾರದ ಅಭಾವ ಉಂಟಾಗಿರವುದಕ್ಕೆ ಕಾರಣ ರೈತರಿಗೆ ಸಾಕಷ್ಟು ನೀರಾವರಿ ಸೌಲಭ್ಯ ಇಲ್ಲದೆ ಇರುವುದು, ರೈತರಿಗೆ ಬೇಕಾದ ವ್ಯವಸಾಯ ಸಾಮಗ್ರಿಗಳನ್ನ ಒದಗಿಸದೆ ಇರುವುದು ಮುಖ್ಯ ಕಾರಣವಾಗಿದೆ ಎಂದು ಅವರಿಗೆ ಹೇಳಿದೆವು. ಮತ್ತು ಆ ಸಂದರ್ಭದಲ್ಲಿ ಏರ್ಪಡಿಸಿದ್ದ ಒಂದು ಸಮಾರಂಭಕ್ಕೆ ನಾವು ಹೋಗಿ ನಮ್ಮ ತಾಲ್ಲೂಕಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವ ವಿಷಯದಲ್ಲಿ ಮತ್ತು ರೈತರಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿದೆವು. ಅನಂತರ ಮುಖ್ಯ ಮಂತ್ರಿಗಳು ನಮ್ಮನ್ನು ನಿಮ್ಮ ತಾಲ್ಲೂಕಿನಲ್ಲಿ ಕೆರೆಗಳು ಎಷ್ಟಾಗಬೇಕೆಂದು ಕೇಳಿದರು. ನಾವು 50 ಕೆರೆಗಳು ಆಗಬೇಕು ಎಂದು ಹೇಳಿದೆವು. ಅದರಲ್ಲಿ 30 ಕೆರೆಗಳನ್ನು ಮಾಡಿಸೋಣ ಎಂದು ಹೇಳಿದರು. ಇದು ಸತ್ಯವಾದ ಮಾತು ಅದರ ಬಗ್ಗೆ ಹಾಕಿದಂತಹ ಒಂದು ನೋಟ್ ಕೂಡ ಈಗ ಆಫೀಸಿನಲ್ಲಿದೆ. ಆ ಮೇಲೆ ಬಾವಿಗಳು ಎಷ್ಟಾಗಬೇಕು ಎಂದು ಕೇಳಿದರು, 50 ಮಾಡಿಸೋಣ ಎಂದರು. ಈ ಎರಡು ವಿಷಯಗಳನ್ನು ನೋಟ್ ಮಾಡಿಕೊಂಡರು. ಆ ಮೇಲೆ ಕೊನೆಗೆ ಅದರ ಪರಿಣಾಮ ಏನಾಯಿತು ಎಂದರೆ ಡಿವಿಜನಲ್ ಕಮೀಷನರ ಆಫೀಸಿನಿಂದ ಆ ನೋಟನ್ನು ವಾಪಸ್ಸು ಕಳುಹಿಸಿ ಎಂದು ವಾಪಸ್ಸು ತರಿಸಿಕೊಂಡರು. ಈ ರೀತಿ ಮಾಡಿದರೆ ದೇಶದಲ್ಲಿ ಜನಗಳ ಗತಿ ಏನು? ಆ ಮೇಲೆ ನಮ್ಮ ಸಣ್ಣ ನೀರಾವರಿ ಶಾಖೆಯ ಉಪ-ಮಂತ್ರಿಗಳಾದ ಶ್ರೀ ಅಲೂರು ಹನುಮಂತಪ್ಪನವರು ಪ್ರವಾಸ ಬಂದಿದ್ದರು ಅವರು ಏನು ಹೇಳಿದರು ಅಂದರೆ ಕೇಂದ್ರ ಸರ್ಕಾರದಿಂದ ನಮಗೆ 140 ಕೋಟಿ ರೂಪಾಯಿಗಳು ಬರುತ್ತದೆ ಎಂದು ಅದರಲ್ಲಿ 40 ಕೋಟಿ ರೂಪಾಯಿಗಳನ್ನು ಈ ಸಣ್ಣ ನೀರಾವರಿ ಕೆಲಸಗಳಿಗೆ ಖರ್ಚು ಮಾಡುತ್ತೇವೆಂದು ಹೇಳಿದರು. ಈ ರೀತಿ ಸುಮ್ಮನೆ ಬಾಯಿನಲ್ಲಿ ಮಾತ್ರ ಹೇಳಿ ಕಾರ್ಯತಃ ರೈತನಿಗೆ ಬೇಕಾದ ಸೌಲಭ್ಯಗಳನ್ನು ಸರ್ಕಾರದವರು ಒದಗಿಸಿ ಕೊಡದೆ ಹೋದರೆ ಏನು ಪ್ರಯೋಜನ ನಾನಾದರೂ ಸರ್ಕಾರದವರನ್ನು ಕೇಳುತ್ತೇನೆ, ರೈತನಿಗೆ ನೀವು ಏನು ಸೌಲಭ್ಯವನ್ನ ಒದಗಿಸಿ ಕೊಟ್ಟಿದ್ದೀರಿ ಎಂದು ಯೋಜನೆಗಳಿಗೋಸ್ಕರ 250 ಕೋಟಿ 500 ಕೋಟಿ 600 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತೇವೆಂದು ಪತ್ರಿಕೆಯಲ್ಲಿ ಪ್ರಕಟಿಸಿರುತ್ತಾರೆ. ಆದರೆ ಆ ಯೋಜಗಳನ ನಮ್ಮ ದೇಶದಲ್ಲಿ ಕಾರ್ಯಗತ ಮಾಡತಕ್ಕ ರೀತಿಯೇ ಬೇರೆಯಾಗಿದೆ. ಈ ಯೋಜನೆಗಳನ್ನು ಸರ್ಕಾರದವರು ಸರಿಯಾದ ರೀತಿಯಲ್ಲಿ ಕಾರ್ಯಗತ ಮಾಡಿದರೆ ನಿಜವಾಗಿಯೂ ನಮ್ಮ ದೇಶ ಉದ್ಧಾರವಾಗುತ್ತದೆ. ಈಗ ನಮ್ಮ ದೇಶದಲ್ಲಿ ಎನ್.ಇ.ಎಸ್. ಸ್ಕೀಮು ಇದೆ, ತಾಲ್ಲೂಕ್ ಬೋರ್ಡ್ ಇದೆ, ಡಿಸ್ಟ್ರಿಕ್ಟ್ ಕೌನ್ಸಿಲ್ ಇದೆ. ಈ ಸಂಸ್ಥೆಗಳೆಲ್ಲವೂ ಕೂಡ ರೈತನಿಗೆ ಎಷ್ಟರ ಮಟ್ಟಿಗೆ ಸೌಲಭ್ಯ ಒದಗಿಸುತ್ತಿವೆ ಎಂದು ನಾನು ಕೇಳುತ್ತೇನೆ. ಈಗ ಎನ್.ಇ.ಎಸ್. ಸ್ಕೀಮ್ ನಲ್ಲಿ ಸೀಡ್ ಫಾರಂಗಳಲ್ಲಿ ಬೀಜಗಳನ್ನು ಬೆಳೆಯುತ್ತಾರೆ. ಆ ಬೀಜಗಳನ್ನು ಯಾರು ಯಾರಿಗೆ ಕೊಡುತ್ತಾರೋ ನನಗಂತೂ ಗೊತ್ತಿಲ್ಲ. ಈಗ ನಾವುಗಳು ಯಾರಾದರೂ ಯಾವುದಾದರೂ ಒಂದು ಕೆಲಸಕ್ಕೆ ಒಬ್ಬರು ಅಧಿಕಾರಿಗಳನ್ನು ನೋಡುವುದಕ್ಕೆ ಹೋದರೆ ಇವೊತ್ತು ಯಾವುದೋ ಮಿಟಿಂಗ್ ಇದೆ ನಾಳೆ ಬನ್ನಿ ನಾಡಿದ್ದು ಬನ್ನಿ ಎಂದು ಹೇಳುತ್ತಾರೆ. ಇನ್ನೊಂದು ದಿವಸ ಹೋದರೆ ಇವೊತ್ತು ಯಾವುದೋ ಫಂಕ್ಷನ್ ಇದೆ ಇನ್ನೊಂದು ಸಲ ಬನ್ನಿ ಎಂದು ಹೇಳುತ್ತಾರೆ. ಹೀಗೆ ಅವರನ್ನ ನೋಡುವುದಕ್ಕೆ ಅವರ ಹತ್ತಿರ ಹತ್ತಾರು ಸಾರಿ

ತಿರುಗಬೇಕು. ಶಾಸನ ಸಭೆಯ ಸದಸ್ಯರಾದ ನಾವುಗಳು ಕಂಕುಳಲ್ಲಿ ಎರಡು ಪುಸ್ತಕಗಳನ್ನು ಹಿಡಿದು ಕೊಂಡು ಲಾಯರ ಹಾಗೆ ಕೆಲಸಕ್ಕೋಸ್ಕರ ಒಂದು ಆಫೀಸಿಂದ ಇನ್ನೊಂದು ಆಫೀಸಿಗೆ ತಿರುಗಬೇಕು. ಈಗ ನಾವು ಯಾವುದಾದರೂ ಅರ್ಜಿಗಳನ್ನು ಬರೆದುಕೊಂಡು ಮಂತ್ರಿಗಳ ಹತ್ತಿರ ಹೋದರೆ ಅವರು ಆ ಅರ್ಜಿಯ ಮೇಲೆ ಆರ್ಡರನನ್ನೇನೊ ಮಾಡುತ್ತಾರೆ. ಆದರೆ ಆ ಅರ್ಜಿಗಳು ಎಲ್ಲಿ ಹೋಗುತ್ತವೆಯೋ ನಮಗೆ ಗೊತ್ತಿಲ್ಲ ಅವುಗಳಿಗೆ ಗೌರವ ಕೊಡುವುದಿಲ್ಲ. ಈಗ ಉದಾಹರಣೆಗೆ ಹೇಳುವುದಾದರೆ ನಮ್ಮ ಮಾನ್ಯ ಕಂದಾಯ ಮಂತ್ರಿಗಳಾದ ಕೃಷ್ಣಪ್ಪನವರು ಇದ್ದಾರೆ ಅವರ ಹತ್ತಿರ ಯಾವುದಾದರೂ ಜಮೀನು ಕೊಡಬೇಕೆಂದು ಅರ್ಜಿಯನ್ನು ತೆಗೆದು ಕೊಂಡು ಹೋದರೆ ಅದು ರಿಜರ್ವ್ ಲ್ಯಾಂಡ್ ಆಗಿರಲಿ ಗೋಮಾಳ ಆಗಿರಲಿ ಆ ಜಮೀನನ್ನು ಕೊಡಬಹುದು ಎಂದು ಅರ್ಜಿಯಲ್ಲಿ ಬರೆಯುತ್ತಾರೆ. ಆದರೆ ಅದಕ್ಕೆ ಸೆಕ್ರೆಟರಿಯವರು ಗೌರವವನ್ನು ಕೊಡುವುದಿಲ್ಲ. ಆ ರೀತಿ ಮಾಡಬಾರದು. ಆ ರೀತಿ ಅವರು ಬರೆದು ಕೊಟ್ಟ ಅರ್ಜಿಗೆ ಬೆಲೆ ಬರಬೇಕು. ಹಾಗಿಲ್ಲದೆ ಆ ರೀತಿ ಮಾಡಿದರೆ ಸರ್ಕಾರಕ್ಕೆ ಒಂದು ಗೌರವ ಇರುತ್ತದೆಯೆ ಸಣ್ಣ ನೀರಾವರಿ ವಿಷಯದಲ್ಲಿ ಈ ಬಡ್ಜೆಟಿನಲ್ಲಿ ಹೆಚ್ಚು ಗಮನವನ್ನು ಕೊಟ್ಟಿಲ್ಲ. ನೀರಾವರಿ ಸೌಲಭ್ಯವನ್ನು ಒದಗಿಸದೆ ಇದ್ದರೆ ಆಹಾರದ ಉತ್ಪಾದನೆ ಹೇಗೆ ಜಾಸ್ತಿಯಾಗುತ್ತದೆ? ಸುಮ್ಮನೆ ಯೋಜನೆಗಳ ಗೋಸ್ಕರ 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. 300 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ ಎಂದು ಹೇಳಿದರೆ ಏನು ಪ್ರಯೋಜನ ? ಅವು ಏನಿದ್ದರೂ ಪುಸ್ತಕದಲ್ಲಿರುವ ಅಂಕಿ ಅಂಶಗಳು. ನಿಜವಾಗಿ ಎಷ್ಟು ಹಣವನ್ನು ನೀರಾವರಿ ಸೌಲಭ್ಯಕ್ಕೋಸ್ಕರ ಖರ್ಚು ಮಾಡಿದ್ದಾರೆ. ಎಷ್ಟು ಎಕರೆಯಲ್ಲಿ ಬತ್ತವನ್ನು ಬೆಳೆದರು ಎಷ್ಟು ಉತ್ಪತ್ತಿ ಆಯಿತು ಎಷ್ಟು ಜನ ಅನ್ನ ತಿಂದರು ಎಂಬುದನ್ನು ಹೇಳಬೇಕು. ಈಗ ಪ್ರಶ್ನೋತ್ತರ ಕಾಲದಲ್ಲಿ ಕೆಲವು ಪ್ರಶ್ನೆಗಳಿಗೆ ಮಂತ್ರಿಗಳು ಉತ್ತರವನ್ನು ಹೇಳುತ್ತಾರೆ. ಇವರು ಹೇಳತಕ್ಕ ಉತ್ತರವನ್ನು ನೋಡಿದರೆ ಇವರಿಗೆ ನೈತಿಕ ಬೆಂಬಲ ಹೆಚ್ಚು ಇದೆ ಎಂದು ನಾನು ಭಾವಿಸುವುದಿಲ್ಲ. ಈಗ ಯಾವುದಾದರೂ ಒಂದು ಪ್ರದೇಶದಲ್ಲಿ 140 ಎಕರೆ ನೀರಾವರಿ ಆಗಿದ್ದರೆ 1400 ಎಕರೆ ನೀರಾವರಿ ಆಗಿದೆ ಎಂದು ಉತ್ತರವನ್ನು ಹೇಳುತ್ತಾರೆ. ಇವರು ಉತ್ತರವನ್ನೇನೋ ಹೇಳಬಹುದು. ಆದರೆ ಆ ರೀತಿ ತಪ್ಪು ಉತ್ತರವನ್ನು ಹೇಳಿದರೆ ಶಾಸನ ಸಭೆಯ ಸದಸ್ಯರಿಗೂ ಮರ್ಯಾದೆ ಹೋಗುತ್ತದೆ. ಮಂತ್ರಿಗಳಿಗೂ ಮರ್ಯಾದೆ ಹೋಗುತ್ತದೆ.

ಇನ್ನೊಂದು ವಿಚಾರ ಹೇಳುತ್ತೇನೆ. ಈಗ ನಮ್ಮ ಹಣಕಾಸಿನ ಸಚಿವರು ಇದ್ದಾರೆ. ಇವರು ಯಾವುದಾದರೂ ಒಂದು ಸಮಾರಂಭಕ್ಕೆ ಜಮಖಂಡಿಗೋ ಅಥವಾ ಚಿತ್ರದುರ್ಗಕ್ಕೋ ಹೋದರೆ ಅಲ್ಲಿ ಜನಗಳು ಇವರಿಗೆ ಹಾರವನ್ನು ಹಾಕುವುದು ಸ್ವಾಭಾವಿಕ. ಆ ಟೈಮಿನಲ್ಲಿ ಇವರು ದೊಡ್ಡ ಹಾರವನ್ನು ಹಾಕಿಸಿಕೊಂಡು ಜನಗಳಿಗೆ ಏನಾದರೂ ಕೆಲಸಗಳನ್ನು ಮಾಡಿಸಿಕೊಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟು ಮನೆಗೆ ಬರುತ್ತಾರೆ. ಆ ಆಶ್ವಾಸನೆಗಳನ್ನು ನೆರವೇರಿಸಿ ಕೊಡಬೇಕೆಂದು ಜನಗಳು ಕೇಳುತ್ತಾರೆ. ಆ ಆಶ್ವಾಸನೆಗಳನ್ನು ನೆರವೇರಿಸಿ ಕೊಡದಿದ್ದರೆ ಏನು ಪ್ರಯೋಜನ? ಈ ವಿಷಯದಲ್ಲಿ ನಾನು ಹೇಳುವುದೇನೆಂದರೆ ಮಂತ್ರಿಗಳು ಜನಗಳಿಗೆ ಕೊಟ್ಟಂತಹ ಆಶ್ವಾಸನೆಯನ್ನು ಈಡೇರಿಸಿ ಕೊಟ್ಟು ಗೌರವದಿಂದ ಬಾಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದರ ಮೇಲೆ ಇನ್ನು ಪಂಚಾಯಿತಿ ರಾಜ್ಯದ ಮಸೂದೆ ಮಾಡುವಾಗ, ನಮ್ಮ ಮಾನ್ಯ ಮಂತ್ರಿಗಳಿಗೆ ಅದೇನೋ ತ್ರಿ-ಟಯರ್ ಮೇಲೆ ಅಭಿಲಾಷೆ ಬಂದಿದೆ; ಟು-ಟಯರಿಗೆ ಅವರು ಒಪ್ಪುವುದಿಲ್ಲ. ಈಗ tyre ಬೆಲೆ ಬಹಳ ಜಾಸ್ತಿಯಾಗಿದೆ ದಯವಿಟ್ಟು ಈ ತ್ರಿ-ಟಯರ್ ಮುಂದಕ್ಕೆ ಹಾಕಿಬಿಡಿ. ಅಧಿಕಾರ ವಿಕೇಂದ್ರಿಕರಣ ಮಾಡಬೇಕೆಂಬುದು ಎಲ್ಲರ ಆಸೆ. ಆದರೆ ವಿಕೇಂದ್ರಿಕರಣ ಏಕೆ ನೀವು ಮಾಡುವುದಿಲ್ಲ ? ಎಷ್ಟೋ ಪಂಚಾಯಿತಿಗಳೊಳಗೆ, ಇನ್ನೂ ರೆಸಲೂಷನ್ನೇ ಮಾಡಿಲ್ಲ; ಮೊದಲನೆ ಪಂಚಾಯಿತಿ ಮೀಟಿಂಗೇ ಸೇರಿಲ್ಲ. ಈವಾಗ ಕೋರ್ಟು ಕಚೇರಿ ಹತ್ತಿ ಪರದಾಡುತ್ತಿದ್ದಾರೆ. ನಿಮ್ಮಲ್ಲಿ ಹಣವಿಲ್ಲದೆ ಇರುವಾಗ ಚೆರ್ಮನ್ 5 ಸಾವಿರ ರೂಪಾಯಿ, ತಾಲ್ಲೂಕು ಬೋರ್ಡು 50 ಸಾವಿರ ರೂಪಾಯಿವರೆಗೆ ಖರ್ಚು ಮಾಡಬಹುದು ಎಂದು ಹೇಗೆ ಹೇಳುತ್ತೀರಿ ? ಹಣವೆಲ್ಲದೆ ?

† ಶ್ರೀ ಜಿ. ಮಾದೇಗೌಡ (ಮಳವಳ್ಳಿ).—ಸನ್ಮಾನ್ಯ ಅಧ್ಯಕ್ಷರೆ, 1965-66ನೇ ಸಾಲಿನ ಆಯವ್ಯಯ ಪಟ್ಟಿಯನ್ನು ನಾನು ಸ್ವಾಗತಿಸುತ್ತಾ, ನಾಲ್ಕಾರು ಅಭಿಪ್ರಾಯಗಳನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಇಚ್ಛೆ ಪಡುತ್ತೇನೆ.

ಶ್ರೀಮಾನ್ ಜತ್ತಿಯವರು ಒಂದನೇ ತಾರೀಖು ಮಂಡಿಸಿದಂಥ ಆಯವ್ಯಯ ಪಟ್ಟಿಯಲ್ಲಿ 4 ಕೋಟಿ ರೂಪಾಯಿ ಖೋತಾ ಬಜೆಟ್ಟನ್ನು ತೋರಿಸಿ, ಆ ಖೋತಾವನ್ನು ಹೇಗೆ ಸರಿತೂಗಿಸಬೇಕು ಅನ್ನತಕ್ಕಂಥ ಮಾತನ್ನು ಕೂಡ ನಿರೂಪಣೆ ಮಾಡಿದ್ದಾರೆ. ಅವರು ಖೋತಾವನ್ನು ಸರ್ವೆಸೆಟಲ್ ಮೆಂಟ್ ಮಾಡಿ, ಈಗಿರತಕ್ಕಂಥ ಕಾಲದಲ್ಲಿ ಕಂದಾಯವನ್ನು ಪುನರ್ವಿಮರ್ಶೆ ಮಾಡತಕ್ಕದು, ವಿದ್ಯುಚ್ಛಕ್ತಿ ದರಗಳನ್ನು ಜಾಸ್ತಿ ಮಾಡತಕ್ಕಂಥಾದ್ದು ಕೇಂದ್ರದಿಂದ ಬರತಕ್ಕಂಥ ನೆರವಿನಿಂದ ಈ ಖೋತಾವನ್ನು ಭರ್ತಿಮಾಡಿಕೊಳ್ಳುವುದು ಎಂಬ

(ಶ್ರೀ ಜಿ. ಮಾದೇಗೌಡ)

ಆಸೆಯನ್ನು ಅವರು ವ್ಯಕ್ತಪಡಿಸಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯದ ರೆವಿನ್ಯು ಸಚಿವರಾದ ಶ್ರೀ ಕೃಷ್ಣಪ್ಪನವರು ಸರ್ವೆಸೆಟಲ್‌ಮೆಂಟ್ ವರದಿಯನ್ನು ಮಾನ್ಯ ಸಭೆಯ ಮುಂದೆ ಮಂಡಿಸುತ್ತಾ, ಅನಿವಾರ್ಯವಾಗಿ ಕಂದಾಯವನ್ನು ಹೆಚ್ಚಿಸಬೇಕಾಗಿದೆ, ನಾವು ಕೇಂದ್ರಕ್ಕೆ ಆಶ್ವಾಸನೆ ಕೊಟ್ಟಿದ್ದೇವೆ; ಈ ಮುಖಾಂತರವಾಗಿ ದೇಶದ ಬಜೆಟ್ಟಿನಲ್ಲಿ ಏನು ಖೋತವಿದೆ ಅದನ್ನು ಸರಿಮಾಡಿ ಕೊಳ್ಳಬೇಕು, 1947ರ ಹಿಂದೆ ರಾಜ್ಯದ ಆಯವ್ಯಯ 5 ಕೋಟಿ ರೂಪಾಯಿ ಇದ್ದದ್ದು, ಇವತ್ತು 125ಕೋಟಿ ರೂಪಾಯಿಗೆ ಏರಿದೆ, ಅನೇಕ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡಿದ್ದೇವೆ ಎಂದು ಮಾನ್ಯ ಕೃಷ್ಣಪ್ಪನವರು ವರದಿ ಒಪ್ಪಿಸಿದ ಸಂದರ್ಭದಲ್ಲಿ ಹೇಳಿದರು. ಇದು ನಿಜ. ಈ ದೇಶದ ಆಯವ್ಯಯ 5 ಕೋಟಿ ರೂಪಾಯಿ ಇದ್ದಂಥಾದ್ದು, ಈಗ 125 ಕೋಟಿ ರೂಪಾಯಿಗಳಿಗೆ ಏರಿದೆ. ಪ್ರತಿವರ್ಷವೂ ಕೂಡ ತೆರಿಗೆ ರೂಪದಲ್ಲಿ, ಕಂದಾಯದ ರೂಪದಲ್ಲಿ ಜನತೆಯ ಎಲ್ಲ ವರ್ಗದ ಮೇಲೂ ಕಂದಾಯವನ್ನೂ, ತೆರಿಗೆಯನ್ನ ನಾವು ವಿಧಿಸಿದ್ದೇವೆ. ಈ ಮುಖಾಂತರ ರಾಜ್ಯದ ಬೊಕ್ಕಸಕ್ಕೆ ಬರತಕ್ಕ 125 ಕೋಟಿ ರೂಪಾಯಿಗಳನ್ನು ಅನೇಕ ಯೋಜನೆಗಳ ಮೂಲಕ ಖರ್ಚು ಮಾಡಿರ ತಕ್ಕಂಥಾದ್ದು ನಿಜ. ಆದರೂ ಕೂಡ ಈ ಕಂದಾಯ ಪುನರ್ವಿಮರ್ಶೆ ಕಾಲದಲ್ಲಿ ಒಂದು ಮಾತನ್ನು ನಾನು ಖಚಿತವಾಗಿ ತರಬೇಕೆಂದು ಬಯಸುತ್ತೇನೆ. ಶ್ರೀಮಾನ್ ಜತ್ತಿಯವರು ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸತಕ್ಕಂಥ ಕೆಲವು ಸಲಹೆಗಳನ್ನು ಮುಂದೆ ಕೊಟ್ಟಿದ್ದಾರೆ. ನಾನು ವಿದ್ಯಾರ್ಥಿ ದೆಶೆಯಲ್ಲಿದ್ದಾಗ ಈ ಮಾನ್ಯ ಸಭೆಯ ವಿಸಿಟರ್ಸ್ ಗ್ಯಾಲರಿಯಲ್ಲಿ ಕುಳಿತು ಭಾಷಣ ಕೇಳುವ ಅಭಿಲಾಷೆ ಇತ್ತು. ಸರ್ಕಾರದವರು ಕೊಟ್ಟಂತೆ ಮಾನ್ಯ ಸದಸ್ಯರೂ ಅನೇಕ ಸಲಹೆಗಳನ್ನು ಕೊಡುತ್ತಲೇ ಬಂದಿದ್ದಾರೆ. ನಾವು ಯಾವ ದೆಶೆಯಲ್ಲಿ ಆಡಳಿತವನ್ನು ನಡೆಸುತ್ತಿದ್ದೇವೆಂದರೆ, ಕೆಲಸ ವಿಲ್ಲದೆ ಇರತಕ್ಕ ಇಲಾಖೆಗಳು ಅನೇಕವಿವೆ. ಬಡ ಬೋರೆಗೌಡನಿಂದ ತೆರಿಗೆ ರೂಪದಲ್ಲಿ ವಸೂಲು ಮಾಡಿದ ಹಣವನ್ನು ಸರಿಯಾಗಿ ಉಪಯೋಗಿಸುತ್ತಾ ಇಲ್ಲ. ಈ ಇಲಾಖೆಗಳ ಪುನರ್ವ್ಯವಸ್ಥೆಯಾಗ ಬೇಕು ಎಂದು ಹೇಳಿ ಈ ಒಂದು ವೇದಿಕೆಯಿಂದ ಅನೇಕ ಸಾರಿ ಚರ್ಚೆಯಾಗಿದೆ. ಉದಾಹರಣೆಗೆ ಹೇಳುವುದಾದರೆ, ಆಡಲ್ಟ್ ಎಜುಕೇಶನ್ ಕೌನ್ಸಿಲ್ ಏನಿದೆ, ಅದು ಹೋಗಬೇಕು. ದೇಶದ ಹಣ ವನ್ನು ಅನ್ಯಾಯವಾಗಿ, ನಿಷ್ಪ್ರಯೋಜಕವಾಗಿ ಖರ್ಚು ಮಾಡುತ್ತಿದ್ದೇವೆ. ಇದನ್ನು ತೆಗೆದುಹಾಕ ಬೇಕು ಎಂಬುದಾಗಿ ಈ ಮಾನ್ಯ ಸಭೆಯಲ್ಲಿ ಚರ್ಚೆ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಅಷ್ಟೇ ಅಲ್ಲದೆ ಈ ಸಬ್ ಡಿವಿಜನ್ ಇಲಾಖೆ ಏನಿದೆ, ಈ ಡಿವಿಜನ್ ಏನಿದೆ, ಇವು ಪೋಸ್ಟ್-ಆಫೀಸ್ ರೀತಿ ಯಲ್ಲಿ ಕೆಲಸ ಮಾಡುತ್ತಿರತಕ್ಕ ಇಲಾಖೆಗಳು ಅವುಗಳಿಂದ ಕೆಲಸಕಾರ್ಯಗಳು ವಿಳಂಬವಾಗುವುದಕ್ಕೆ ಕಾರಣವಾಗುತ್ತದೆಯೇ ವಿನಾ ಏನೂ ಪ್ರಯೋಜನವಾಗುವುದಿಲ್ಲ. ಈ ಇಲಾಖೆಗಳನ್ನು ತೆಗೆದು ಹಾಕಬೇಕು ಇದರಿಂದ ದೇಶದ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಸುಧಾರಿಸುತ್ತದೆ ಅನ್ನುವ ಮಾತು ಅನೇಕ ಸಂದರ್ಭದಲ್ಲಿ ಈ ಸಭೆಯಲ್ಲಿ ಚರ್ಚೆಯಾಗಿದೆ. ಅದೂ ಅಲ್ಲದೆ ಶ್ರೀಮಾನ್ ಜತ್ತಿಯವರು ಹೇಳಿದ್ದಾರೆ. 20ರಿಂದ-30 ಪರ್ಸೆಂಟ್‌ವರೆಗೆ ನಾವು ಆಡಳಿತದ ಸಿಬ್ಬಂದಿಯನ್ನು ಖೋತಾ ಮಾಡುವುದರ ಮುಖಾಂತರ ದೇಶದ ಹಣಕಾಸಿನ ಪರಿಸ್ಥಿತಿ ಸ್ವಲ್ಪ ಸುಧಾರಿಸಬಹುದು ಎಂದು ಮತ್ತು ನಿಷ್ಠೆಯಿಂದ ಮತ್ತು ದಕ್ಷತೆಯಿಂದ ಕೆಲಸ ಮಾಡುವುದರ ಮುಖಾಂತರ ದೇಶದ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಬಹುದು ಎಂಬ ಮಾತನ್ನು ಹೇಳಿದ್ದಾರೆ.

ನಾನು ಇಷ್ಟು ಹೇಳುತ್ತಾ, ನಾವು ಏನು ಜನಗಳಿಂದ ಕಂದಾಯ ದ ರೂಪದಲ್ಲಿ, ತೆ ರಿಗೆರೂಪದಲ್ಲಿ ಹಣವನ್ನು ವಸೂಲು ಮಾಡುತ್ತಾ ಇದ್ದೇವೆ. ನಾವು ಯೋಜನೆಯನ್ನು ಹಾಕುವುದರಿಂದ ಏನು ಹಣವನ್ನು ಖರ್ಚು ಮಾಡುತ್ತೇವೆ ಅದರಿಂದ ಸರಿಯಾದ ಪ್ರತಿಫಲವನ್ನು ಪಡೆಯಬೇಕು. ಉದಾ ಹರಣೆಗೆ ಹೇಳುವುದಾದರೆ, ಕೋಟ್ಯಾಂತರ ರೂಪಾಯಿಗಳನ್ನ ಖರ್ಚುಮಾಡಿ ಅನೇಕ ನೀರಾವರಿ ಕೆಲಸಗಳನ್ನು, ಅನೇಕ ಕಟ್ಟೆಗಳನ್ನೂ ಕಟ್ಟಿದ್ದೇವೆ. ಆದರೂ ಇವತ್ತು ಕೂಡ ಆ ಕಟ್ಟೆಯಿಂದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ತುಂಗಭದ್ರ, ಅಣೆಕಟ್ಟಿಗೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿದ್ದರೂ, ಅಲ್ಲಿಯ ಪ್ರದೇಶದ ಜನಗಳಿಗೆ ನೀರನ್ನು ಒದಗಿಸಿ ಪ್ರತಿಫಲ ಪಡೆಯುವುದಕ್ಕೆ ಸಾಧ್ಯವಾಗಿಲ್ಲವೆಂದು ಈ ವಿಧಾನಸಭೆಯಲ್ಲಿ ಅನೇಕ ಸಂದರ್ಭಗಳಲ್ಲಿ ಚರ್ಚೆಯಾಗಿದೆ. ಹಾಗೆಯೇ ಶಾಲೆಗಳ ಮೇಲೆ ಹಣವನ್ನು ಖರ್ಚುಮಾಡಿದ್ದೇವೆ. ಇಂಥ ಸಂದರ್ಭ ದಲ್ಲಿ ನಾವು ಏನು ಒಂದು ಯೋಜನೆಗೆ ಹಣವನ್ನು ಹಾಕುತ್ತೇವೆ, ಆ ಹಣ ಸರಿಯಾಗಿ ವಿನಿಯೋಗ ವಾಗಬೇಕು, ಅದನ್ನು ನಡೆಸತಕ್ಕ ಅಧಿಕಾರವರ್ಗ ದಕ್ಷತೆಯಿಂದ ಕೆಲಸ ಮಾಡಬೇಕು, ಇದಕ್ಕೆ ಆಡಳಿತದ ಒಂದು ಸುಧಾರಣೆಯಾಗಬೇಕು ಅನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ನಾನು ಹೇಳಬೇಕಾಗುತ್ತದೆ.

ಮತ್ತೆ ನೀರಾವರಿ ವಿಷಯದಲ್ಲಿ ಕಳೆದ ಸಭೆಯಲ್ಲಿ ಇರ್ರಿಗೇಷನ್ ಮಸೂದೆಯನ್ನು ಈ ಮಾನ್ಯ ಸಭೆ ಅಂಗೀಕರಿಸಿತು. ಆ ಸಂದರ್ಭದಲ್ಲಿ, ನೀರಿಗೆ ಏನೊಂದು ಕಂದಾಯವನ್ನು ಕೊಡುತ್ತಾ ಇದ್ದೇವೆ ಅದನ್ನು ಜಾಸ್ತಿ ಮಾಡಲು ಒಪ್ಪಿಗೆ ಕೊಟ್ಟಿದ್ದೇವೆ. ಆದರೆ ನನಗೆ ಆಶ್ಚರ್ಯವಾಯಿತು. ಅದಕ್ಕೆ ಒಂದು ಸಾರಿ P. W. D. ಯಿಂದ ಒಂದು Preliminary Gazettee Notification ಹೊರಟಿದೆ. ಅದರಲ್ಲಿ ನೋಡಿದರೆ ಒಂದು ಎಕರೆಗೆ 70 ರೂಪಾಯಿ water-rate ನಿಗದಿ ಮಾಡಿದ್ದಾರೆ. ಈ preliminary gazette notification ನೋಡಿ ಆಶ್ಚರ್ಯವೂ ಆಯಿತು, ದಿಗಿಲೂ ಆಯಿತು. ಏತಕ್ಕೆಂದರೆ ಇಡೀ ದೇಶದಲ್ಲಿ ಎಂದೆಂದಿಗೂ ಆಗದೆ ಇರತಕ್ಕಂಥಾ ದರವನ್ನು ನೋಡಿ ಆಶ್ಚರ್ಯವಾಯಿತು. ಇವತ್ತಿನ ದಿವಸ ವಾಟರ್-ರೇಟ್ ಏನಿದೆ ಅದನ್ನು 10 ರೂಪಾಯಿಗೆ ನಿಗದಿಮಾಡಿದೆ, ಮತ್ತು ಅದನ್ನು ಕೊಡುತ್ತಾ ಇದ್ದೇವೆ. ಡಬಲ್ ಮಾಡಬಹುದು ಎಮರ್ಜನ್ಸಿ ದೃಷ್ಟಿಯಿಂದ ಅದು ಬಿಟ್ಟು ಹಾಗೆ ಮಾಡಿದರೆ, ದೇಶದಲ್ಲಿ ಆಂದೋಳನವಾದೀತು. ಈ ಸಂದರ್ಭದಲ್ಲಿ 70 ರೂಪಾಯಿ ನಿಗದಿ ಮಾಡಿದ್ದಾರೆ. ಟ್ಯಾಕ್ಸ್, ಸರ್‌ಚಾರ್ಜ್, ಮೇಂಟೆನೆನ್ಸ್ ಚಾರ್ಜ್ ಎಲ್ಲಾ ಸೇರಿಕೊಂಡು ಸುಮಾರು 105–110 ರೂಪಾಯಿ ನವರೆಗೆ ಒಂದು ಎಕರಗೆ ಇಲ್ಲಿರತಕ್ಕಂಥಾದ್ದನ್ನು ವ್ಯವಸಾಯಗಾರರು ಸರ್ಕಾರಕ್ಕೆ ಕೊಡಬೇಕು ಅನ್ನುವ ಕಾಲದಲ್ಲಿ ರೈತನ ಚಿತ್ರವನ್ನು ತಾವೆಲ್ಲರೂ ಗಮನಿಸಬೇಕೆಂದು ಹೇಳುತ್ತೇನೆ. ಶ್ರೀಮತಿ ನಾಗರತ್ನಮ್ಮನವರು ಮೊನ್ನೆ ಮಾತನಾಡುತ್ತಾ ರೈತನ ಸ್ಥಿತಿಯನ್ನು ಚೆನ್ನಾಗಿ ವರ್ಣಿಸಿದರು. ಇವತ್ತಿನ ದಿವಸ ನಮ್ಮ ದೇಶದ ರೈತನ ಸ್ಥಿತಿ ಹೇಗಿದೆಯೆಂದರೆ, ಅವನ ತಲೆಯ ಮೇಲೆ ಏನೂ ಹಾಕಿಕೊಳ್ಳುವ ಸ್ಥಿತಿಯಿಲ್ಲಲ್ಲ, ಚೆನ್ನಾಗಿ ಬಟ್ಟೆ ಹಾಕಿಕೊಳ್ಳುವ ಸ್ಥಿತಿಯಿಲ್ಲಲ್ಲ, ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸತಕ್ಕ ಸ್ಥಿತಿಯಿಲ್ಲಲ್ಲ. ರೈತ ಹೊಟ್ಟೆ ಬಟ್ಟೆಗೋಸ್ಕರ ವ್ಯವಸಾಯ ಮಾಡುತ್ತ ಇದ್ದಾನೆ, ವ್ಯಾಪಾರಕ್ಕೋಸ್ಕರ ಮಾಡುತ್ತಾನೆ, ಚೆನ್ನಾಗಿ ಸಂಪಾದನೆ ಮಾಡುವುದಕ್ಕೆ ಮಾಡುತ್ತಾನೆಂದು ಸರ್ಕಾರವೇ ಆಗಲಿ, ಯಾರೇ ಆಗಲಿ ತಿಳಿದುಕೊಂಡಿದ್ದರೆ ತಪ್ಪಾಗುತ್ತದೆಂದು ಈ ಮಾನ್ಯ ಸಭೆಗೆ ಹೇಳುತ್ತೇನೆ. ಮುಖ್ಯವಾಗಿ ಇಲ್ಲಿ ವಾಟರ್-ರೇಟನ್ನು ವಿಧಿಸತಕ್ಕ ಸಂದರ್ಭದಲ್ಲಿ ಕೆಲವು ವಿಷಯಗಳನ್ನು ಹೇಳಿದ್ದಾರೆ. 10 ತಿಂಗಳಿಂದ 12 ತಿಂಗಳವರೆಗೆ ನೀರನ್ನು ತೆಗೆದುಕೊಳ್ಳತಕ್ಕ ಜಮೀನುಗಳಿಗೆ ಒಂದು ರೇಟನ್ನು ನಿಗದಿ ಮಾಡಿದ್ದಾರೆ, 3ರಿಂದ 9 ತಿಂಗಳವರೆಗೆ ನೀರನ್ನು ತೆಗೆದು ಕೊಳ್ಳತಕ್ಕಂಥ ರೈತರಿಗೆ ಒಂದು ರೇಟನ್ನು ನಿಗದಿ ಮಾಡಿದ್ದಾರೆ.

6-00 P.M.

ಇದೇ ಪ್ರಕಾರ ಬೆಟರುಮೆಂಟು ಫೀ ಕೊಡಬೇಕೆಂದು ಒಂದು ವರ್ಷಕ್ಕೆ ಒಂದು ರೀತಿಯಾದ ರೇಟನ್ನು ನಿಗದಿ ಮಾಡಿದ್ದಾರೆ. ಇಂತಹ ರೈತರ ಮೇಲೆ ಇನ್ನೂ ಹೆಚ್ಚು ಹೊರೆಯನ್ನು ಹಾಕಬೇಕೆಂದು ಕಂದಾಯವನ್ನು ಏರಿಸುವುದು ಯಾವ ನ್ಯಾಯ ? ಸಾಮಾನ್ಯವಾಗಿ ಮನುಷ್ಯನಿಗೆ ಬೇಕಾಗಿರುವ ಮಳೆ, ನೀರು ಹಾಗೂ ಬೆಳಕು ಇವೆಲ್ಲಾ ಸುಖರಾಜ್ಯದಲ್ಲಿ ಸಿಗಬೇಕೆಂದು ನಾವೆಲ್ಲರೂ ಹೇಳುತ್ತಲೇ ಇದ್ದೇವೆ. ನೀರನ್ನುಪಯೋಗಿಸಿಕೊಳ್ಳಬೇಕೆಂದು ಕೋಟ್ಯಾಂತರಗಳಷ್ಟು ಹಣವನ್ನು ಕೊಟ್ಟು ಕೆರೆಕಟ್ಟೆಗಳನ್ನು ಕಟ್ಟಿ ಅದರಿಂದ ವ್ಯವಸಾಯ ಮಾಡಲು ಜನಕ್ಕೆ ಸಹಾಯ ಮಾಡುತ್ತಿದ್ದಾರೆ. ಹಾಗೆ ನೀರಿನ ಆಶ್ರಯ ಪಡೆದವರು ಮತ್ತು ವ್ಯವಸಾಯ ಮಾಡುವವರನ್ನು ಹಾಗೇ ಬಿಟ್ಟು ಬಿಡಬೇಕು ಎನ್ನುವುದು ನನ್ನ ವಾದವಲ್ಲ. ಯಾವಾಗ ಒಂದು ಡ್ಯಾಂ ಎಂದು ಕಟ್ಟುತ್ತಾರೋ ಅದಕ್ಕೆ ಇಷ್ಟು ಕಾಂಟ್ರಿಬ್ಯೂಷನ್ನು ಕೊಡಬೇಕೆಂದು ಇದೆ, ಅದನ್ನು ಕೊಡುತ್ತಾರೆ. ಯಾವ ಪ್ರಾಜೆಕ್ಟಿನಲ್ಲಾದರೂ ಕಾಂಟ್ರಿಬ್ಯೂಷನ್ನು ಕೊಡುವುದರ ಜೊತೆಗೆ ವಾಟರು ರೇಟು 10-15 ರೂಪಾಯಿಗಳಷ್ಟು ಕೊಡಬೇಕೆಂದು ನಿಗದಿ ಮಾಡಿರುತ್ತಾರೆ. ಅದನ್ನೂ ರೈತರು ಕೊಡುತ್ತಿದ್ದಾರೆ ಎನ್ನುವುದನ್ನು ಮರೆಯಬಾರದು. ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳತಕ್ಕ ಈ ಕಾಲದಲ್ಲಿ ನಾವು ಒಂದು ನಿಗದಿಯಾದ ರೂಪದಲ್ಲಿ ರೈತನಿಗೆ ಕೊಡಲು ಶಕ್ತಿ ಇದೆಯೋ ಎನ್ನುವುದನ್ನು ಅರಿತುಕೊಂಡು ನಾವು ಯಾವಾಗಲೂ ಕಂದಾಯವನ್ನು ನಿಗದಿ ಮಾಡಬೇಕು. ಈಗ ರೈತ ವ್ಯವಸಾಯವನ್ನೇ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಕಂದಾಯವನ್ನು ಇನ್ನೂ ಹೆಚ್ಚು ಮಾಡಬೇಕೆಂದು ಈಗ ಮಾಡುತ್ತಿರುವುದನ್ನು ಸರಕಾರ ಪುನರ್‌ವಿಮರ್ಶೆ ಮಾಡಿ ಎಲ್ಲಿ ಅನಾವಶ್ಯಕವಾಗಿ ಖರ್ಚುಗಳು ಹೆಚ್ಚಾಗುತ್ತಿವೆಯೋ ಅವನ್ನೆಲ್ಲಾ ತೆಗೆಯಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ. ಈಗ ಕಂದಾಯಗಳನ್ನೇ ಕೊಡದೆ ತಪ್ಪಿಸಿಕೊಳ್ಳತಕ್ಕ ಜನ ಬಹಳ ಇದ್ದಾರೆ. ಅಂತಹವರನ್ನೆಲ್ಲಾ ಪತ್ತೆ ಹಚ್ಚಿದರೆ ಇನ್ನೂ ಹೆಚ್ಚು ವರಮಾನ ಸರಕಾರಕ್ಕೆ ಬರುತ್ತದೆ. ಅಲ್ಲದೆ ಕೆಲವು ಇಲಾಖೆಗಳಲ್ಲಿ ಆಗುತ್ತಿರುವ ಖರ್ಚುಗಳನ್ನು ಶೇಕಡಾ 30ರಿಂದ 50ರಷ್ಟು ಕಡಿಮೆ ಮಾಡಬಹುದು. ಇದರ ಬಗ್ಗೆ ಸರಕಾರದವರು ತಕ್ಕ ಗಮನಕೊಟ್ಟು ಇದನ್ನು ವರ್ಕ್‌ಔಟ್ ಮಾಡಬೇಕೆಂದು ಹೇಳುತ್ತೇನೆ. ಈಗ ಕಂದಾಯ ಹೆಚ್ಚು ಮಾಡಬೇಕೆಂದು ತಂದಿರುವುದನ್ನು ಪುನರ್

(ಶ್ರೀ ಬಿ. ಮಾದೇಗೌಡ)

ವಿಮರ್ಶೆ ಮಾಡಬೇಕು, ಹಾಗಿಲ್ಲದೆ ಕಂದಾಯದ ಹೊರೆಯನ್ನು ಹೆಚ್ಚು ಮಾಡಬೇಕೆಂದು ರೈತರ ಮೇಲೆ ಹೊರಿಸಿದರೆ ಅವನು ಹೊರಲಕ್ಕೆ ಸಾಧ್ಯವಾಗುವುದಿಲ್ಲ, ಇದನ್ನು ಪುನರ್ವಿಮರ್ಶೆ ಮಾಡಬೇಕು ಇಷ್ಟು ಹೇಳಿ ನನಗೆ ಮಾತಾಡಲು ಅವಕಾಶಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. SPEAKER.—Tomorrow the reply will begin.

(Sri Sanjeevanath Aikala rose to speak)

Mr. SPEAKER.—I have no objection if the House wants to sit for half an hour more.

HON'BLE MEMBERS.—No.

Sri SANJEEVANATH AIKALA.—Yesterday itself I submitted that I want to speak. My name was also sent.

Mr. SPEAKER.—I get lists which are inconsistent. One superseeding the other and inconsistent. There is no consistency in the requests. Party Members over the heads of whips send me slips. How am I to reconcile the irreconcilable ?

And I see Sri Gopala Salenna also now.

Sri GOPALA SALENNA (Mudabidri).—My name was in the list, Sir.

Mr. SPEAKER.—Giving the list does not mean that I can change the hours of the day. I will give you a chance on the Demands.

The House will now rise and reassemble at 12 noon tomorrow.

---

*The House adjourned at Five Minutes past Six of the Clock to meet again at Twelve noon on Wednesday, the 10th March 1965.*

---

WD 4629 GPB -500--24-6-1965